ಮಾನಸಿ

ತಿಂಗಳ ಪತ್ರಿಕೆ

ಫೆಬ್ರವರಿ - ಮಾರ್ಚ್ : 1998

ವಿಶೇಷ ಸಂಚಿಕೆ

- ✔ ಪ್ರಮುಖ ಪಕ್ಷಗಳ ಚುನಾವಣಾ ಪ್ರಣಾಳಿಕೆಗಳು - ಒಂದು ವಿಶ್ಲೇಷಣೆ
- ✔ ಪ್ರಸಕ್ತ ಚುನಾವಣೆ - ಒಂದು ನೋಟ
- ✔ ಚುನಾವಣಾ ರಾಜಕೀಯ - ಮಹಿಳಾ ಸಂಘಟನೆಗಳ, ವ್ಯಕ್ತಿಗಳ ಅಭಿಪ್ರಾಯಗಳು
- ✔ ಚುನಾವಣೆ ೧೯೯೮ರ ಮಹಿಳೆಯರ ಬೇಡಿಕೆಗಳು
- ✔ ಜರ್ಮನ್ 'ಗ್ರೀನ್' ಪಕ್ಷದ ಪೆಟ್ರಾ ಕೆಲ್ಲಿಯವರ ವಿಡಿಯೊ ಸಂದರ್ಶನದ ಲಿಖಿತ ರೂಪ

ಮಾನಸ

ತಿಂಗಳ ಪತ್ರಿಕೆ

ಸಂಪುಟ : 13 ಸಂಚಿಕೆ : 2

ಫೆಬ್ರವರಿ - ಮಾರ್ಚ್ : 1998

ವಿಶೇಷ ಸಂಚಿಕೆ

ವಿಳಾಸ :

"ಮಾನಸ" ತಿಂಗಳ ಪತ್ರಿಕೆ

ಪಂಚಾಯಿತಿ ರಸ್ತೆ

ಕಾಡುಗೋಡಿ ಪೋಸ್ಟ್

ಬೆಂಗಳೂರು - 560 067

ಸೂಚನೆ : ಬಿಡಿ ಪ್ರತಿ 3-00 ರೂ.

ವಾರ್ಷಿಕ ಚಂದಾ 40-00 ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ

ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ....

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ

ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭

ಸಂಪಾದಕೀಯ



ಭಾರತದಲ್ಲಿ ಪ್ರಜಾಪ್ರಭುತ್ವ, ಜನತಾಂತ್ರಿಕ ಪರಿಕಲ್ಪನೆ ಅಪಹಾಸ್ಯಗೊಳ್ಳುವಷ್ಟು ದಿವಾಳಿಯಾಗಿದೆ. ಒಂದು ಜನತಾಂತ್ರಿಕ ವ್ಯವಸ್ಥೆಯಲ್ಲಿ ಅಸ್ತಿತ್ವದಲ್ಲಿರಬೇಕಾದ ಮೂಲಭೂತ ಮೌಲ್ಯಗಳನ್ನು ಗಾಳಿಗೆ ತೂರಿರುವುದನ್ನು ಪ್ರಸ್ತುತ ರಾಜಕೀಯ ವಿದ್ಯಾಮಾನಗಳು ಪ್ರತಿಬಿಂಬಿಸುತ್ತವೆ. ಹುಸಿಯಾದ ಜನತಾಂತ್ರಿಕ ವ್ಯವಸ್ಥೆಯ ಬುನಾದಿಯ ಮೇಲೆ ರೂಪಿಸಲಾಗುತ್ತಿರುವ ಜನಾಭಿಪ್ರಾಯಗಳು ಸಹ ನಿಜವಾದ ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ಪ್ರತಿನಿಧಿಸಲಾರವು.

ಪ್ರಸ್ತುತ ಚುನಾವಣಾ ರಾಜಕೀಯ ಕೋಮುವಾದ, ಜಾತಿ ರಾಜಕೀಯ, ಜಾತ್ಯಾತೀತತೆ, ಭ್ರಷ್ಟಾಚಾರ ಇವುಗಳನ್ನು ಒಂದು ಜ್ವಲಂತ ಸಮಸ್ಯೆಯನ್ನಾಗಿಸಿ ಚದುರಂಗದ ಕಾಯಿಗಳನ್ನಾಗಿಸಿವೆ. ಶತಮಾನಗಳಿಂದ ಬೇರು ಬಿಟ್ಟಿರುವ ಈ ಸಮಸ್ಯೆಗಳಿಗೆ ಶಾಶ್ವತವಾದ ಪರಿಹಾರವನ್ನು ಹುಡುಕುವ ಪ್ರಾಮಾಣಿಕ ಕಾಳಜಿ, ಉದ್ದೇಶ ಯಾವ ರಾಜಕೀಯ ಪಕ್ಷಗಳಿಗೂ ಬೇಕಾಗಿಲ್ಲ. ಈ ಸಮಸ್ಯೆಗಳನ್ನು ನಿರಂತರವಾಗಿ ಚಾಲನೆಯಲ್ಲಿಡುವುದರ ಮೂಲಕ ಪ್ರತಿಯೊಂದು ರಾಜಕೀಯ ಪಕ್ಷಗಳು 'ಅವಕಾಶವಾದಿ' ರಾಜಕೀಯವನ್ನು ನಡೆಸುತ್ತಿವೆ. ಭಾರತದ ಐವತ್ತು ವರ್ಷಗಳ ಇತಿಹಾಸ ಇಂತಹ 'ರಾಜಕೀಯ'ದ ನಿದರ್ಶನಗಳಿಂದ ತುಂಬಿದೆ.

ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಗಳಲ್ಲಿ ಬಂಡವಾಳಶಾಹಿ ಪ್ರಭುತ್ವವನ್ನು ಎತ್ತಿ ಹಿಡಿಯುವುದರ ಜೊತೆಗೆ, ಮುಕ್ತ ಮಾರುಕಟ್ಟೆ, ಜಾಗತೀಕರಣ, ಉದಾರೀಕರಣದ ನೀತಿಯಿಂದಾಗಿ ಶೋಷಿತ ಜನರು ಮತ್ತಷ್ಟು ಶೋಷಣೆಗೆ ಒಳಗಾಗುತ್ತಾರೆ. ಅಭಿವೃದ್ಧಿಯ ಹೆಸರಿನಲ್ಲಿ ದೇಶದ ಸಂಪನ್ಮೂಲಗಳನ್ನು ಬಹುರಾಷ್ಟ್ರೀಯ ಕಂಪನಿಗಳು, ಬಂಡವಾಳಶಾಹಿಗಳು ಕೊಳ್ಳೆ ಹೊಡೆಯಲು ನೇರವಾಗಿ ಅವಕಾಶವನ್ನು ಮಾಡಿಕೊಡಲಾಗಿದೆ. ಗ್ರಾಮೀಣ ಸಮುದಾಯದ, ಕೃಷಿ ಕಾರ್ಮಿಕರು, ವಿಶೇಷವಾಗಿ ಮಹಿಳೆಯರು, ಗಿರಿಜನರು, ಮೀನುಗಾರರು, ಅವರ ಬದುಕಿಗೆ ಆಸರೆಯಾದ ನೈಸರ್ಗಿಕ ಸಂಪನ್ಮೂಲಗಳು ಅವರ ಕೈ ತಪ್ಪುತ್ತಿವೆ. ಜನರ ಮೂಲಭೂತ ಸಮಸ್ಯೆಗಳಾದ ಬಡತನ, ಅನಕ್ಷರತೆ, ನಿರುದ್ಯೋಗ, ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಜವಾಬ್ದಾರಿ ಆದ್ಯತೆಯನ್ನು ಕಳೆದುಕೊಂಡಿರುವುದು ಪ್ರಣಾಳಿಕೆ ಹಾಗೂ ಪ್ರಚಾರದಲ್ಲಿ ಸ್ಪಷ್ಟವಾಗಿದೆ.

ವಿಭಿನ್ನ ರಾಜಕೀಯ ವಿಚಾರಧಾರೆ, ತತ್ವ ಸಿದ್ಧಾಂತ, ಆರ್ಥಿಕ ನೀತಿಯನ್ನು ಹೊಂದಿವೆಯೆಂದು ಘೋಷಿಸಿಕೊಂಡ ರಾಜಕೀಯ ಪಕ್ಷಗಳು ಮಾಡಿಕೊಂಡಿರುವ ಚುನಾವಣಾ ಮೈತ್ರಿಗಳು ಪಕ್ಷಗಳ ಅಧಿಕಾರ ದಾಹಕ್ಕೆ ಉದಾಹರಣೆಯಾಗಿದೆ. ಸ್ಪಷ್ಟ ಆರ್ಥಿಕ ನೀತಿ, ರಾಜಕೀಯ ನಿಲುವು, ಸಮಸ್ಯೆಗಳ ಶಾಶ್ವತ ಪರಿಹಾರ, ಜನತೆಯ ಜ್ವಲಂತ ಸಮಸ್ಯೆಗಳಿಗೆ ಸ್ಪಂದಿಸಿ ಬೆಂಬಲ ಗಳಿಸಲು ವಿಫಲವಾದ ಪಕ್ಷಗಳ ಅವನತಿಯನ್ನು ಎತ್ತಿ ಹಿಡಿಯುತ್ತದೆ.

ಪ್ರಸ್ತುತ ರಾಜಕೀಯ ಪರಿಸ್ಥಿತಿಯಲ್ಲಿ ಮಹಿಳೆಯರು, ದಲಿತರು, ಅಲ್ಪಸಂಖ್ಯಾತರು, ಶೋಷಿತ ವರ್ಗ, ಜನಪರ ಕಾಳಜಿಯುಳ್ಳವರು, ಜನಪರ ಚಳುವಳಿಗಳು ತಮ್ಮೆಲ್ಲ ಭಿನ್ನಾಭಿಪ್ರಾಯಗಳ ನಡುವೆಯೇ ಒಟ್ಟಿಗೆ ಬರುವ ಸಾಧ್ಯತೆಗಳನ್ನು ಹುಡುಕಿಕೊಳ್ಳುವ, ಗಟ್ಟಿಗೊಳಿಸುವ ಅವಶ್ಯಕತೆ ಇದೆ. ಆರೋಗ್ಯಕರ, ಸಮ ಸಮಾಜದ ನಿರ್ಮಾಣಕ್ಕೆ ಪರ್ಯಾಯ ಪರಿಕಲ್ಪನೆಯನ್ನು ಹುಡುಕುವ ತುರ್ತು ನಮ್ಮ ಮುಂದಿದೆ.

ಪ್ರಸ್ತುತದಲ್ಲಿನ ಈ ಕ್ರೈಸಿಸ್‌ಗೆ ಸಂಘಟನೆ, ಸಹನೆ, ಸಹಬಾಳ್ವೆ, ಸಮಾನತೆ ಮಾತ್ರ ಉತ್ತರವಾಗಬಲ್ಲದು.

ಮಾನಸ ಓದುಗರಿಗೆ ಮಹಿಳಾ ದಿನಾಚರಣೆಯ ಶುಭಾಶಯಗಳು

- *ಸಂ. ಮಂ.*

ಪ್ರಮುಖ ಪಕ್ಷಗಳ ಚುನಾವಣಾ ಪ್ರಣಾಳಿಕೆಗಳು

ಒಂದು ವಿಶ್ಲೇಷಣೆ

11ತಿಂಗಳ ಅವಧಿಯಲ್ಲೆ ಮತ್ತೊಮ್ಮೆ ಲೋಕಸಭೆ ಚುನಾವಣೆ ಬಂದಿದೆ. ರಾಜಕೀಯ ಪಕ್ಷಗಳು ಆಶ್ವಾಸನೆ, ಭರವಸೆಗಳನ್ನು ಜನರ ಮುಂದಿಟ್ಟು ಮತ ಯಾಚಿಸುವುದು ಮಾಮೂಲಿ. ಪಕ್ಷಗಳ ಭರವಸೆಗಳನ್ನು ಹೊತ್ತ ಚುನಾವಣಾ ಪ್ರಣಾಳಿಕೆಯ ವಿಶ್ಲೇಷಣೆ ಅಗತ್ಯವೆನಿಸಿದ ಕಾರಣ ಕೆಲವು ಪ್ರಮುಖ ಪಕ್ಷಗಳ ಪ್ರಣಾಳಿಕೆಗಳನ್ನು ಚರ್ಚಿಸಿ ವಿಶ್ಲೇಷಣೆಯನ್ನು ಮಾನಸ ಓದುಗರಿಗಾಗಿ ಪ್ರಕಟಿಸುತ್ತಿದ್ದೇವೆ. ಪ್ರಣಾಳಿಕೆಗಳ ಪ್ರತಿಯೊಂದು ವಿಷಯವನ್ನು ವಿವರವಾಗಿ ನೀಡದೆ, ಕೆಲವು ಮುಖ್ಯ ವಿಷಯಗಳ ಕುರಿತು ಬೇರೆ ಬೇರೆ ಪಕ್ಷಗಳ ನಿಲುವನ್ನು ವಿಶ್ಲೇಷಿಸಿ ನೀಡಲಾಗಿದೆ.

ಸೆಕ್ಯುಲರಿಸಂ (ಜಾತ್ಯಾತೀತತೆ) : ಬಿ.ಜೆ.ಪಿಯು ತನ್ನ ಪ್ರಣಾಳಿಕೆಯಲ್ಲಿ - ಪ್ರತಿಗಾಮಿ ಶಕ್ತಿಗಳನ್ನು ಮೆಚ್ಚಿಸುವಂತಹ ಜಾತ್ಯಾತೀತರಿಂದಾಗಿ ಜಾತ್ಯಾತೀತತೆಯ ನಿಜವಾದ ಅರ್ಥ ವಿರೂಪಗೊಂಡಿವೆಯೆಂದು ಹೇಳಿದೆ. ಅದು 'ಹಿಂದುತ್ವ'ವನ್ನು ನಿಜವಾದ, ಒಂದುಗೂಡಿಸುವ ಶಕ್ತಿ ಎಂದು ಹೇಳಿದೆ. ಹಾಗೂ ಬಾಬರಿ ಮಸೀದಿ ಕೆಡವಿದ ಸ್ಥಳದಲ್ಲಿ ಭವ್ಯವಾದ ರಾಮ ಮಂದಿರವನ್ನು ನಿರ್ಮಿಸಲು ಬದ್ಧರಾಗಿರುವುದಾಗಿಯೂ ಹೇಳಿದೆ. ಅಲ್ಪಸಂಖ್ಯಾತರ ಆಯೋಗವನ್ನು ರದ್ದುಪಡಿಸಿ ಅದನ್ನು ಮಾನವೀಯ ಹಕ್ಕುಗಳ ಆಯೋಗದಡಿಯಲ್ಲಿ ತರುವುದಾಗಿ ಹೇಳಿದೆ. ಬಹುಪತ್ನಿತ್ವವನ್ನು ರದ್ದು ಪಡಿಸುವ, ಗೋಹತ್ಯೆಯನ್ನು ನಿಷೇಧಿಸುವ ಬಗ್ಗೆಯೂ ಒತ್ತಿ ಹೇಳಿದೆ.

ಇದಕ್ಕೆ ವಿರುದ್ಧವಾಗಿ ಉಳಿದ ಪ್ರಮುಖ ರಾಷ್ಟ್ರೀಯ ಪಕ್ಷಗಳಾದ ಎಡ ಪಕ್ಷಗಳು ಹಾಗು ಸಂಯುಕ್ತ ರಂಗದಲ್ಲಿರುವ ಪಕ್ಷಗಳು ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡುವುದಕ್ಕೆ ಬದ್ಧರಾಗಿರುವ ಬಗ್ಗೆ ಹೇಳಿಕೊಂಡಿವೆ. ಎಡರಂಗದ ಪಕ್ಷಗಳು ತಮ್ಮ ಪ್ರಣಾಳಿಕೆಯ ಪೀಠಿಕೆಯಲ್ಲಿ ಹೆಚ್ಚುತ್ತಿರುವ ಕೋಮುವಾದಿ ಶಕ್ತಿಗಳ ಕುರಿತು ವಿಶೇಷ ಒತ್ತು ನೀಡಿ, ಆ ಕಾರಣಕ್ಕಾಗಿಯೆ ಬಿ.ಜೆ.ಪಿಯನ್ನು ಅಧಿಕಾರಕ್ಕೆ ಬರದಂತೆ ತಡೆಯುವ ಅಗತ್ಯವಿದೆಯೆಂದು ಹೇಳುತ್ತವೆ. ಧರ್ಮದಿಂದ ರಾಜಕೀಯವನ್ನು ಬೇರ್ಪಡಿಸುವ, ಆಯೋಧ್ಯಾ ವಿವಾದವನ್ನು ಸುಪ್ರೀಂಕೋರ್ಟಿಗೆ ವಹಿಸುವ ಬಗ್ಗೆ ಹೇಳಿದೆ.

ಸಂಯುಕ್ತರಂಗದ ಕನಿಷ್ಠ ಸಾಮಾನ್ಯ ಕಾರ್ಯಕ್ರಮವು ಬಾಬರಿ ಮಸೀದಿ ವಿವಾದವನ್ನು ಸುಪ್ರೀಂಕೋರ್ಟಿನ ಮೂಲಕ ಅಥವಾ ಒಟ್ಟಾಭಿಪ್ರಾಯದ ಮೂಲಕ ಬಗೆಹರಿಸುವ ಬಗ್ಗೆ ಹೇಳಿದೆ. ಅಲ್ಲದೆ ಮಥುರಾ ಮತ್ತು ಕಾಶೀಯಲ್ಲಿ ಹೊಸ ವಿವಾದವನ್ನು ಹುಟ್ಟು ಹಾಕಲು ಕೋಮುವಾದಿ ಶಕ್ತಿಗಳು ನಡೆಸುತ್ತಿರುವ ಎಲ್ಲಾ ಪ್ರಯತ್ನಗಳನ್ನು ತಡೆಯುವ ಸಕ್ರೀಯ ಹೋರಾಟವನ್ನು ಕುರಿತು ಹೇಳಿದೆ.

ಬಿ.ಜೆ.ಪಿ. ಪ್ರಣಾಳಿಕೆಯು, ದೇಶದ ಕೆಲ ಪ್ರದೇಶಗಳಲ್ಲಿ ಬಾಂಗ್ಲಾದೇಶಿಯರು ಹರಿದು ಬರುತ್ತಿರುವುದರಿಂದಾಗಿ ದೇಶಕ್ಕೆ ಸಮಸ್ಯೆಯಾಗಿದೆ ಎಂಬುದನ್ನು ಎತ್ತಿ ಹಿಡಿಯುತ್ತದೆ. ಪದೇ ಪದೇ ಅವರ ಬಗ್ಗೆ ಹೇಳುವುದರ ಹಿಂದಿನ ಉದ್ದೇಶ ದೇಶದ ವಿವಿದೆಡೆಯಿರುವ ಮುಸ್ಲಿಂರನ್ನು ಪೀಡಿಸುವುದೇ ಆಗಿದೆ.

ಬಾಬರಿ ಮಸೀದಿ ವಿವಾದಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಸಾರ್ವಜನಿಕವಾಗಿ ಕ್ಷಮೆಯಾಚಿಸಿದೆ ಹಾಗು ಅಲ್ಪಸಂಖ್ಯಾತ ರಿಗೆಂದೇ ಪ್ರತ್ಯೇಕ ಖಾತೆಯನ್ನು ಪ್ರಾರಂಭಿಸುವ ಬಗ್ಗೆ ಅವರಿಗೆ ಪೋಲಿಸ್ ಹಾಗು ಪ್ಯಾರಾ ಮಿಲಿಟರಿ ಉದ್ಯೋಗಗಳಲ್ಲಿ ವಿಶೇಷ ನೇಮಕಾತಿ ಕುರಿತು ತನ್ನ ಪ್ರಣಾಳಿಕೆಯಲ್ಲಿ ಹೇಳಿದೆ. ವಿವಾದ ನಡೆದ ಸಂದರ್ಭದಲ್ಲಿ ಕ್ಷಮೆ ಕೇಳುವ ಅಗತ್ಯವನ್ನು ಮನಗಾಣದೆ ಅವಶ್ಯಕತೆಯೇ ಇಲ್ಲದ ಸಂದರ್ಭದಲ್ಲಿ ಕ್ಷಮೆ ಕೇಳುತ್ತಿರುವುದರ ಉದ್ದೇಶ ನಿಸ್ಸಂದೇಹವಾಗಿ ಅಲ್ಪಸಂಖ್ಯಾತರ ಓಟುಗಳಿಗಾಗಿ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಧರ್ಮವನ್ನು ವಿರೋಧಿಸುವ, ನಿಷೇಧಿಸುವ ಜಾತ್ಯಾತೀತತೆಯನ್ನು ಪರಿಗಣಿಸುವುದಿಲ್ಲವೆಂದು ಹಾಗು ಅಲ್ಪಸಂಖ್ಯಾತರಿಗೆ ಸಂವಿಧಾನಾತ್ಮಕವಾದ ಹಕ್ಕುಗಳನ್ನು ನೀಡುವುದಾಗಿ ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ಹೇಳಿದೆ.

ಸಂಯುಕ್ತತೆ (Federalism) : ಎಲ್ಲಾ ಪಕ್ಷಗಳು ಹೆಚ್ಚಿನ ಸಂಯುಕ್ತತೆಗೆ ತಮ್ಮ ಬದ್ಧತೆಯನ್ನು ವ್ಯಕ್ತಪಡಿಸಿವೆ. ಆದರೂ ಒಂದು ಮುಖ್ಯ ಅಂಶಕ್ಕೆ ಸಂಬಂಧಿಸಿದಂತೆ ಬಿ.ಜೆ.ಪಿ.

ಬೇರೆ ಪಕ್ಷಗಳಿಗಿಂತ ಭಿನ್ನ ನಿಲುವನ್ನು ಹೊಂದಿದೆ. ಅದೆಂದರೆ ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿದ್ದು. ಜಮ್ಮು ಕಾಶ್ಮೀರಕ್ಕೆ ವಿಶೇಷ ಸ್ಥಾನ ನೀಡುವ 370ನೇ ವಿಧಿಯನ್ನು ರದ್ದು ಪಡಿಸುವುದನ್ನು ಬಿ.ಜೆ.ಪಿ. ಪ್ರಣಾಳಿಕೆ ಹೇಳಿದರೆ ಉಳಿದ ಪಕ್ಷಗಳು 370ನೇ ವಿಧಿಯನ್ನು ಉಳಿಸಿಕೊಳ್ಳುವ ಬಗ್ಗೆ ಹೇಳುತ್ತವೆ.

ಆರ್ಥಿಕ ನೀತಿ : ಯಾವ ಪಕ್ಷಗಳ ಪ್ರಣಾಳಿಕೆಯಲ್ಲೂ ಆರ್ಥಿಕ ಉದಾರೀಕರಣ ನೀತಿ ಕುರಿತು ಸಮರ್ಥ ಪ್ರತಿರೋಧ ವ್ಯಕ್ತವಾಗಿಲ್ಲ. ಆದರೂ ಕೆಲವು ಮಟ್ಟದ ವ್ಯತ್ಯಾಸಗಳನ್ನು ಪಕ್ಷಗಳಲ್ಲಿ ಕಾಣಬಹುದು. ಬಿ.ಜೆ.ಪಿ. ಪ್ರಣಾಳಿಕೆಯು "ಸಂಪೂರ್ಣ ಉದಾರೀಕರಣ ನಿಯಂತ್ರಿತ ಜಾಗತೀಕರಣ"ದ ಬಗ್ಗೆ ಹೇಳುತ್ತದೆ. ಅಂದರೆ ದೇಶಿಯ ಉದ್ಯಮಗಳ ತಡೆಯಿಲ್ಲದ ಬೆಳವಣಿಗೆ ಅದೇ ಸಮಯದಲ್ಲಿ ಹೊರ ದೇಶದ ಉದ್ಯಮಗಳು ಬರುವಿಕೆಗೆ ನಿರ್ಬಂಧ ಹೇರುವುದಾಗಿದೆ. ಮುಂದುವರೆದು ಕೈಗಾರಿಕೆ ಮತ್ತು ವ್ಯಾಪಾರ ಕುರಿತಂತೆ ಎಲ್ಲ ನಿರ್ಬಂಧಗಳನ್ನು ತೆಗೆಯುವ, ಅಡೆತಡೆಯೇ ಇಲ್ಲದ ಬೆಳವಣಿಗೆಯಿಂದಾಗಿ ಅಸಮತೆಗೆ ಕಾರಣವಾಗಿರುವ ಉದ್ಯಮಗಳಿಗೆ ರಕ್ಷಣೆಯನ್ನು ಕಡಿಮೆ ಮಾಡುವುದು, ದೇಶದ ಭೌತಿಕ ಅಥವ ಆರ್ಥಿಕ ರಕ್ಷಣೆಯನ್ನೊಳಗೊಂಡ ಕ್ಷೇತ್ರವನ್ನು ಹೊರತುಪಡಿಸಿ ಇನ್ನಾವುದೇ ಸಾರ್ವಜನಿಕ ಉದ್ದಿಮೆಗಳನ್ನು ಕಡಿಮೆ ಮಾಡುವುದಾಗಿಯೂ ಹೇಳಿದೆ. 10 ವರ್ಷಗಳಲ್ಲಿ 10 ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಬಿ.ಜೆ.ಪಿ. ಹೇಳಿದೆ. ಒಂದು ಅಂದಾಜಿನ ಪ್ರಕಾರ ಸಂಬಳದ ಬಿಲ್‌ಗೆ 4,26,250 ಕೋಟಿ ರೂ. ವೆಚ್ಚವಾಗುವುದೆಂದು ತಿಳಿದುಬಂದಿದೆ. ಈ ಹಣವನ್ನು ಹೊಂದಿಸುವ ಬಗೆಯನ್ನು ಬಿ.ಜೆ.ಪಿ. ಹೇಳಿಲ್ಲ.

ಇದಕ್ಕೆ ವಿರುದ್ಧವಾಗಿ ಎಡಪಕ್ಷಗಳು ಖಾಸಗೀಕರಣ, ಸಂಪೂರ್ಣ ಅನಿರ್ಬಂಧತೆಯನ್ನು ವಿರೋಧಿಸಿವೆ ಮತ್ತು ಸಾರ್ವಜನಿಕ ಬಂಡವಾಳ ಹೂಡಿಕೆ ಹೆಚ್ಚಿಸುವ, ಸಾರ್ವಜನಿಕ ಉದ್ದಿಮೆಗಳನ್ನು ಬಲಪಡಿಸುವ, ರೋಗಗ್ರಸ್ತ ಸಾರ್ವಜನಿಕ ಉದ್ದಿಮೆಗಳಿಗೆ ರಕ್ಷಣೆ ನೀಡುವ ಮಾತನಾಡುತ್ತವೆ. ಹಣಕಾಸು ಕ್ಷೇತ್ರದಲ್ಲಿ ವಿದೇಶಿ ಬಂಡವಾಳ ಹೂಡಿಕೆಯನ್ನು ಮಿತಿಗೊಳಿಸುವ ಬಗ್ಗೆ ನಿರ್ದಿಷ್ಟವಾಗಿ ಹೇಳುತ್ತವೆ.

ಸಂಯುಕ್ತರಂಗದ ಕನಿಷ್ಠ ಸಾಮಾನ್ಯ ಕಾರ್ಯಕ್ರಮವು ಸಾರ್ವಜನಿಕ ಉದ್ದಿಮೆಗಳನ್ನು ಬಲಪಡಿಸುವ ಹಾಗು ಸಾರ್ವಜನಿಕ ಕ್ಷೇತ್ರದ ಘಟಕಗಳನ್ನು ಪುನಃ ಪ್ರಾರಂಭಿಸುವ ಬಗ್ಗೆ ಹೇಳಿದೆ. ಜನತಾದಳದ ಪ್ರಣಾಳಿಕೆಯು ದೇಶದ ಇನ್‌ಶುರೆನ್ಸ್ ಕ್ಷೇತ್ರದಲ್ಲಿ ವಿದೇಶಿ ಕಂಪೆನಿಗಳ ಬರುವಿಕೆಯನ್ನು ನಿರ್ದಿಷ್ಟವಾಗಿ ವಿರೋಧಿಸುತ್ತದೆ.

ಕಾಂಗ್ರೆಸ್ ಪಕ್ಷ ಸಾರ್ವಜನಿಕ ಉದ್ದಿಮೆಗಳನ್ನು ಹೆಚ್ಚು ಸಮರ್ಥಗೊಳಿಸುವ, ಲಾಭದಾಯಕವಾಗಿಸುವ ಬಗ್ಗೆ ಹೇಳಿದೆ. ಇದನ್ನು ದೇಶಿಯ, ವಿದೇಶ, ಸಾರ್ವಜನಿಕ, ಖಾಸಗಿ ಬಂಡವಾಳ ಹೂಡಿಕೆಯನ್ನು ಹೆಚ್ಚಿಸುವ ಮೂಲಕ ಸಾಧ್ಯವಾಗಿಸುವುದಾಗಿ ಹೇಳಿವೆ.

ಎಡರಂಗ ಮತ್ತು ಸಂಯುಕ್ತರಂಗದ ಪ್ರಣಾಳಿಕೆಗಳು ವಿಶೇಷವಾಗಿ ಹಣಕಾಸು ಮತ್ತು ಇನ್‌ಶುರೆನ್ಸ್ ಘಟಕಗಳ ಬಗ್ಗೆ ವಿಶೇಷ ಒತ್ತು ನೀಡಿರುವುದಕ್ಕೆ ವಿದೇಶ ಬಂಡವಾಳವನ್ನು ದೇಶದ ವಿಮೆ ಹಾಗು ಬ್ಯಾಂಕಿಂಗ್ ಕ್ಷೇತ್ರದಲ್ಲಿನ ಟ್ರೇಡ್ ಯೂನಿಯನ್‌ಗಳು ಪ್ರಬಲವಾಗಿ ವಿರೋಧಿಸಿದ್ದು ಕಾರಣವಾಗಿದೆ.

ತೆರಿಗೆ ಆಧಾರವನ್ನು ವಿಶಾಲಗೊಳಿಸುವುದರ ಮೂಲಕ ಶ್ರೀಮಂತರ ಮೇಲಿನ ತೆರಿಗೆ ಹೆಚ್ಚಿಸಿ ಬಂಡವಾಳವನ್ನು ವೃದ್ಧಿಗೊಳಿಸುವ ಅಗತ್ಯವನ್ನು ಕುರಿತು ಎಡಪಕ್ಷಗಳು ನಿರ್ದಿಷ್ಟವಾಗಿ ಹೇಳಿವೆ. ಇದು ಇತರ ಪಕ್ಷಗಳು ತೆರಿಗೆಯನ್ನು ಇಳಿಸುವ ನೀತಿಗೆ, ಪದ್ಧತಿಗೆ ವ್ಯತಿರಿಕ್ತವಾಗಿದೆ.

ಉದ್ಯೋಗ ಮತ್ತು ದುಡಿಯುವ ವರ್ಗದ ಹಕ್ಕುಗಳು :

ಬಿ.ಜೆ.ಪಿ. ಪ್ರಣಾಳಿಕೆಯು ಕೃಷಿ ಕ್ಷೇತ್ರದಲ್ಲಿನ ದುಡಿಮೆಗಾರರ ಕುರಿತು ಪ್ರಸ್ತಾಪಿಸಿಲ್ಲ. ಕೈಗಾರಿಕೆ ಅಥವಾ ಕೃಷಿ ಕ್ಷೇತ್ರದಲ್ಲಿ ಕನಿಷ್ಠ ಸಂಬಳ ಕುರಿತಂತೆಯೂ ಕೂಡ ಪ್ರಸ್ತಾಪಿಸಿಲ್ಲ.

ಜನತಾದಳ ಪ್ರಣಾಳಿಕೆಯೂ ಸುಪ್ರೀಂಕೋರ್ಟ್ ಮಾರ್ಗದರ್ಶಿಯನ್ನಾಧರಿಸಿದ ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ ಮಾತ್ರ ಕನಿಷ್ಠ ವೇತನ ಕುರಿತು ಹೇಳಿದೆ. ಕೃಷಿ ಕ್ಷೇತ್ರ ಸೇರಿದಂತೆ ಎಲ್ಲರಿಗೂ ಕನಿಷ್ಠ ವೇತನ ಕುರಿತು ಏನೂ ಹೇಳಿಲ್ಲ.

ಎಡಪಕ್ಷಗಳು, ನಿವೃತ್ತಿ ವೇತನ ಮತ್ತು ಸಮಾಜ ಕಲ್ಯಾಣ ಸೌಲಭ್ಯಗಳ ಜೊತೆಗೆ ಕನಿಷ್ಠ ವೇತನವನ್ನು ಕೃಷಿ ಕ್ಷೇತ್ರದ ದುಡಿಮೆಗಾರರಿಗೆ ನೀಡುವ ಬಗ್ಗೆ ಹೇಳಿವೆ. ಅಲ್ಲದೆ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಮಹಿಳೆಯರಿಗೆ ನೀಡುವ ಬಗ್ಗೆ ಪ್ರಸ್ತಾಪಿಸಿದೆ. ಕೈಗಾರಿಕಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಹಣದುಬ್ಬರಕ್ಕೆ ಹೊಂದಿಕೊಂಡಂತೆ ವೇತನ ಹೆಚ್ಚಳದ ಜೊತೆಗೆ ಅಗತ್ಯವನ್ನಾಧರಿಸಿದ ಕನಿಷ್ಠ ವೇತನ ಕುರಿತು ಹೇಳಿವೆ. 'ದುಡಿಮೆಗೆ ಊಟ' ಕಾರ್ಯಕ್ರಮಗಳ ಮೂಲಕ ಉದ್ಯೋಗವನ್ನು ಹೆಚ್ಚಿಸುವ ಬಗ್ಗೆಯೂ ಹೇಳಿವೆ. ಆದರೆ ಈ 'ದುಡಿಮೆಗೆ ಊಟ' ಕುರಿತಂತೆ ಕನಿಷ್ಠ ವೇತನದ ಬಗ್ಗೆ ಹೇಳಿಲ್ಲ.

ಕೃಷಿ ಕ್ಷೇತ್ರವನ್ನು ಅಭಿವೃದ್ಧಿ ಪಡಿಸುವ ಮೂಲಕ ಲಕ್ಷಾಂತರ ಉದ್ಯೋಗಗಳನ್ನು ಸೃಷ್ಟಿಸುವುದಾಗಿ ಹಾಗು ಗ್ರಾಮೀಣ ಅಭಿವೃದ್ಧಿ ಯೋಜನೆಯ ಮೂಲಕ ಉದ್ಯೋಗ ಸೃಷ್ಟಿಸುವ ಬಗ್ಗೆ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಹೇಳಿಕೊಂಡಿದೆ. ಕನಿಷ್ಠ ವೇತನ ಕುರಿತಂತೆ ಏನೂ ಹೇಳಿಲ್ಲ.

ಎಡಪಕ್ಷಗಳ ಪ್ರಣಾಳಿಕೆಯಲ್ಲಿ ಮಾತ್ರ ಕೃಷಿಯಲ್ಲಿನ ದುಡಿಮೆಗಾರರಿಗೆ ಕನಿಷ್ಠ ವೇತನ ಮತ್ತು ಇತರ ಸೌಲಭ್ಯ ಕುರಿತಂತೆ ಪ್ರಸ್ತಾಪವಾದರೂ ಆಗಿದೆ. ಈ ಪ್ರಣಾಳಿಕೆಯೂ ಕೂಡ ವಿಸ್ತಾರವಾದ, ಹಣದುಬ್ಬರಕ್ಕೆ ಹೊಂದಿಕೊಂಡ, ಅಗತ್ಯ ವನ್ನಾಧರಿಸಿದ ಕನಿಷ್ಠ ವೇತನವನ್ನು ಎಲ್ಲರ ಹಕ್ಕನ್ನಾಗಿ ಖಾತ್ರಿಗೊಳಿಸುವ ಬಗ್ಗೆ ಹೇಳುವುದಿಲ್ಲ.

ಭೂ ಸುಧಾರಣೆಗಳು :

ಭೂಸುಧಾರಣೆ ಕುರಿತಂತೆ ಎಲ್ಲಾ ಪಕ್ಷಗಳು ಸಮಾನ ಬದ್ಧತೆಯನ್ನು ತೋರಿಸಿವೆ.

ಎಡಪಕ್ಷಗಳು ತಮ್ಮ ಪ್ರಣಾಳಿಕೆಯಲ್ಲಿ - ಎಡ ಪಕ್ಷಗಳ ಸರ್ಕಾರವಿರುವ ಪಶ್ಚಿಮ ಬಂಗಾಳ, ತ್ರಿಪುರ, ಕೇರಳದಲ್ಲಿ ಮಾತ್ರ ಭೂಸುಧಾರಣೆಗಳು ಪರಿಣಾಮಕಾರಿಯಾಗಿ ಜಾರಿಗೊಂಡಿವೆ ಎಂದು ಒತ್ತಿ ಹೇಳಿವೆ.

ಕಾಂಗ್ರೆಸ್ ಪಕ್ಷವು ತನ್ನ ಪ್ರಣಾಳಿಕೆಯಲ್ಲಿ ಕೃಷಿಗೆ ಕೈಗಾರಿಕೆಯ ಸ್ಥಾನವನ್ನು ನೀಡುವುದಾಗಿ ಹಾಗು ರೈತರು ತಮ್ಮ ವರಮಾನ ಹೆಚ್ಚಿಸಿಕೊಳ್ಳುವಲ್ಲಿರುವ ಎಲ್ಲ ಅಡೆತಡೆಗಳನ್ನು ನಿವಾರಿಸುವುದಾಗಿ ಹೇಳಿದೆ. ಇದು ರೈತರಿಗೆ ಭದ್ರತೆಯನ್ನು ಒದಗಿಸುವ ಸಲುವಾಗಿ ಭೂಸುಧಾರಣೆಗೆ ಹೆಚ್ಚಿನ ಒತ್ತನ್ನು ನೀಡುವುದಾಗಿ ಹೇಳಿರುವುದಕ್ಕೆ ವ್ಯತಿರಿಕ್ತವಾಗಿದೆ.

ಸಾಮಾಜಿಕ ಸೌಖ್ಯ :

ಎಡಪಕ್ಷಗಳ ಪ್ರಣಾಳಿಕೆಯೂ ಮಾತ್ರ ಕೇಂದ್ರ ಆಯ-ವ್ಯಯದಲ್ಲಿ 10% ಹಾಗು ರಾಜ್ಯದ ಆಯ-ವ್ಯಯದಲ್ಲಿ 30% ಅನ್ನು ನೇರವಾಗಿ ಶಿಕ್ಷಣಕ್ಕೆ ವಿನಿಯೋಗಿಸುವುದಾಗಿ ಹೇಳಿದೆ.

ಸಂಯುಕ್ತರಂಗ ಮತ್ತು ಬಿ.ಜೆ.ಪಿ. ಇಬ್ಬರೂ ಒಟ್ಟು ರಾಷ್ಟ್ರೀಯ ಉತ್ಪನ್ನ(Gross domestic product)ದಲ್ಲಿ ಶೇ. 6ರಷ್ಟನ್ನು ಶಿಕ್ಷಣಕ್ಕೆ ವಿನಿಯೋಗಿಸುವುದಾಗಿ ಹೇಳಿವೆ.

14 ವರ್ಷದವರೆಗೆ ಎಲ್ಲರಿಗೂ ಶಿಕ್ಷಣದ ಹಕ್ಕು S.C., S.T. ಹೆಣ್ಣು ಮಕ್ಕಳಿಗೆ ಎಲ್ಲಾ ಹಂತದಲ್ಲೂ ಉಚಿತ ಶಿಕ್ಷಣ ಕುರಿತು ಹೇಳಿರುವ ಕಾಂಗ್ರೆಸ್ ಆ ಕ್ಷೇತ್ರದಲ್ಲಿ ಹಣ ವಿನಿಯೋಗಿಸುವುದರ ಬಗ್ಗೆ ಏನೂ ಹೇಳಿಲ್ಲ.

ಒಟ್ಟು ರಾಷ್ಟ್ರೀಯ ಉತ್ಪನ್ನದಲ್ಲಿ (Gross Domestic Product) ಶೇ. 5ರಷ್ಟನ್ನು ಆರೋಗ್ಯ ಕ್ಷೇತ್ರಕ್ಕೆ ವಿನಿಯೋಗಿಸುವುದಾಗಿ ಎಡಪಕ್ಷಗಳು ಮಾತ್ರ ಹೇಳಿವೆ. ಆದರೆ ಸರ್ಕಾರದ ವಿನಿಯೋಗದ ಕುರಿತು ನಿರ್ದಿಷ್ಟವಾಗಿ ಏನೂ ಹೇಳಿಲ್ಲ. ಉಳಿದಂತೆ ಸಾರ್ವಜನಿಕ ಸಾರಿಗೆ, ನೈರ್ಮಲ್ಯ, ಆಹಾರ, ವಸತಿ ಕುರಿತಂತೆ ಸರ್ಕಾರದ ವೆಚ್ಚ ಕುರಿತು ಸ್ಪಷ್ಟವಾಗಿ ಏನೂ ಹೇಳಿಲ್ಲ.

ಕಾಂಗ್ರೆಸ್ ಪಕ್ಷ ಸ್ಲಂಗಳ ಸುಧಾರಣೆ, ಕಟ್ಟಡ ನಿರ್ಮಾಣ ಭತ್ಯೆ, ವಸತಿ ನಿರ್ಮಾಣಕ್ಕೆ ತಡೆಯಾಗಿರುವ ಕಾನೂನಿನ ಮಿತಿಗಳನ್ನು ತೆಗೆದು ಹಾಕುವ ಕುರಿತು ಹೇಳಿದೆ. ವಸತಿ ಕ್ಷೇತ್ರದಲ್ಲಿ ಖಾಸಗಿ ಮತ್ತು ವಿದೇಶಿ ಬಂಡವಾಳಕ್ಕೆ ನಗರಗಳಲ್ಲಿ ಅವಕಾಶ ಕೊಡುವುದಾಗಿ ಹೇಳಿರುವ ಕಾಂಗ್ರೆಸ್, ಸರ್ಕಾರದ ವಿನಿಯೋಗದ ಬಗ್ಗೆ ಏನೂ ಹೇಳಿಲ್ಲ. ಅದೇ ರೀತಿ ಸಾರಿಗೆ, ನೈರ್ಮಲ್ಯ ಇತ್ಯಾದಿ ಕುರಿತು ಸಹ ಹೇಳಿಲ್ಲ.

ಮಹಿಳೆ

ಮಹಿಳೆಯರನ್ನು ಕುರಿತಂತೆ ಬಿಜೆಪಿಯು ತನ್ನ ಪ್ರಣಾಳಿಕೆಯಲ್ಲಿ ವಿಸ್ತಾರವಾಗಿ ಹೇಳಿದೆ. ಚುನಾಯಿತ ಸಂಸ್ಥೆಗಳಲ್ಲಿ 1/3 ಮೀಸಲಾತಿ, ವಿವಿಧ ಕ್ಷೇತ್ರಗಳಲ್ಲಿ ಲಿಂಗ ಅಸಮಾನತೆ ಕುರಿತಂತೆ ಸುಧಾರಣೆ, ಎಲ್ಲಾ ಸಂಪ್ರದಾಯಗಳ ಪ್ರಗತಿಪರ ಅಂಶಗಳನ್ನೊಳಗೊಂಡ ಸಮಾನ ನಾಗರೀಕ ಸಂಹಿತೆಯನ್ನು ತರುವುದಾಗಿ ಹೇಳಿದೆ. ಆದರೆ ಅವರು ದೃಢವಾಗಿ ಹೇಳುವ ಹಿಂದುತ್ವವು ಮಹಿಳೆಯರ ಪಾತ್ರವನ್ನು ಪತ್ನಿಯಾಗಿ, ಗೃಹಕರ್ತಳಾಗಿ, ಸಂಸ್ಕೃತಿಯ ವಾಹಕಿಯಾಗಿ ಮಾತ್ರ ಗುರುತಿಸುತ್ತವೆ.

ಬಿಜೆಪಿ ಆಳ್ವಿಕೆಯ ಉತ್ತರ ಪ್ರದೇಶ, ಗುಜರಾತ್, ರಾಜಸ್ಥಾನದಲ್ಲಿ ಮಹಿಳೆಯರ ಹಕ್ಕುಗಳ ಸ್ಥಿತಿ ಎಲ್ಲರಿಗೂ ಆತಂಕ ಹುಟ್ಟಿಸುವಂತಹದ್ದು. ಅದರಲ್ಲೂ ರಾಜಸ್ಥಾನದಲ್ಲಿ ಮಹಿಳೆಯರ ಮೇಲೆ ಹೆಚ್ಚುತ್ತಿರುವ ಲೈಂಗಿಕ ಹಿಂಸೆ ಮೈಜುಂ ಎನಿಸುವಂತಹದು. (ಮಾನಸದ ಕಳೆದ ಸಂಚಿಕೆಯಲ್ಲಿ ವಿವರವಾಗಿ ಬಂದಿದೆ). ಕೆಲಸ ಮಾಡುವ ತಾಯಂದಿರಿಗೆ ಕಡಿಮೆ ಕೆಲಸದ ವೇಳೆ, ಮನೆಗೂ ಕೊಂಡೊಯ್ಯು ಮಾಡುವಂತಹ ಕೆಲಸಗಳಿಗೆ ಅವಕಾಶ ಕಲ್ಪಿಸುವುದಾಗಿ ಪ್ರಣಾಳಿಕೆಯಲ್ಲಿ ಹೇಳಿದೆ. ಇದರ ಹಿಂದೆ ಮಹಿಳೆಯರನ್ನು ಮನೆಗೆ ಬಂಧಿಸಿಬಿಡುವ, ಅಸಂಘಟಿತ ಕ್ಷೇತ್ರಕ್ಕೆ ನೂಕಿ ಬಿಡುವ ಅಪಾಯವಿದೆ. ಪಕ್ಷದ ಮುಖಂಡರೊಬ್ಬರು ಪತ್ರಿಕೆಯೊಂದರಲ್ಲಿ ಮಹಿಳೆಯರು ಪ್ರಮುಖ ಪಾತ್ರ ವಹಿಸಬೇಕಾಗಿರುವುದು ಕುಟುಂಬದಲ್ಲಿ ಎಂದು ಹೇಳಿರುವುದು ಮೇಲಿನದನ್ನು ಸಮರ್ಥಿಸುತ್ತದೆ.

ಎಡಪಕ್ಷಗಳ ಪ್ರಣಾಳಿಕೆ ಮತ್ತು ಸಂಯುಕ್ತರಂಗದ ಪ್ರಣಾಳಿಕೆಯು ರಾಜಕೀಯದಲ್ಲಿ ಮಹಿಳೆಯರಿಗೆ 1/3 ಮೀಸಲಾತಿ ನೀಡುವ ಬಗ್ಗೆ ಹೇಳಿವೆ, ಸಂಯುಕ್ತರಂಗದ ಪಕ್ಷಗಳೆ, 1/3 ಮೀಸಲಾತಿಯಲ್ಲಿ ಹಿಂದುಳಿದ ವರ್ಗಗಳಿಗೂ ಮೀಸಲಾತಿ ನೀಡಬೇಕೆಂದು ಮುಂದಿಟ್ಟಿರುವ ಬೇಡಿಕೆಯ ಬಗ್ಗೆ ಸಂಯುಕ್ತ ರಂಗದ ಸಾಮಾನ್ಯ ಕನಿಷ್ಠ ಕಾರ್ಯಕ್ರಮ ಏನೂ ಹೇಳಿಲ್ಲ.

ಎಡಪಕ್ಷಗಳು, ಮಹಿಳೆಯರಿಗೆ ಸಮಾನ ಕಾನೂನು (Legal) ಹಕ್ಕುಗಳನ್ನು ಎಲ್ಲಾ ಕೋಮಿನ ಮಹಿಳೆಯರಿಗೆ ನೀಡುವುದಾಗಿ ಸ್ಪಷ್ಟವಾಗಿ ಹೇಳಿದೆ. ಆದರೆ ಸಂಯುಕ್ತ ರಂಗದ ಪ್ರಣಾಳಿಕೆಯೂ ಸಮ್ಮತಿಯಿಲ್ಲದೆ ವೈಯಕ್ತಿಕ, ಧಾರ್ಮಿಕ ಕಾನೂನಿಗೆ ಕೈ ಹಾಕುವುದಿಲ್ಲವೆಂದು ಹೇಳಿದೆ.

ಕಾಂಗ್ರೆಸ್ ಪಕ್ಷ ಶೇ. 1/3 ಮೀಸಲಾತಿಯನ್ನು ಮಹಿಳೆಯರಿಗೆ ನೀಡುವುದಾಗಿ ಹೇಳಿದ್ದು ಕಾನೂನಿನ ಬದಲಾವಣೆ ಕುರಿತು ಏನೂ ಹೇಳಿಲ್ಲ.

ಜನಸಂಖ್ಯಾ ನೀತಿ

ಸ್ವಾಮಿನಾಥನ್ ಕಮಿಟಿ ಶಿಫಾರಸ್ಸುಗಳ ಆಧಾರದ ಮೇಲೆ ಜನಸಂಖ್ಯಾ ನೀತಿಯನ್ನು ತಯಾರಿಸುವುದಾಗಿ ಮತ್ತು ಆ ಆಧಾರದ ಮೇಲೆ ಒಂದು ಅಥವಾ ಎರಡು ಮಕ್ಕಳ ಕುಟುಂಬ ಯೋಜನೆ ತರುವುದಾಗಿ ಬಿ.ಜೆ.ಪಿ. ಹೇಳಿದೆ. ಈ ಸ್ವಾಮಿನಾಥನ್ ಕಮಿಟಿ ಶಿಫಾರಸ್ಸುಗಳನ್ನು ಕುರಿತು ಮಹಿಳಾ ಚಳುವಳಿಗಳು ಪ್ರಬಲ ವಿರೋಧ ವ್ಯಕ್ತಪಡಿಸಿದ್ದವು. ಕಮಿಟಿಯು 2ಕ್ಕಿಂತ ಹೆಚ್ಚಿನ ಮಕ್ಕಳಿರುವವರಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ನಿಷೇಧ, ಸಣ್ಣ ಕುಟುಂಬ ನೀತಿಯನ್ನು ಹೇರಲು ಮಿಲಿಟರಿ ಬಳಕೆ ಹಾಗು ಕುಟುಂಬವನ್ನು ನಿಯಂತ್ರಿಸುವವರಿಗೆ ಭತ್ಯೆಗಳು, ನಿಯಂತ್ರಿಸದಿದ್ದವರಿಗೆ ಕಡಿತ ಇತ್ಯಾದಿಯನ್ನು ಕಮಿಟಿ ಸೂಚಿಸಿತ್ತು. (ಜನಸಂಖ್ಯಾ ಪಾಲಿಸಿ ಕುರಿತ ವಿವರಗಳಿಗೆ ನವೆಂಬರ್ 1994ರ ಮಾನಸ ಸಂಚಿಕೆ ನೋಡಿ).

ಎಡಪಕ್ಷಗಳ ಪ್ರಣಾಳಿಕೆಯು, ಸಣ್ಣ ಕುಟುಂಬ ಕುರಿತು ಅರಿವು ಮೂಡಿಸುವ ಆಂದೋಲನದ ಕುರಿತು ಹೇಳಿದೆ. 2ಕ್ಕಿಂತ ಹೆಚ್ಚಿನ ಮಕ್ಕಳಿದ್ದವರು ಚುನಾವಣೆಗೆ ನಿಲ್ಲಬಾರದೆಂಬ 79ನೇ ಸಂವಿಧಾನದ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಬೇಕೆಂಬುದನ್ನು ಸ್ಪಷ್ಟವಾಗಿ ಹೇಳಿದೆ.

ಈಗಿರುವ ಕುಟುಂಬ ನಿಯಂತ್ರಣ ಕಾರ್ಯಕ್ರಮಗಳ ಮಿತಿಯನ್ನು ವ್ಯವಸ್ಥಿತವಾಗಿ ಸರಿಪಡಿಸಿ, ಸರ್ಕಾರೇತರ ಸಂಸ್ಥೆಗಳ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಕಾಂಗ್ರೆಸ್ ಹೇಳಿದೆ. ಅಲ್ಲದೆ ಮಹಿಳಾ ಸಾಕ್ಷರತೆ, ಮಹಿಳಾ ಸಶಕ್ತತೆಯ ಮೂಲಕ ಕುಟುಂಬ ನಿಯಂತ್ರಣವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬಹುದೆಂದು ಹೇಳಿರುವ ಮೂಲಕ ಹೊರೆಯನ್ನು ಮಹಿಳೆಯರ ಮೇಲೆ ಹೇರಿದೆ.

ರಾಷ್ಟ್ರೀಯ ಭದ್ರತೆ

ಬಿ.ಜೆ.ಪಿ. ಪಕ್ಷವೊಂದೆ ರಾಷ್ಟ್ರೀಯ ಭದ್ರತೆಯ ಕುರಿತು ಭ್ರಾಂತಿ ವ್ಯಕ್ತಪಡಿಸಿದೆ. ಈ ಅಂಶಗಳನ್ನು ಪ್ರಣಾಳಿಕೆ ಒಳಗೊಂಡಿದೆ.

ಅ. ಪರಮಾಣು ಶಸ್ತ್ರಾಸ್ತ್ರಗಳ ಸ್ಥಾಪನೆಗೆ ಅವಕಾಶ

ಆ. ರಕ್ಷಣಾ ವ್ಯವಸ್ಥೆಗೆ ಹೆಚ್ಚಿನ ವೆಚ್ಚ

ಇ. ಸೂಕ್ಷ್ಮ ಗಡಿ ಪ್ರದೇಶಗಳಲ್ಲಿ ಪ್ಯಾರ ಮಿಲಿಟರಿ ಪಡೆಗಳ ಸ್ಥಾಪನೆ

ಈ. ಭಯೋತ್ಪಾದನೆ, ದಂಗೆಯನ್ನು ಹತ್ತಿಕ್ಕಲು ಭದ್ರತಾ ಪಡೆಗಳಿಗೆ ಪೂರ್ಣ ಸ್ವಾತಂತ್ರ್ಯ

ಇದರ ಪರಿಣಾಮವಾಗಿ ರಕ್ಷಣಾ ವ್ಯವಸ್ಥೆ, ಪರಮಾಣು ಶಸ್ತ್ರಾಸ್ತ್ರಗಳ ಮೇಲಿನ ಹೆಚ್ಚಿನ ವಿನಿಯೋಗದಿಂದಾಗಿ ಇತರ ಕ್ಷೇತ್ರಗಳ ಮೇಲಿನ ವೆಚ್ಚಕ್ಕೆ ಕಡಿತ ಉಂಟಾಗುತ್ತದೆ. ಇದು ಗಡಿ ಪ್ರದೇಶಗಳಲ್ಲಿ ಮಿಲಿಟರಿಕರಣಕ್ಕೆ, ಅರಾಜಕತೆಗೆ ಎಡೆಮಾಡಿಕೊಡುತ್ತದೆ. ಅಲ್ಲದೆ ದೇಶದ ಬೇರೆ ಭಾಗಗಳಲ್ಲಿ ದಂಗೆ ಹತ್ತಿಕ್ಕುವ ನೆಪದಲ್ಲಿ ಸಶಸ್ತ್ರ ಪಡೆಗಳ ಉಪಯೋಗ ಹೆಚ್ಚುತ್ತದೆ. ಆ ರೀತಿಯ ಕಾನೂನು, ಆಜ್ಞೆ ಪಾಲನೆ ಹೆಸರಿನಲ್ಲಿ ಸರ್ಕಾರ ನಡೆಸುವ ವೈಪರೀತ್ಯಗಳ ಸಂದರ್ಭಗಳಲ್ಲಿ ಮಹಿಳೆಯರೆ ಹೆಚ್ಚಿನ ಹಿಂಸೆಗೊಳಗಾಗುವರೆಂಬುದನ್ನು ಹಿಂದಿನ ಅನುಭವಗಳು ದಾಖಲಿಸಿವೆ.

ಎಡಪಕ್ಷಗಳು - NPT (ಪರಮಾಣು ಶಕ್ತಿ ತಂತ್ರಜ್ಞಾನ), CT BT (ಪರಮಾಣು ಶಕ್ತಿ ಉಪಯೋಗ ಕುರಿತ ಸಂಧಿ)ಗೆ ಸಂಬಂಧಿಸಿದಂತೆ ಯಾವುದೇ ತಾರತಮ್ಯ ಸಂಧಿಗೆ ಸಹಿ ಹಾಕುವುದಿಲ್ಲವೆಂದು, ಭಾರತ-ಅಮೇರಿಕ ಮಿಲಿಟರಿ ಸಹಕಾರವನ್ನು ರದ್ದುಪಡಿಸುವುದೆಂದು ಹೇಳಿದೆ.

ಕಾಂಗ್ರೆಸ್ ಪಕ್ಷ ರಕ್ಷಣಾ ವ್ಯವಸ್ಥೆಯಲ್ಲಿನ ಸಮಸ್ಯೆಗಳಿಗೆ ಆದ್ಯತೆ ನೀಡುವುದಾಗಿ ಹೇಳಿದೆ. ಜನತಾ ದಳ ಹೊಸ ರಕ್ಷಣಾ ನೀತಿ ತರುವುದಾಗಿ ಹೇಳಿದೆ.

ಚರ್ಚೆಯ ಲೇಖನ ರೂಪ -
ನೀಲಾಂಜನ, ಶಾರದ, ಸರಸ್ವತಿ

ಪ್ರಸಕ್ತ ಚುನಾವಣೆ - ಒಂದು ನೋಟ

ರಾಜೇಶ್ವರಿ ಹೆಚ್. ಎಸ್.

ಇಂದು ಕಾಣುತ್ತಿರುವ ರಾಜಕೀಯ ವಿದ್ಯಮಾನ ನಮ್ಮ ರಾಜಕಾರಣದ ಅಸ್ತಿತ್ವದಲ್ಲಿ ಅಗತ್ಯವಾದ ತತ್ವ, ಆದರ್ಶ, ಸಿದ್ಧಾಂತ ಜನತಾಂತ್ರಿಕ ವ್ಯವಸ್ಥೆ, ಪಕ್ಷಾಂತರ ವ್ಯವಸ್ಥೆ ಎಲ್ಲವನ್ನು ನಗೆಪಾಟಲನ್ನಾಗಿಸಿದೆ. ಪ್ರಜಾತಂತ್ರದ ಅವಹೇಳನವನ್ನ ಕಾಣಬಹುದು. 'ಅಧಿಕಾರ'ದ ವ್ಯಾಮೋಹದಿಂದಾಗಿ, ಎಲ್ಲಾ ಪಕ್ಷಗಳು ಸಿದ್ಧಾಂತಗಳನ್ನು ಗಾಳಿಗೆ ತೂರಿರುವುದು ಸರ್ವೇ ಸಾಮಾನ್ಯವಾಗಿದೆ. ನೈತಿಕ ಮೌಲ್ಯಗಳು ಕುಸಿದು ಬಿದ್ದಿವೆ. ಅವಕಾಶವಾದಿ ರಾಜಕಾರಣ ಇಂದು ದೇಶದ ರಾಜಕೀಯ ವ್ಯಕ್ತಿಗಳ ಉಸಿರಾಗಿದೆ. "ಭ್ರಷ್ಟತೆ" ರಾಜಕೀಯ, ಮೌಲ್ಯ ರಹಿತ ರಾಜಕಾರಣ ಕಣ್ಣಿಗೆ ರಾಚುವಂತಿದೆ.

ಸ್ವಚ್ಛ ರಾಜಕಾರಣ, ಮೌಲ್ಯ ರಾಜಕಾರಣ ಈ ಎಲ್ಲಾ ಪರಿಕಲ್ಪನೆಗಳು ಇಂದು ನೇಪತ್ಯಕ್ಕೆ ಸರಿದಿದೆ. ಯಾವುದೇ ಪ್ರಶ್ನೆಗಳು ಜನಪರವಾದ ಆರ್ಥಿಕ, ರಾಜಕೀಯ, ಸಾಮಾಜಿಕ ಸಿದ್ಧಾಂತಗಳಿಂದ ದೂರ ಸರಿದಿವೆ. ಒಂದು ರಾಜಕೀಯ ಪಕ್ಷ, ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ, ತನ್ನ ರಾಜಕೀಯ ನೀತಿ, ಆರ್ಥಿಕ ನೀತಿಯನ್ನು ಮತದಾರರ ಮುಂದಿಟ್ಟು, ಮತದಾರರು ವಿಮರ್ಶಾತ್ಮಕವಾಗಿ, ಸಿದ್ಧಾಂತ, ಯೋಜನೆಗಳನ್ನು ಯೋಚಿಸಿ ಮತ ನೀಡುವ ಪ್ರಜಾತಾಂತ್ರಿಕ ಮೌಲ್ಯಗಳನ್ನೆಲ್ಲಾ ಸಂಪೂರ್ಣವಾಗಿ ಗಾಳಿಗೆ ತೂರಿ, ಕೇವಲ ಅಧಿಕಾರ ದಾಹದ ದ್ವಂದ್ವಮಯ, ವೈರುಧ್ಯಮಯವಾದ, ಇಬ್ಬಂದಿ ನೀತಿಯನ್ನು ಅನುಸರಿಸುತ್ತಿವೆ. ಮೌಲ್ಯಾಧಾರಿತ ರಾಜಕೀಯ ಸಂಪೂರ್ಣವಾಗಿ ಮರೆಯಾಗಿದೆ. ದೇಶ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳ ಸೈದ್ಧಾಂತಿಕ ಪರಿಹಾರವನ್ನು, ಶಾಶ್ವತ ಪರಿಹಾರವನ್ನು ಹುಡುಕುವುದು ಪಕ್ಷಗಳ ಆದ್ಯತೆ ಆಗಿಲ್ಲ. ಎಲ್ಲಾ ರಾಜಕೀಯ ಪಕ್ಷದಲ್ಲಿ ಒಟ್ಟಾರೆಯಾಗಿ ಪ್ರಸ್ತುತ ವ್ಯವಸ್ಥೆಯನ್ನೇ ಬಲಗೊಳಿಸುವ 'ಯಥಾಸ್ಥಿತಿ ವಾದವನ್ನು' ನೋಡಬಹುದು. 'ಅಪಮೌಲ್ಯಗೊಂಡ ರಾಜಕಾರಣ'ವನ್ನು ಕಾಣಬಹುದು.

ರಾಜಕೀಯ ಪಕ್ಷಗಳ ಪ್ರಣಾಳಿಕೆಗಳು ಹಾಗೂ ಚುನಾವಣಾ ಮೈತ್ರಿಗಳು, ಎಲ್ಲಾ ರಾಜಕೀಯ ಪಕ್ಷಗಳ ಮೂಲ ಉದ್ದೇಶವನ್ನು ಸ್ಪಷ್ಟಪಡಿಸುತ್ತವೆ. ಅಧಿಕಾರದ ಹಂಬಲವೆ ಎಲ್ಲಾ ರಾಜಕೀಯ ಪಕ್ಷಗಳ ಏಕೈಕ ಗುರಿ. ಎಲ್ಲಾ ಪಕ್ಷಗಳು ಕೋಮ ಅಥವಾ ಜಾತಿ ಆಧಾರದ ಮೇಲೆ ಚುನಾವಣೆಯನ್ನು ನೋಡುತ್ತವೆ. ಅಲ್ಪಸಂಖ್ಯಾತರು, ದಲಿತರು, ಹಿಂದುಳಿದ ವರ್ಗಗಳ ಮತಗಳು ನಿರ್ಣಯಕವಾದುದರಿಂದ ಅವು ಒಂದು ಹಂತದಲ್ಲಿ, ಓಟ್ ಬ್ಯಾಂಕ್‌ಗಳಾಗಿಯೇ ತೋರುತ್ತವೆ.

ಭಾರತದಲ್ಲಿ 50ನೇ ಸ್ವಾತಂತ್ರ್ಯ ಸ್ವರ್ಣಮಹೋತ್ಸವವನ್ನು ಆಚರಿಸುವ ಸಂದರ್ಭದಲ್ಲಿ 'ಭ್ರಷ್ಟಾಚಾರ ಹಾಗೂ ರಾಜಕೀಯ ಅಪರಾಧೀಕರಣ'ವನ್ನು ತಡೆಯುವ ನಿರ್ಣಯವನ್ನು ಲೋಕಸಭೆಯಲ್ಲಿ ಕೈಗೊಳ್ಳಲಾಗಿತ್ತು. ಆದರೆ ಚುನಾವಣೆಯ ಕಣದಲ್ಲಿ ನಿಂತಿರುವ ಅಭ್ಯರ್ಥಿಗಳನ್ನು ಗಮನಿಸಿದರೆ, ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ಪ್ರಣಾಳಿಕೆಯಲ್ಲಿ ನೀಡಿದ ವಚನಗಳನ್ನು ಗಾಳಿಗೆ ತೂರಿರುವುದು ಸ್ಪಷ್ಟವಾಗಿದೆ.

'ಭ್ರಷ್ಟಾಚಾರ ರಹಿತ', 'ಸ್ವಚ್ಛ ಆಡಳಿತ', 'ಸುಭದ್ರಾ ಸರ್ಕಾರ', 'ಸಮರ್ಥ ನಾಯಕ'ನನ್ನು ನೀಡುತ್ತೇವೆ ಎಂಬ ಭರವಸೆಯನ್ನು ಎಲ್ಲ ರಾಜಕೀಯ ಪಕ್ಷದ ಪ್ರಣಾಳಿಕೆಗಳು ನೀಡುತ್ತವೆ. ಭಾರತ ದೇಶದ ಸಾಮಾಜಿಕ ವ್ಯವಸ್ಥೆಯ ನರನಾಡಿಯಲ್ಲಿ ಹಬ್ಬಿರುವ 'ಭ್ರಷ್ಟಾಚಾರ' 'ರಾಜಕೀಯ ಅಪರಾಧೀಕರಣ' ಇಂದು ಚುನಾವಣೆಯ ಪ್ರಮುಖ ವಿಷಯವಾಗಬೇಕಿತ್ತು. ಆದರೆ ಪಕ್ಷಗಳು ಟಿಕೇಟ್ ನೀಡುವ ಸಂದರ್ಭದಲ್ಲಿ ಸಾರ್ವಜನಿಕ ಪರಿಶುದ್ಧತೆಯನ್ನು ಗಮನಿಸದೆ ಟಿಕೇಟ್ ನೀಡಿರುವುದು ಹಾಗೂ ಪಕ್ಷಗಳು ಭ್ರಷ್ಟಾಚಾರ ಆರೋಪ ಹೊತ್ತ ಇತರ ರಾಜಕೀಯ ಪಕ್ಷಗಳೊಂದಿಗೆ ಚುನಾವಣಾ ಮೈತ್ರಿಯನ್ನು ಮಾಡಿಕೊಂಡಿರುವುದರಿಂದ, 'ಭ್ರಷ್ಟಾಚಾರ' ಹಾಗೂ 'ರಾಜಕೀಯ ಅಪರಾಧೀಕರಣ'ವನ್ನು ಹಿನ್ನಲೆಗೆ ತಳ್ಳಲಾಗಿದೆ.

ದೇಶಾದ್ಯಂತ ವಿವಿಧ ಪಕ್ಷಗಳಿಂದ 500 ಅಭ್ಯರ್ಥಿಗಳು ಲೋಕ ಸಭೆಯ ಚುನಾವಣೆಗೆ ಸ್ಪರ್ಧಿಸಿರುವುದನ್ನು ಸುಪ್ರೀಂ ಕೋರ್ಟಿನ ಮಾಜಿ ನ್ಯಾಯಾಧೀಶ ಕುಲದೀಪ್‌ಸಿಂಗ್ ನೇತೃತ್ವದ ತಂಡ ಗುರುತಿಸಿದೆ. ಔಟ್‌ಲುಕ್ ಪತ್ರಿಕೆಯು ರಚಿಸಿದ್ದ ಈ ತಂಡವು ಕೆಲವು ಮಾನದಂಡಗಳ ಆಧಾರದ ಮೇಲೆ ಅಭ್ಯರ್ಥಿಗಳನ್ನು ಹಿಂತೆಗೆದುಕೊಳ್ಳಬೇಕೆಂದು ಚುನಾವಣಾ ಆಯೋಗಕ್ಕೆ ಶಿಫಾರಸ್ಸು ಮಾಡಿತು. ಈ ವರದಿಯ ಪ್ರಕಾರ ಕ್ರಿಮಿನಲ್ ಆರೋಪ ಹೊತ್ತ ಕರ್ನಾಟಕದಲ್ಲಿ ನಾಲ್ಕು, ಬಿಹಾರದಲ್ಲಿ 60, ಉತ್ತರ ಪ್ರದೇಶದಲ್ಲಿ 30,

ಅಭ್ಯರ್ಥಿಗಳು ಚುನಾವಣಾ ಕಣದಲ್ಲಿ ಇದ್ದಾರೆ. ಸಿ.ಪಿ.ಐ. ಹಾಗೂ ಸಿ.ಪಿ.ಎಂ. ರಾಜಕೀಯ ಪಕ್ಷಗಳ ಹೊರತಾಗಿ, ಎಲ್ಲಾ ರಾಜಕೀಯ ಪಕ್ಷಗಳು ಕ್ರಿಮಿನಲ್ ಆರೋಪಿಗಳನ್ನು ಚುನಾವಣಾ ಕಣಕ್ಕಿಳಿಸಿದೆ.

ಚುನಾವಣಾ ಆಯೋಗ ನಿಯಮಿಸಿದ ಮೊತ್ತಕ್ಕಿಂತ ಹೆಚ್ಚಾಗಿಯೇ ಅಭ್ಯರ್ಥಿಗಳು ಹಣವನ್ನು ಖರ್ಚು ಮಾಡಿಸಿದ್ದಾರೆ. ಪ್ರತಿಯೊಂದು ರಾಜ್ಯದಲ್ಲಿ ರಾಜಕೀಯ ವ್ಯಕ್ತಿಗಳಿಗೆ ಹಣ ಹರಿದು ಬರುತ್ತಿರುವುದು ಹೆಂಡದ ದೊರೆಗಳಿಂದ ಹಾಗೂ ಮಾಫಿಯಾ ಗ್ಯಾಂಗ್‌ಗಳಿಂದ. ಅಂತಿಮವಾಗಿ ಹೆಂಡದ ದೊರೆಗಳು, ಮಾಫಿಯಾ ಗ್ಯಾಂಗ್‌ಗಳು ರಾಜಕೀಯ ವ್ಯಕ್ತಿಗಳೊಂದಿಗೆ ಶಾಮೀಲಾಗಿ ಆಡಳಿತ ಯಂತ್ರವನ್ನು ನಿಯಂತ್ರಿಸುವಂತಾಗುತ್ತದೆ.

ಭ್ರಷ್ಟಾಚಾರವನ್ನು ಸಾರಾಸಗಟಾಗಿ ವಿರೋಧಿಸುವ ಬಿ.ಜೆ.ಪಿ. ಭ್ರಷ್ಟಾಚಾರದ ಆರೋಪವನ್ನು ಹೊತ್ತ ಜಯಲಲಿತಾಳೊಂದಿಗೆ ಚುನಾವಣಾ ಮೈತ್ರಿಯನ್ನು ಮಾಡಿರುವುದು, ಉತ್ತರ ಪ್ರದೇಶದಲ್ಲಿ ಕಲ್ಯಾಣ್‌ಸಿಂಗ್ ಸರ್ಕಾರ ಬಾಬ್ರಿಮಸೀದಿ ಕೆಡುವಿದವರ ಮೇಲಿನ ಕ್ರಿಮಿನಲ್ ಆರೋಪಗಳನ್ನು ಹಿಂದಕ್ಕೆ ವಾಪಸ್ಸು ಪಡೆದಿರುವುದು, ಕ್ರಿಮಿನಲ್ ಆರೋಪಿಗಳನ್ನು ಮಂತ್ರಿಮಂಡಳದಲ್ಲಿ ಸೇರಿಸಿಕೊಂಡಿರುವುದು, ಎಲ್ಲಾ ಒಂದು ವಿಶೇಷ ಸಂದರ್ಭದಲ್ಲಿ ಎಂಬ ವಾದವನ್ನು ಮಂಡಿಸಿದೆ.

ಹವಾಲ ಹಗರಣದ ಆರೋಪ ತಮ್ಮಿಂದ ದೂರವಾಗುವವರೆಗೆ ತಾವು ಲೋಕಸಭೆಯನ್ನು ಪ್ರವೇಶಿಸುವುದಿಲ್ಲವೆಂದು ವಾದಿಸುತ್ತಿದ್ದ ಅದ್ವಾನಿಯವರು ಚುನಾವಣಾ ಪ್ರಚಾರದ ನೇತೃತ್ವವನ್ನು ವಹಿಸಿಕೊಂಡಿದ್ದರು. ಮಧ್ಯಪ್ರದೇಶದ ಧಾರ್ ಕ್ಷೇತ್ರದಿಂದ ಸ್ಪರ್ಧಿಸಿರುವ ದರಬಾರ್‌ರನ್ನು ಚುನಾವಣಾ ಆಯೋಗ ತಿರಸ್ಕರಿಸಿದೆ. 1981ರಲ್ಲಿ ದರಬಾರ್‌ಗೆ ಕೊಲೆ ಆರೋಪದ ಮೇಲೆ ಶಿಕ್ಷೆಯನ್ನು ವಿಧಿಸಲಾಗಿತ್ತು. ತನ್ನ ಮೊದಲ ಪತ್ನಿಯನ್ನು ಕೊಂದ ಆಪಾದನೆಗೆ ಗುರಿಯಾದ ಅಜಯ್‌ಸಿಂಗ್‌ಗೆ ಉತ್ತರ ಪ್ರದೇಶದಿಂದ ಸ್ಪರ್ಧಿಸಲು ಬಿ.ಜೆ.ಪಿ. ಟಿಕೆಟ್ ನೀಡಿದೆ.

ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಭ್ರಷ್ಟಾಚಾರದ ವಿರುದ್ಧ ದನಿ ಎತ್ತಿರುವುದು ಕೇವಲ ಸೋಗಲಾಡಿತನವನ್ನು ಬಯಲಿಗೆಳೆಯುತ್ತದೆ. ಭೋಫರ್ಸ್ ಹಗರಣ, ಯೂರಿಯಾ ಹಗರಣ, ಮುಂತಾದ ಹಗರಣಗಳು ನಿರೀಕ್ಷೆ ಮಾಡಿದಷ್ಟು ಚರ್ಚೆಗೊಳಗಾಗುತ್ತಿಲ್ಲ. ಭ್ರಷ್ಟಾಚಾರದಲ್ಲಿ ಮುಳುಗಿರುವ ಸತೀಶ್ ಶರ್ಮ, ಬಲರಾಂ ಜಾಖಿಡ್, ವಿ. ಸಿ. ಶುಕ್ಲಾ ಇವರುಗಳ ಹೆಸರು ಭ್ರಷ್ಟಾಚಾರದ ಪಟ್ಟಿಯಲ್ಲಿ ಮೊದಲು ಬರುತ್ತದೆ. ಅನೈತಿಕತೆಯೇ ಒಂದು ಅರ್ಹತೆಯೆಂಬಂತೆ ಕಾಂಗ್ರೆಸ್ ಇವರುಗಳಿಗೆಲ್ಲಾ ಟಿಕೇಟ್ ನೀಡಿದೆ. ಕಾಂಗ್ರೆಸ್‌ನ 16 ಮಂದಿ ಮಾಜಿ ಸಚಿವರು ಹಲವಾರು ಹಗರಣಗಳಲ್ಲಿ ಮೊಕದ್ದಮೆಯನ್ನು ಎದುರಿಸುತ್ತಿದ್ದರೂ ಅವರೆಲ್ಲಾ ಕಾಂಗ್ರೆಸ್‌ನಿಂದ ಟಿಕೆಟ್ ಪಡೆದಿದ್ದಾರೆ.

ಸಂಯುಕ್ತ ರಂಗದ ನಾಯಕರುಗಳು, ಸ್ಥಳೀಯ ಮಟ್ಟದ ನಾಯಕರು ಭ್ರಷ್ಟಾಚಾರದ ಆರೋಪವನ್ನು ಹೊತ್ತಿದ್ದಾರೆ. 5,000 ಕೋಟಿ ರೂ. ಮೇವು ಹಗರಣದಲ್ಲಿ ಶಾಮೀಲಾಗಿರುವ ಬಿಹಾರದ ಮಾಜಿ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್ ರಾಷ್ಟ್ರೀಯ ಜನತಾದಳದ ನೇತಾರರಾಗಿದ್ದಾರೆ. ಅಸ್ಸಾಂ ಮುಖ್ಯಮಂತ್ರಿಯು ಹಾಗೂ ಅವರ ಹೆಂಡತಿಯು ಸಹ ಭ್ರಷ್ಟಾಚಾರದ ಆರೋಪಕ್ಕೆ ಒಳಗಾಗಿದ್ದಾರೆ.

12ನೇ ಲೋಕಸಭೆಯ ಚುನಾವಣೆಯಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಪ್ರಾಮಾಣಿಕತೆ, ಸಚ್ಚಾರಿತ್ರ್ಯ, ನೈತಿಕತೆ ಮಾರ್ಗದರ್ಶಿಯಾಗಬೇಕಾಗಿತ್ತು. ಆದರೆ ಈ ಬಾರಿಯ ಚುನಾವಣೆಯಲ್ಲಿ ಇವುಗಳನ್ನು ಸಂಪೂರ್ಣವಾಗಿ ತಿಲಾಂಜಲಿ ನೀಡಲಾಗಿದೆ. ಭ್ರಷ್ಟಾಚಾರದ ವಿರುದ್ಧ ಹೋರಾಡುವ ಭರವಸೆಯನ್ನು ಪಕ್ಷಗಳು ಜನರಿಗೆ ನೀಡಿದ್ದರೂ, ಭ್ರಷ್ಟಾಚಾರಿಗಳಿಗೆ, ಕ್ರಿಮಿನಲ್ ಆರೋಪಿಗಳಿಗೆ ಟಿಕೇಟ್ ನೀಡಿವೆ.

ಕಳೆದ 11ನೆಯ ಲೋಕಸಭೆಯಲ್ಲಿ ಆಯ್ಕೆಯಾದ 40 ಜನ ಸಂಸತ್ ಸದಸ್ಯರ ಮೇಲೆ ಕ್ರಿಮಿನಲ್ ಆರೋಪಗಳಿದ್ದವು. ಈ ಹಿನ್ನೆಲೆಯಲ್ಲಿ ಚುನಾವಣಾ ಆಯೋಗ ಸಹ ಮಾಡಿದ ಪ್ರಯತ್ನ ಹೆಚ್ಚು ಪರಿಣಾಮಕಾರಿಯಾಗಿಲ್ಲ.

ಕ್ರಿಮಿನಲ್ ಆರೋಪಿಗಳು ಚುನಾವಣಾ ಕಣದಲ್ಲಿರುವುದಕ್ಕೂ, ಚುನಾವಣಾ ಹಿಂಸೆಗೂ ಅತ್ಯಂತ ಹತ್ತಿರದ ಸಂಬಂಧವಿದೆ. ಬಿಹಾರ ಹಾಗೂ ಉತ್ತರ ಪ್ರದೇಶದಲ್ಲಿ ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳನ್ನು ಗಮನಿಸಿದರೆ ಚುನಾವಣಾ ಹಿಂಸೆಯ ಸ್ವರೂಪವನ್ನು ಊಹಿಸಿಕೊಳ್ಳಬಹುದು. ಇಂದು ರಾಜಕೀಯ ಪಕ್ಷಗಳು ಧ್ರುವೀಕರಣಗೊಳ್ಳುತ್ತಿರುವುದನ್ನು ನೋಡಿದರೆ, ಭ್ರಷ್ಟಾಚಾರ ಹಾಗೂ ಕೋಮುವಾದದ ನಡುವೆ ಆಯ್ಕೆ ಮಾಡಿಕೊಳ್ಳಬೇಕಾದ ಅನಿವಾರ್ಯ ಸ್ಥಿತಿಯನ್ನು ಕೃತಕವಾಗಿ ಹುಟ್ಟುಹಾಕಲಾಗಿದೆ. ಇತ್ತೀಚೆಗೆ ನಗರದಲ್ಲಿ ಏರ್ಪಡಿಸಲಾಗಿದ್ದ ವಿಚಾರ ಸಂಕಿರಣದಲ್ಲಿ "ಧರ್ಮದ ದುರ್ಬಳಕೆ ಭ್ರಷ್ಟಾಚಾರಕ್ಕಿಂತ ಅಪಾಯಕಾರಿಯಾದುದು, ಎಂದು ಒಂದು ಅಭಿಪ್ರಾಯವಾದರೆ, ಭ್ರಷ್ಟಾಚಾರವೂ ಮತಾಂಧತೆಯಷ್ಟೇ ಅಪಾಯಕಾರಿದಾದುದು ಎನ್ನುವ ನಿಲುವೂ ಸಹ ವ್ಯಕ್ತವಾಯಿತು.

ಮತಾಂಧತೆ, ಭ್ರಷ್ಟಾಚಾರ ಎರಡನ್ನು ಒಟ್ಟಾರೆಯಾಗಿ ವಿರೋಧಿಸಲೇಬೇಕಾಗಿದೆ. ಈ ಆಯ್ಕೆಯನ್ನು ಜನರು ಮಾಡಲೇಬೇಕಾಗಿದೆ. ಈ ಕೃತಕ ಅನಿವಾರ್ಯತೆ ಎಷ್ಟೋ ಸೂಕ್ಷ್ಮ ಅಂಶಗಳನ್ನು ಮರೆಮಾಚುತ್ತದೆ. ಒಂದನ್ನು ವಿರೋಧಿಸುವುದು, ಇನ್ನೊಂದರ ಸಮರ್ಥನೆಯೂ ಆಗಬಾರದು.

ಭ್ರಷ್ಟಾಚಾರದ ಆರೋಪ ಹೊತ್ತಿರುವ ವ್ಯಕ್ತಿಗಳ ಹಾಗೂ ಕ್ರಿಮಿನಲ್ ಆರೋಪಿಗಳ ಕೈಗೆ ಆಡಳಿತವನ್ನು ನೀಡಿದರೆ ಭ್ರಷ್ಟಾಚಾರ ಹಾಗೂ ರಾಜಕೀಯ ಅಪರಾಧೀಕರಣವನ್ನು ಸಾಂಸ್ಥಿತಿಕಗೊಳಿಸಿದ ಹಾಗಾಗುತ್ತದೆ. ಒಮ್ಮೆ ಸಾಂಸ್ಥಿಕಗೊಂಡ ಇವುಗಳನ್ನು ಬೇರು ಸಹಿತ ಕೀಳುವುದು ಕ್ಲಿಷ್ಟಕರವಾದುದು.

ಮಹಿಳಾ ಸಂಘಟನೆಗಳು ಹಾಗೂ ಮಹಿಳಾ ರಾಜಕಾರಣಿಗಳು, ಭ್ರಷ್ಟಾಚಾರದ ಹಾಗೂ ರಾಜಕೀಯ ಅಪರಾಧೀಕರಣದ ವಿರುದ್ಧ ದನಿ ಎತ್ತುತ್ತಾ ಬಂದಿದ್ದಾರೆ. ಮಹಿಳೆಯರು ರಾಜಕೀಯ ಅಧಿಕಾರವನ್ನು ಪಡೆದಲ್ಲಿ, ಸಂಪೂರ್ಣವಾಗಿ ಅಲ್ಲದಿದ್ದರೂ ಈ ಮಟ್ಟದ ಭ್ರಷ್ಟಾಚಾರ ನಡೆಯಲಾರದು ಎಂಬ ಭರವಸೆಯನ್ನು ಮಹಿಳೆಯರು ಹೊಂದಿದ್ದಾರೆ, ಮಹಿಳೆಯರಿಗೆ ಸೂಕ್ತ ಪಾಲುಗಾರಿಕೆಯಿಲ್ಲದೆ ಹಾಗು ಸಮರ್ಥ ಮಹಿಳೆಯರು ಆಡಳಿತ ವಿಭಾಗದಲ್ಲಿ ಇಲ್ಲದ ಕಾರಣ ದೇಶದಲ್ಲಿ ಭ್ರಷ್ಟಾಚಾರ ಹೆಚ್ಚಾಗಿದೆಯೆಂದು ಜವಹರ್‌ಲಾಲ್ ವಿಶ್ವವಿದ್ಯಾನಿಲಯದ ಮುಖ್ಯಸ್ಥ ಪ್ರೊ. ಆನಂದಕುಮಾರ್ ಪ್ರತಿಪಾದಿಸಿದ್ದಾರೆ.

ಕಳೆದ ಲೋಕಸಭೆ ಚುನಾವಣೆಗೆ ಮುನ್ನ ಹಾಗೂ ನಂತರ, ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಮಹಿಳೆಯರಿಗೆ ಶೇ. 33 ಮೀಸಲಾತಿಯನ್ನು ಕೊಡುವುದಾಗಿ ಘೋಷಿಸಿದವು. ಮಸೂದೆಯನ್ನು ಬೆಂಬಲಿಸುವಲ್ಲಿ ಒಮ್ಮತವು ಕಂಡುಬಂದಿದ್ದರೂ ಚುನಾವಣೆಯ ಸಂದರ್ಭದಲ್ಲಿ ಮಹಿಳೆಯರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿರುವುದು ಕಂಡುಬಂದಿದೆ. ಚುನಾವಣೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಮಹಿಳೆಯರಿಗೆ ನೀಡಿದ ಭರವಸೆಯನ್ನು ಸಂಪೂರ್ಣವಾಗಿ ಗಾಳಿಗೆ ತೂರಲಾಗಿದೆ.

ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರಿಗೆ ಪ್ರಮುಖ ರಾಜಕೀಯ ಪಕ್ಷಗಳು ನೀಡಿದ ಆಶ್ವಾಸನೆ ಇಂದು ಕೇವಲ ಟೊಳ್ಳು ಆಶ್ವಾಸನೆ ಎಂಬುದು ಸಾಬೀತಾಗಿದೆ. ಮಹಿಳೆಯರ ಪರವಾಗಿ ಕಾಳಜಿ ತೋರುವ ರಾಜಕೀಯ ಪಕ್ಷಗಳು, ಶಾಸನಬದ್ಧವಾಗಿ ಅವಕಾಶವನ್ನು ಕೊಡುವುದನ್ನು ಕಾಯುವುದಾದರೆ, ಅವುಗಳ ಹಿಂದಿರುವ ಪ್ರಾಮಾಣಿಕ ಕಾಳಜಿಯನ್ನು ಮಹಿಳೆಯರು ಪ್ರಶ್ನಿಸಬೇಕಾಗಿದೆ. ಮಹಿಳೆಯರನ್ನು ರಾಜಕೀಯ ಮುಖ್ಯವಾಹಿನಿಯಲ್ಲಿ ತೊಡಗಿಸಬೇಕಾದ ಪ್ರಕ್ರಿಯೆ ಪಕ್ಷದ ಹಂತದಿಂದ ಪ್ರಾರಂಭವಾಗಬೇಕಾಗುತ್ತದೆ. ಇಂದು ಲೋಕಸಭೆಯ ಚುನಾವಣಾ ಪ್ರಕ್ರಿಯೆಯಲ್ಲಿ ಮಹಿಳಾ ಮೀಸಲಾತಿಯ ಬಗ್ಗೆ ಪಕ್ಷದ ಪುರುಷ ನಾಯಕರುಗಳಲ್ಲಿರುವ ಒಳಮನಸ್ಸಿನ ಧೋರಣೆಯು ಸ್ಪಷ್ಟವಾಗಿ ಗೋಚರವಾಗುತ್ತಿದೆ.

ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಅರ್ಧ ಪುಟಗಳಿಗಿಂತ ಕಡಿಮೆ ಪುಟಗಳನ್ನು ಮಹಿಳೆಯರಿಗೆ ಮೀಸಲಿಡಲಾಗಿದೆ. ಮಹಿಳಾ ಆಯೋಗದ ಅಧ್ಯಕ್ಷರು, ಪಕ್ಷದ ಅಧ್ಯಕ್ಷ ಸೀತಾರಾಮ ಕೇಸರಿಯವರನ್ನು ಭೇಟಿ ಮಾಡಿ, ಪ್ರಸ್ತುತ ಚುನಾವಣೆಯಲ್ಲಿ ಮಹಿಳೆಯರ ಸಮಸ್ಯೆಗಳಿಗೆ ಹೆಚ್ಚು ಒತ್ತು ನೀಡಬೇಕೆಂದು ಕೋರಿದಾಗ ಅವರನ್ನು ಅವಮಾನ ಮಾಡಿ ಕಳಿಸಲಾಯಿತು. ಮಹಿಳೆಯರ ಕುರಿತು ಮೂಲಭೂತವಾಗಿ ಕಾಳಜಿಯಿಲ್ಲದ ಕಾಂಗ್ರೆಸ್ ಪಕ್ಷ ಇಂದು ಸೋನಿಯಾ ಗಾಂಧಿಯವರ ಮೂಲಕ ಮಹಿಳಾ ಓಟ್ ಬ್ಯಾಂಕ್‌ನ ಸಿಂಪತಿಯನ್ನು ಪಡೆಯಲು ಪ್ರಯತ್ನಿಸುತ್ತಿದೆ. ಬಿ.ಜೆ.ಪಿ. ತನ್ನ ಪ್ರಣಾಳಿಕೆಯಲ್ಲಿ ಮಹಿಳಾ ಮೀಸಲಾತಿಯನ್ನು ಸಂಪೂರ್ಣವಾಗಿ ಬೆಂಬಲಿಸುವುದಾಗಿ ಹೇಳಿದ್ದರೂ, ಚುನಾವಣಾ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಕ್ಷೇತ್ರದಲ್ಲಿ ಗೆಲ್ಲುವ ಸಾಧ್ಯತೆ ಹಾಗೂ ಸಾಮರ್ಥ್ಯವನ್ನು ಅವಲಂಬಿಸಿ ಆರಿಸಲಾಗುವುದು ಎಂದು ಜೊತೆಯಲ್ಲಿಯೇ ಹೇಳಿತು. ಸಂಯುಕ್ತ ರಂಗ ಹಾಗೂ ದೇಶದ ಎಲ್ಲಾ ರಾಜ್ಯಗಳಲ್ಲಿರುವ ಪ್ರಾದೇಶಿಕ ಪಕ್ಷಗಳಲ್ಲಿ ಕಂಡುಬರುವುದು ಇದೇ ಚಿತ್ರಣ. 12ನೇ ಲೋಕಸಭಾ ಚುನಾವಣೆಯಲ್ಲಿ ಕ್ರಿಮಿನಲ್‌ಗಳಿಗೆ ಟಿಕೇಟ್ ಕೊಟ್ಟಿರುವುದನ್ನು ಪ್ರಸ್ತಾಪಿಸಿದಾಗ ಸುಷ್ಮಾ ಸ್ವರಾಜ್ ಗೆಲ್ಲುವ ವ್ಯಕ್ತಿಯನ್ನು ಹುಡುಕುವುದೇ ಮುಖ್ಯ ಕ್ರೈಟೀರಿಯಾ ಎಂದು ಹೇಳಿದ್ದಾರೆ.

ಚುನಾವಣೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ 'ಗೆಲ್ಲುವ ಸಂದರ್ಭ'ವನ್ನು ಪ್ರಮುಖವಾಗಿ ಪರಿಗಣಿಸಲಾಗುತ್ತದೆ. ಪ್ರಸ್ತುತ ರಾಜಕೀಯ ವಾತಾವರಣದ ಸಂದರ್ಭದಲ್ಲಿ ಗೆಲ್ಲುವ ಸಾಮರ್ಥ್ಯದ ಆಧಾರದ ಮೇಲೆ ನಿರ್ಧರಿಸುವುದಾದರೆ ಚುನಾವಣಾ ರಾಜಕೀಯದಲ್ಲಿ ಸ್ತ್ರೀಯರು ಭಾಗವಹಿಸಲು ಸಾಧ್ಯವಾಗುವುದೇ ಇಲ್ಲ. ಹಣದ ಪ್ರಭಾವ, ಭ್ರಷ್ಟಾಚಾರ, ರಾಜಕೀಯ ಅಪರಾಧೀಕರಣ, ಬಲ ಪ್ರದರ್ಶನ ಮುಂತಾದವುಗಳ ನಡುವೆ ಮಹಿಳೆಯರು ಗೆಲ್ಲುವ ಸಾಮರ್ಥ್ಯವನ್ನು ಪಡೆಯಲಾರರು. ಅದು ಮಹಿಳೆಯ ರಾಜಕೀಯ ಪರಿಕಲ್ಪನೆಯು ಆಗುವ ಅವಶ್ಯಕತೆ ಇಲ್ಲ. ಈ ಹಿನ್ನೆಲೆಯಲ್ಲಿ ಮಹಿಳೆಯರಲ್ಲಿ ಗೆಲ್ಲುವ ಅಭ್ಯರ್ಥಿಗಳ ಕೊರತೆ ಕಂಡುಬರುತ್ತಿದೆಯೆಂಬ ನೆಪವನ್ನು ರಾಜಕೀಯ ಪಕ್ಷಗಳು ಮಹಿಳೆಯರ ಮುಂದೆ ಒಡ್ಡುತ್ತಿವೆ.

ಆಂಧ್ರದ ಹೆಚ್ಚು ಪಾಲು ಲೋಕಸಭಾ ಕ್ಷೇತ್ರಗಳಲ್ಲಿ ಪುರುಷರಿಗಿಂತ ಹೆಚ್ಚು ಸಂಖ್ಯೆಯಲ್ಲಿ ಮಹಿಳೆಯರಿದ್ದರೂ ಟಿಕೇಟ್ ನೀಡುವ ದೃಷ್ಟಿಯಿಂದ ಇದು ಯಾವ ಮಹತ್ವದ ಪಾತ್ರವನ್ನು ವಹಿಸಲಿಲ್ಲ. ರಾಜ್ಯದ ಒಟ್ಟು 42 ಕ್ಷೇತ್ರಗಳಲ್ಲಿ ಪುರುಷರಿಗಿಂತ ಮಹಿಳೆಯರು ಅಧಿಕವಾಗಿದ್ದಾರೆ. ಕಾಂಗ್ರೆಸ್ 3 ಜನ ಮಹಿಳೆಯರಿಗೆ ಟಿಕೇಟ್ ನೀಡಿದ್ದರೆ, ಬಿಜೆಪಿ ಒಂದು ಟಿಕೇಟ್ ನೀಡಿದೆ. ಸಿ.ಪಿ.ಎಂ. ಹಾಗೂ ಟಿ.ಡಿ.ಪಿ. ಒಂದು ಸೀಟನ್ನು ನೀಡಿಲ್ಲ.

ಕೇರಳ ರಾಜ್ಯದಲ್ಲಿ ಪುರುಷರಿಗಿಂತ ಮಹಿಳೆಯರ ಸಂಖ್ಯೆ ಅಧಿಕವಾಗಿದೆ. 1000ರ ಪುರುಷರಿಗೆ 1036 ಮಹಿಳೆಯರು ಇದ್ದರೂ, ರಾಜಕೀಯ ಪಕ್ಷಗಳು ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯ ನೀಡದಿರುವುದು ಕಂಡು ಬರುತ್ತದೆ. ಗ್ರಾಮ ಪಂಚಾಯತಿ ಹಂತದಲ್ಲಿ ಮಹಿಳಾ ಮೀಸಲಾತಿಯನ್ನು ನೀಡಿ, ಮಹಿಳಾ ಮೀಸಲಾತಿಯ ಹಿರಿಮೆ ತನ್ನದೆನ್ನುವ ಕರ್ನಾಟಕ ರಾಜ್ಯದಲ್ಲಿ ಕೇವಲ ಮೂರು ಜನ ಮಹಿಳೆಯರು ಚುನಾವಣಾ ಕಣದಲ್ಲಿದ್ದರು.

ಮಹಿಳೆಯರಿಗೆ ಟಿಕೇಟ್ ಕೊಡಲು ಹಿಂಜರಿಯುವ ರಾಜಕೀಯ ಪಕ್ಷಗಳು ತಮ್ಮ ಪಕ್ಷದಲ್ಲಿರುವ ಮಹಿಳಾ ನಾಯಕಿಯರನ್ನು ಮಾತ್ರ "ಮಹಿಳೆಯರ ಓಟ್ ಬ್ಯಾಂಕ್"ಗಳಿಸಲು ಉಪಯೋಗಿಸುತ್ತಿರುವುದು ಕಂಡುಬರುತ್ತಿದೆ. ಮಹಿಳೆಯರನ್ನು ಕುರಿತು ವಿಶೇಷವಾಗಿ ಮನವಿ ಮಾಡುವುದು, ಆಶ್ವಾಸನೆಗಳನ್ನು ನೀಡುವುದು, ಸಂಪ್ರದಾಯದ ಭಾವನಾತ್ಮಕ ನೆಲೆಗಳನ್ನು ಗುರುತಿಸಿ ಮಾತನಾಡುವುದು ಒಂದು ಚುನಾವಣಾ ತಂತ್ರವಾಗಿದೆ. ಸೋನಿಯಾ ಗಾಂಧಿಯ ಮತಯಾಚನೆಯಲ್ಲಿ ಈ ಅಂಶಗಳನ್ನು ಗುರುತಿಸಬಹುದು. ಸ್ತ್ರೀಯರ ಸಂಪ್ರದಾಯಿಕ ಪಾತ್ರವನ್ನು ಬಲಪಡಿಸುತ್ತಲೇ, ಸ್ಥಿರ ಸರ್ಕಾರದ ರಚನೆಗಾಗಿ ವಿಶೇಷವಾಗಿ ಓಟು ನೀಡಬೇಕೆಂದು ಬಿ.ಜೆ.ಪಿ.ಯ ಸುಷ್ಮಾ ಸ್ವರಾಜ್ ಕೇಳಿದ್ದರು.

ರಾಜಕೀಯ ಪಕ್ಷಗಳ ದ್ವಿಮುಖ ನೀತಿಯನ್ನು ಮಹಿಳಾ ಸಂಘಟನೆಗಳು, ಚುನಾವಣಾ ರಾಜಕೀಯ ಆಸಕ್ತ ಮಹಿಳೆಯರು ಪ್ರಸ್ತುತ ಸಂದರ್ಭದಲ್ಲಿ ಪ್ರತಿಭಟಿಸುತ್ತಿದ್ದಾರೆ. ಗ್ರಾಮ ಪಂಚಾಯಿತಿಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡಿರುವುದರಿಂದ ಕೆಲವು ಉತ್ತಮ ಬದಲಾವಣೆಗಳನ್ನು ಗಮನಿಸಲೇ ಬೇಕಾಗುತ್ತೆ. ಮಹಿಳೆಯರ ಸಾಕ್ಷರತೆ, ಆರೋಗ್ಯ ಸೌಲಭ್ಯ, ಕುಡಿಯುವ ನೀರು, ರಸ್ತೆ ಮುಂತಾದ ಪ್ರಾಥಮಿಕ ಸೌಲಭ್ಯಗಳನ್ನು ತರುವಲ್ಲಿ ಮಹಿಳೆಯರು ಪ್ರಧಾನ ಪಾತ್ರವನ್ನು ವಹಿಸಿದ್ದಾರೆ. ಆದರೆ ಮೇಲ್ಮುಕದ ರಾಜಕೀಯ ಪ್ರಕ್ರಿಯೆಯಲ್ಲಿ ಮಹಿಳೆಯರು ಹಿಂದೆ ಉಳಿದಿರುವುದು ಗಂಭೀರವಾಗಿ ಯೋಚಿಸಬೇಕಾದ ಸಂಗತಿಯಾಗಿದೆ.

ಮಹಿಳೆಯರಿಗೆ ಚುನಾವಣೆಯಲ್ಲಿ ಅವಕಾಶ ನೀಡುವ ಭರವಸೆ ನೀಡಿದ್ದ, ಸಂಸತ್ತಿನಲ್ಲಿ ಮೀಸಲಾತಿಯನ್ನು ಬೆಂಬಲಿಸುತ್ತೇವೆಂದು ಪಣ ತೊಟ್ಟ ಎಲ್ಲಾ ರಾಜಕೀಯ ಪಕ್ಷಗಳು ಅದನ್ನು ಕಾರ್ಯ ರೂಪಕ್ಕೆ ತಂದಿಲ್ಲ. ಇದನ್ನು ಪ್ರತಿಭಟಿಸಿ ನವದೆಹಲಿಯಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಬಯಸಿದ್ದ ಮಹಿಳೆಯರು ರಾಜಕೀಯ ಪಕ್ಷಗಳು ತಮಗೆ ಟಿಕೆಟ್ ನೀಡದಿರುವುದನ್ನು ವಿರೋಧಿಸಿ ಸಂಘಟನೆಯೊಂದನ್ನು ರೂಪಿಸಿದ್ದಲ್ಲದೆ ಮಹಿಳೆಯರ ಪರವಾಗಿ ಒಮ್ಮತದ ಅಭ್ಯರ್ಥಿಯನ್ನು ಚುನಾವಣೆಗೆ ನಿಲ್ಲಿಸುವ ಮೂಲಕ ರಾಜಕೀಯ ಸಾಮರ್ಥ್ಯವನ್ನು ರಾಜಕೀಯ ಪಕ್ಷಗಳಿಗೆ ತೋರಿಸುವ ಉದ್ದೇಶವನ್ನು ಸಂಘಟನೆ ಅಧ್ಯಕ್ಷೆ ಮೋಹಿನಿಗಿರಿಯವರು ವ್ಯಕ್ತಪಡಿಸಿದ್ದರು. ಆದರೆ ಆ ಪ್ರಯತ್ನಕ್ಕೆ ಬೆಂಬಲ ದೊರೆಯಲಿಲ್ಲ. ಈ ಸಂಘಟನೆಯು ಕೆಲವು ಸ್ಥಾನಗಳನ್ನು ಮಹಿಳೆಯರಿಗೆ ಬಿಟ್ಟುಕೊಡುವಂತೆ ಕೇಳುವ ಪ್ರಯತ್ನವನ್ನು ಸಹ ಮಾಡಲಾಯ್ತು.

12ನೇ ಲೋಕಸಭೆಯ ಚುನಾವಣಾ ಸಂದರ್ಭದಲ್ಲಿ ಹಲವಾರು ಮಹಿಳಾ ಸಂಘಟನೆಗಳು ತಮ್ಮ ಹಲವಾರು ಬೇಡಿಕೆಗಳನ್ನು ರಾಜಕೀಯ ಪಕ್ಷಗಳ ಮುಂದೆ ಇಟ್ಟು ಚರ್ಚೆಯನ್ನೆತ್ತುವ ಪ್ರಯತ್ನಗಳನ್ನು ಮಾಡಿದವು. "ಶಾಸನ ಸಭೆಗಳಲ್ಲಿ ಮಹಿಳೆಯರಿಗೆ 33 ಪ್ರತಿಶತ ಮೀಸಲಾತಿಯ ಪ್ರಮುಖ ಬೇಡಿಕೆಯೊಂದಿಗೆ ರಾಜಕೀಯ, ಆರ್ಥಿಕ, ಸಾಮಾಜಿಕ ಬೇಡಿಕೆಗಳನ್ನು ರಾಜಕೀಯ ಪಕ್ಷಗಳ ಮುಂದೆ ಇಟ್ಟವೆ. ಈ ಹಿನ್ನೆಲೆಯಲ್ಲಿ ಜನವಾದಿ ಮಹಿಳಾ ಸಂಘಟನೆ ನೇತೃತ್ವದಲ್ಲಿ ಇತರ ಮಹಿಳಾ ಸಂಘಟನೆಗಳು ವಿವಿಧ ರಾಜಕೀಯ ಪಕ್ಷಗಳೊಂದಿಗೆ ಮಹಿಳೆಯರ ಬೇಡಿಕೆಗಳನ್ನು, ಆಶ್ವಾಸನೆಗಳನ್ನು ಮುಖಾಮುಖಿಯಾಗಿ ಪ್ರಶ್ನಿಸುವ ಪ್ರಯತ್ನವನ್ನು ಮಾಡಿತು.

"ಎಲ್ಲಾ ರಾಜಕೀಯ ಪಕ್ಷಗಳು ಮಹಿಳೆಯರನ್ನು ಕಡೆಗಣಿಸಲಾಗಿದ್ದು, ಪರಿಸ್ಥಿತಿ ಹಾಗೆ ಮುಂದುವರಿದರೆ, ಮಹಿಳೆಯರಿಗಾಗಿಯೇ ರಾಷ್ಟ್ರೀಯ ಪಕ್ಷವನ್ನು ಕಟ್ಟುವ ದಿನ ದೂರ ಇಲ್ಲವೆಂದು ರಾಷ್ಟ್ರೀಯ ಮಹಿಳಾ ಒಕ್ಕೂಟ ಹೇಳಿತು. ಜನರನ್ನು ಆಕರ್ಷಿಸಲು ಚುನಾವಣಾ ಸಂದರ್ಭದಲ್ಲಿ ಮಹಿಳೆಯರನ್ನು ಮುಂದಿಟ್ಟುಕೊಂಡು ಪ್ರಚಾರ ಮಾಡುವ ರಾಜಕೀಯ ಪಕ್ಷಗಳು ಚುನಾವಣೆಯ ನಂತರ ಅವರನ್ನು ಕಡೆಗಣಿಸುವವೆಂದು ಒಕ್ಕೂಟ ಹೇಳಿತು.

ಒಟ್ಟು 4,693 ಅಭ್ಯರ್ಥಿಗಳು ಚುನಾವಣಾ ಕಣದಲ್ಲಿ ಸ್ಪರ್ಧಿಸಿದ್ದು, ಇವರಲ್ಲಿ ಕೇವಲ 252 ಮಹಿಳೆಯರು ಚುನಾವಣೆಯಲ್ಲಿ ಸ್ಪರ್ಧಿಸಿದರು. ಕಳೆದ ಬಾರಿಯ ಚುನಾವಣೆಗೆ ಹೋಲಿಸಿದರೆ, ಮಹಿಳಾ ಅಭ್ಯರ್ಥಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿರುವುದು ಕಂಡುಬಂದಿದೆ. 11ನೇ ಲೋಕಸಭೆಯ ಚುನಾವಣೆಯಲ್ಲಿ 13,886 ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದು, ಅವರಲ್ಲಿ 599 ಜನ ಮಹಿಳೆಯರು ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಈ ಬಾರಿ ಸ್ಪರ್ಧಿಸಿದ್ದ ಒಟ್ಟು ಅಭ್ಯರ್ಥಿಗಳ ಸಂಖ್ಯೆಯು ಶೇ. 5.36 ಇದೆ.

ಅರುಣಾಚಲ ಪ್ರದೇಶ, ಲಕ್ಷ ದ್ವೀಪ, ಪುದುಚೇರಿ, ಸಿಕ್ಕಿಂ, ನಾಗಾಲ್ಯಾಂಡ್, ಮಿಜೋರಾಂ ಮುಂತಾದ ಕಡೆಗಳಲ್ಲಿ ಮಹಿಳಾ ಸ್ಪರ್ಧಿಗಳೇ ಇರಲಿಲ್ಲ.

ಕೋಮುವಾದ, ಜಾತ್ಯಾತೀತತೆ ಮತ್ತು ಜಾತಿ ರಾಜಕಾರಣ

ಭಾರತದ ಚುನಾವಣಾ ರಾಜಕೀಯದಲ್ಲಿ ಕೋಮುವಾದ ಹಾಗೂ ಜಾತ್ಯಾತೀತತೆಯ ಪ್ರಶ್ನೆಗಳು ಪಡೆದಿರುವಷ್ಟು ಮಹತ್ವವನ್ನು ಬೇರೆ ಯಾವುದೇ ವಿಷಯವು ಪಡೆಯದಿರುವುದು ಏಕೆ ಎಂಬ ಪ್ರಶ್ನೆಯನ್ನು ಪ್ರತಿಯೊಬ್ಬ ಮತದಾರ, ಮತದಾರಳು ಯೋಚಿಸಬೇಕಾಗಿರುವ ಮುಖ್ಯ ಸಮಸ್ಯೆಯಾಗಿದೆ. ಇದು ದೈನಂದಿನ ಬದುಕಿನಲ್ಲಿ ಮಹತ್ವವಾದ ಪ್ರಶ್ನೆಯಾಗಿದೆಯೆ? ಅಥವಾ ರಾಜಕೀಯ ಪಕ್ಷಗಳು ಇವುಗಳು ಚುನಾವಣೆಯ ಕೇಂದ್ರ ವಿಷಯವನ್ನಾಗಿ ಸದಾ ಚಲಾವಣೆಯಲ್ಲಿ ಇರುವಂತೆ ಮಾಡುತ್ತಿವೆಯೆ? ಕೋಮುವಾದ, ಜಾತ್ಯಾತೀತತೆ, ಧರ್ಮ ನಿರಪೇಕ್ಷತೆಯನ್ನು ಪ್ರತಿಯೊಂದು ರಾಜಕೀಯ ಪಕ್ಷಗಳು ಓಟುಗಳಿಕೆಯ ಒಂದು ಕಾರ್ಯ ತಂತ್ರವನ್ನಾಗಿಸುತ್ತಿರುವುದು ಸ್ವತಂತ್ರ ಬಂದ 50 ವರ್ಷಗಳಲ್ಲಿ ಸ್ಪಷ್ಟವಾಗಿದೆ. ನಮ್ಮ ದೇಶವನ್ನು ಕಾಡುವ ಈ ಜ್ವಲಂತ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಕಂಡುಹಿಡಿಯುವ ಉದ್ದೇಶ ಯಾವ ಪಕ್ಷಗಳಿಗೂ ಇಲ್ಲದಿರುವುದು ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಕೋಮುವಾದವನ್ನು ಪ್ರತಿಬಿಂಬಿಸುವ, ವಿರೋಧಿಸುವ, ಪಕ್ಷಗಳ ಹಾಗೂ ಚುನಾವಣಾ ಮೈತ್ರಿಯ ಹಿನ್ನೆಲೆಯಲ್ಲಿ ಈ ಪ್ರಶ್ನೆಗಳನ್ನು ನೋಡಬೇಕಾಗುತ್ತದೆ.

ಬಿ.ಜೆ.ಪಿ. ಮೇಲುನೋಟಕ್ಕೆ ತನ್ನ ಸಿದ್ಧಾಂತಗಳಿಗೆ ಕುರುಡಾಗಿ ಬದ್ಧವಾಗಿಲ್ಲವೆಂದು ಹೇಳಿಕೊಂಡರೂ ಪ್ರಣಾಳಿಕೆಯಲ್ಲಿನ ಅಂಶಗಳು ಬಿ.ಜೆ.ಪಿ.ಯ ನೈಜ ಉದ್ದೇಶವನ್ನು ಸ್ಪಷ್ಟಗೊಳಿಸಿದೆ. ರಾಮಮಂದಿರದ ನಿರ್ಮಾಣ, ಸಂವಿಧಾನದ 370ನೇ ವಿಧಿಯನ್ನು ರದ್ದುಪಡಿಸುವುದು, ಸಮಾನ ನಾಗರೀಕ ಸಂಹಿತೆಯ ಜಾರಿ, ಜನಸಂಖ್ಯಾ ನೀತಿ, ಒಂದೇ ರಾಷ್ಟ್ರ, ಒಂದು ರೀತಿಯ ಜನತೆ, ಪರಿಕಲ್ಪನೆ, ಹಿಂದುತ್ವದ ಪರಿಕಲ್ಪನೆ ಮುಂತಾದ ನಿರ್ದಿಷ್ಟ ಯೋಜನೆಗಳು ಬಿ.ಜೆ.ಪಿಯ ನಿಲುವನ್ನು ಸ್ಪಷ್ಟಪಡಿಸಿವೆ.

ಬಿ.ಜೆ.ಪಿ. ತನ್ನ ನಿಲುವಿನ ಮೂಲಕ ಹಿಂದೂ ಓಟ್‌ಬ್ಯಾಂಕನ್ನು ಒಟ್ಟುಗೂಡಿಸುತ್ತಿರುವುದು ಕಂಡು ಬಂದಿದೆ. ಧರ್ಮ ಮತ್ತು ರಾಜಕೀಯವನ್ನು ಬೆರೆಸುವುದರ ಮೂಲಕ ಬಹುಮುಖೀ ಸಂಸ್ಕೃತಿಯನ್ನು ತಿರಸ್ಕರಿಸುತ್ತಿದೆ. ಹಿಂದಿನ ಚುನಾವಣೆಗಳಿಗಿಂತ ಸಡಿಲ ಸ್ವರೂಪದಲ್ಲಿ ತನ್ನ ಕಾರ್ಯತಂತ್ರವನ್ನು ಈ ಪಕ್ಷ ರೂಪಿಸಿಕೊಂಡಿದ್ದರೂ, ಕಾರ್ಯತಂತ್ರದ ಹಿಂದಿರುವ ಉದ್ದೇಶಗಳು, ಪಕ್ಷದ ವಿವಿಧ ನೇತಾರರ ಮಾತುಗಳಲ್ಲಿ ಸ್ಪಷ್ಟವಾಗಿದೆ. ಆರ್.ಎಸ್.ಎಸ್.ನ ಸಿದ್ಧಾಂತಿ ಗೋವಿಂದಾಚಾರ್ಯ, ಬಿ.ಜೆ.ಪಿ.ಯ ಸಡಿಲಗೊಂಡ ನೀತಿಯನ್ನು ಕೇವಲ ಒಂದು ವಾಸ್ತವಿಕ ನೀತಿ ಎಂದು ಕರೆದಿದ್ದಾರೆ.

ಅಧಿಕಾರವನ್ನು ಹಿಡಿಯುವ ಏಕೈಕ ಉದ್ದೇಶದಿಂದ ಬಿ.ಜೆ.ಪಿ.ಯನ್ನು ವಿರೋಧಿಸುತ್ತಿದ್ದ, ಆದರೆ ಇಂದು ಚುನಾವಣಾ ಮೈತ್ರಿ ಮಾಡಿಕೊಂಡಿರುವ ಪಕ್ಷಗಳು ಇಂದು ಕೋಮುವಾದವನ್ನು, ಅದನ್ನು ಪ್ರತಿಪಾದಿಸುವ ಪಕ್ಷವನ್ನು ವಿಭಿನ್ನ ರೀತಿಯಲ್ಲಿ ವಿಶ್ಲೇಷಿಸತೊಡಗಿವೆ. ಜಾತ್ಯಾತೀತತೆಯನ್ನು ಬಲವಾದ ತಾತ್ವಿಕ ನೆಲೆಯಲ್ಲಿ ವಾದಮಾಡುತ್ತಿದ್ದ ರಾಜಕೀಯ ಪಕ್ಷಗಳು ಹಾಗೂ ರಾಜಕೀಯ ವ್ಯಕ್ತಿಗಳು ಚುನಾವಣಾ ಮೈತ್ರಿಗಾಗಿ ಬಣ್ಣವನ್ನು ಬದಲಾಯಿಸಿವೆ. ಜಾತ್ಯಾತೀತತೆಯ ನೇತಾರರೆಂದು ಹೇಳಿಕೊಳ್ಳುತ್ತಿದ್ದ ರಾಜಕೀಯ ಪಕ್ಷಗಳು ಇಂದು ಯಾವ ಸಿದ್ಧಾಂತಕ್ಕೂ ನಿಷ್ಠರಾಗದೇ ಗಾಳಿ ಬಂದೆಡೆಗೆ ತೂರಿಕೊಳ್ಳುತ್ತಿದ್ದಾರೆ. ಮುಲಾಯಂಸಿಂಗ್ ಯಾದವ್‌ಗೆ ಬಿ.ಜೆ.ಪಿ.ಯಲ್ಲಿದ್ದ ಶಂಕರ್‌ಸಿಂಘ್ ವಘೇಲಾ ಒಬ್ಬ ದೊಡ್ಡ ಜಾತ್ಯಾತೀತ ನಾಯಕನಂತೆ ಕಾಣುತ್ತಾರೆ.

ಕರ್ನಾಟಕದಲ್ಲಿ ಬಿ.ಜೆ.ಪಿ.ಯೊಂದಿಗೆ ಹೊಂದಾಣಿಕೆ ಮಾಡಿಕೊಂಡ ನವನಿರ್ಮಾಣ ವೇದಿಕೆಯ ನಿಲುವು ಇಬ್ಬಂದಿತನದಿಂದ ಕೂಡಿದ್ದು, ಬಿ.ಜೆ.ಪಿಯೊಂದಿಗೆ ಮಾಡಿಕೊಂಡ ಹೊಂದಾಣಿಕೆ ಕೇವಲ ಚುನಾವಣಾ ಕಾರ್ಯಕ್ರಮವೆಂದು ಸರಳೀಕರಿಸಲು ಸಾಧ್ಯವಾಗುವುದಿಲ್ಲ. ಜಾರ್ಜ್ ಫರ್ನಾಂಡೀಸರು, ತಮ್ಮ ತತ್ವ ಸಿದ್ಧಾಂತಗಳಲ್ಲಿ ಯಾವುದೇ ಬದಲಾವಣೆಯಾಗಿಲ್ಲವೆಂದು ವಾದ ಮಾಡಿದರೂ, 'ಕಾರ್ಯ ತಂತ್ರ' ಸಂಪೂರ್ಣವಾಗಿ ಒಂದು ಪಕ್ಷದ ಸಿದ್ಧಾಂತ ಹಾಗೂ ಪ್ರಣಾಳಿಕೆಯನ್ನು ಬಿಟ್ಟು ರೂಪುಗೊಳ್ಳಲು ಸಾಧ್ಯವೇ?

ಪ್ರಾದೇಶಿಕ ಪಕ್ಷಗಳೊಂದಿಗೆ ಚುನಾವಣಾ ಹೊಂದಾಣಿಕೆಯನ್ನು ಮಾಡಿಕೊಂಡು ನಂತರ ಚುನಾವಣಾ ಪ್ರಣಾಳಿಕೆಯನ್ನು ಬಿ.ಜೆ.ಪಿ. ಬಿಡುಗಡೆ ಮಾಡಿರುವುದು ಹಾಗೂ ಬಿ.ಜೆ.ಪಿ.ಯ ವಿವಿಧ ನೇತಾರರು ನೀಡಿದ ಹೇಳಿಕೆಯ ಹಿನ್ನೆಲೆಯಲ್ಲಿ ಪ್ರಾದೇಶಿಕ

ಪಕ್ಷಗಳು ಕೋಮುವಾದಿ ಸಿದ್ಧಾಂತಗಳನ್ನು ನೋಡಬೇಕಾಗಿತ್ತು. ಆರ್ಗನೈಸರ್ ಪತ್ರಿಕೆಯಲ್ಲಿ ವಾಜಿಪಾಯಿಯವರು ಅಲ್ಪಸಂಖ್ಯಾತರ ಪರಿವರ್ತನೆಗೆ ಮಾರ್ಗ ಸೂಚಿಸಿರುವುದು, ಕಲ್ಯಾಣ್‌ಸಿಂಗ್ ಸರ್ಕಾರ, ಕ್ರಿಮಿನಲ್ ಕೇಸ್‌ಗಳನ್ನು ವಾಪಸ್ಸು ಪಡೆದಿರುವುದು, (ಮಸೀದಿ ಕೆಡವಿದುದಕ್ಕೆ ಸಂಬಂಧಿಸಿದಂತೆ) ವಿಶ್ವ ಹಿಂದೂಪರಿಷತ್‌ನ ಅಶೋಕ ಸಿಂಘಾಲ್ "ಭೂಮಿಯ ಮೇಲಿನ ಯಾವುದೇ ಶಕ್ತಿ ಕೂಡಾ ಬಾಬರಿ ಮಸೀದಿಯನ್ನು ನಾಶಮಾಡುವುದನ್ನು ತಡೆಯಲು ಸಾಧ್ಯವಿಲ್ಲವೆಂದು ಹೇಳಿರುವುದು" ಎಲ್ಲದರ ಹಿನ್ನೆಲೆಯಲ್ಲಿ ಇತರ ರಾಜಕೀಯ ಪಕ್ಷಗಳು ಚುನಾವಣಾ ಹೊಂದಾಣಿಕೆಯನ್ನು ನೋಡಬೇಕಾಗಿತ್ತು. ಆದರೆ ಕೇಂದ್ರದಲ್ಲಿ ಅಧಿಕಾರವನ್ನು ಹಿಡಿಯುವ ಏಕೈಕ ಉದ್ದೇಶದಿಂದ ದಶಕಗಳಿಂದ ಜನರಿಗೆ ನೀಡಿದ ಭರವಸೆಯನ್ನು ಗಾಳಿಗೆ ತೂರಲಾಗಿದೆ.

ಕೋಮುವಾದವನ್ನು ವಿರೋಧಿಸುವುದರ ಆಧಾರದ ಮೇಲೆ ಜನಬೆಂಬಲ ಗಳಿಸಿದ ರಾಜಕೀಯ ಪಕ್ಷಗಳು ಪ್ರಸಕ್ತ ಲೋಕಸಭೆಯ ಚುನಾವಣೆಯಲ್ಲಿ ಒಂದೆಡೆಯಲ್ಲಿ ಗೊಂದಲಮಯ ಹೊಂದಾಣಿಕೆಗಳನ್ನು ಮಾಡುತ್ತಿದ್ದರೆ, ಇನ್ನೊಂದೆಡೆ ಜಾತಿ ರಾಜಕೀಯವನ್ನು ಮಾಡುತ್ತಿರುವುದು ಕಂಡುಬರುತ್ತದೆ. ಜಾತಿ ರಾಜಕಾರಣ ಸಹ ಕೋಮುವಾದದಷ್ಟೇ ವಿಚ್ಛಿದ್ರಕಾರಿಯಾದುದು.

ಐದು ದಶಕಗಳಿಂದ ದೇಶವನ್ನು ಆಳಿದ ಕಾಂಗ್ರೆಸ್ ಪಕ್ಷ ಕೋಮುವಾದವನ್ನು ವಿರೋಧಿಸುವುದರ ಮೂಲಕ ಜನಬೆಂಬಲವನ್ನು ಪಡೆಯಲು ಪ್ರಯತ್ನಿಸಿತು. ಕೋಮುವಾದದ ಸಮಸ್ಯೆಗೆ ಪರಿಹಾರವನ್ನು ಹುಡುಕುವುದು ಸಹ ಆ ಪಕ್ಷಕ್ಕೆ ಬೇಕಾಗಿಲ್ಲ. ಕಾಂಗ್ರೆಸ್ 15 ವರ್ಷಗಳ ನಂತರ ಸ್ವರ್ಣಮಂದಿರದ ಕಾರ್ಯಾಚರಣೆಗೆ, ಬಾಬ್ರಿಮಸೀದಿ ಕೆಡವಿದ ಕೃತ್ಯಕ್ಕೆ ಕ್ಷಮೆ ಕೇಳಿರುವುದು, ಪಿ.ವಿ. ನರಸಿಂಹ ರಾವ್‌ಗೆ ಟಿಕೇಟ್ ನೀಡದಿರುವುದು ಕೇವಲ ಅಲ್ಪಸಂಖ್ಯಾತರ ಮತಗಳಿಕೆಯ, ಮನ ಸೆಳೆಯಲು ಕೈಗೊಂಡ ತೀರ್ಮಾನಗಳು. ಐವತ್ತು ವರ್ಷಗಳಿಂದ ಕಾಂಗ್ರೆಸ್‌ನ ಕೋಮುವಾದದ ಪ್ರತಿಭಟನೆಯ ನೀತಿಯು ಬಾಬ್ರಿ ಮಸೀದಿ ಕೆಡಹಿದ ಸಂದರ್ಭದಲ್ಲಿ ಸ್ಪಷ್ಟವಾಗಿದೆ. ಕೋಮುಗಲಭೆಯನ್ನು ತಪ್ಪಿಸುವುದು, ಕೋಮು ಸೌಹಾರ್ದವನ್ನು ಉಂಟು ಮಾಡುವುದು ಕಾಂಗ್ರೆಸ್ ಪಕ್ಷದ ನೈಜ ಕಾಳಜಿಯಾಗಿದ್ದರೆ, ತಪ್ಪಿತಸ್ಥರನ್ನು ಶಿಕ್ಷಿಸಬೇಕಾಗಿತ್ತು. ಕಾಂಗ್ರೆಸ್‌ಗೆ ಜಾತ್ಯಾತೀತತೆಯ ಕಲ್ಪನೆಯ ಬಗ್ಗೆ ಪ್ರಾಮಾಣಿಕ ಕಾಳಜಿ ಇದ್ದಿದ್ದರೆ, ಸಿಖ್ಖರ ಸಮಸ್ಯೆಗೆ ಬಾಬ್ರಿಮಸೀದಿ ಮುಂತಾದ ಸಮಸ್ಯೆಗಳಿಗೆ ಶಾಶ್ವತ ಪರಿಹಾರವನ್ನು ಕಂಡು ಹಿಡಿಯಬಹುದಾಗಿತ್ತು.

ಸಮಾನ ನಾಗರೀಕ ಸಂಹಿತೆಯ ಪ್ರಶ್ನೆಯನ್ನು ಒಂದು ಅಲ್ಪಸಂಖ್ಯಾತರ ಪ್ರಶ್ನೆಯನ್ನಾಗಿಸಿರುವುದನ್ನು ನೋಡಬಹುದು. ಸಮಾನ ನಾಗರೀಕ ಸಂಹಿತೆಯು ಮೂಲಭೂತವಾಗಿ ಮಹಿಳೆಯರಿಗೆ ಸಂಬಂಧಪಟ್ಟ ಪ್ರಶ್ನೆಯಾಗಿದ್ದರೂ, ಬಿ.ಜೆ.ಪಿ.ಯು ಅದನ್ನು ಅಲ್ಪಸಂಖ್ಯಾತರ ವಿರುದ್ಧ ಬಳಸುತ್ತಿದ್ದರೆ ಇತರ ರಾಜಕೀಯ ಪಕ್ಷಗಳು ಅಲ್ಪಸಂಖ್ಯಾತರನ್ನು ಓಲೈಸಲು ಅದರ ಪರವಾಗಿ ವಾದ ಮಾಡುತ್ತಿವೆ. ನಮ್ಮ ದೇಶದ ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರಿಗೆ ಇದು ನೇರವಾಗಿ ಸಂಬಂಧಪಟ್ಟ ಪ್ರಶ್ನೆಯಾದರೂ, ಇದು ಮಹಿಳೆಯರ ಓಟ್ ಬ್ಯಾಂಕ್ ಪ್ರಶ್ನೆಯಾಗಿಲ್ಲ. ಸ್ತ್ರೀಯರನ್ನು ಕುಟುಂಬದ ಒಂದು ಭಾಗವಾಗಿ ಪರಿಗಣಿಸುವ ದೃಷ್ಟಿಕೋನವನ್ನು ಈ ಧೋರಣೆಗಳು ಬಲಪಡಿಸುತ್ತಿದೆ. ಸ್ತ್ರೀಯರ ಸ್ಥಾನಮಾನದ ಪ್ರಶ್ನೆಯನ್ನು ಸಂಪೂರ್ಣವಾಗಿ ನೇಪಥ್ಯಕ್ಕೆ ತಳ್ಳಲಾಗಿದೆ.

ಜಾತ್ಯಾತೀತತೆಯ ವಕ್ತಾರರಂತೆ ಮಾತನಾಡುವ ಸಂಯುಕ್ತ ರಂಗ ಸರ್ಕಾರವಾಗಲಿ, ಅಥವಾ ಇತರ ಪ್ರಾದೇಶಿಕ ಪಕ್ಷಗಳು, ಜಾತ್ಯಾತೀತತೆಯ ಪ್ರಶ್ನೆಯನ್ನು ಬಿ.ಜೆ.ಪಿಯನ್ನು ವಿರೋಧಿಸಲು ಒಂದು ದಾಳವನ್ನಾಗಿ ಮಾಡಿಕೊಂಡಿವೆ. ಅಲ್ಪಸಂಖ್ಯಾತರನ್ನು ಓಲೈಸಲು ಮಾತ್ರ ಚುನಾವಣಾ ಸಂದರ್ಭದಲ್ಲಿ ಉದಾರವಾಗಿ ಹಲವಾರು ಭರವಸೆಯನ್ನು ನೀಡುತ್ತಿವೆ. ಈ ಭರವಸೆಗಳು ಪರ-ವಿರೋಧದ ಹಿನ್ನೆಲೆಯಲ್ಲಿ ಮಾತ್ರ ಸೃಷ್ಟಿಯಾಗಿದೆ. ಉತ್ತರ ಪ್ರದೇಶದಲ್ಲಿ ಮುಲಾಯಂಸಿಂಗ್ ಯಾದವ್ ಅಲ್ಪಸಂಖ್ಯಾತರಿಗೆ ದಾರಾಳವಾದ ಆರ್ಥಿಕ ನೆರವನ್ನು ಚುನಾವಣಾ ಸಂದರ್ಭದಲ್ಲಿ ನೀಡುತ್ತಾ, ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ರಕ್ಷಿಸುವ ನೇತಾರರೆಂಬಂತೆ ಬೆಂಬಲದ ಭರವಸೆಯನ್ನು ಪಡೆಯುತ್ತಿದ್ದಾರೆ.

'ಜಾತ್ಯಾತೀತತೆ'ಯ 'ಪರಿಕಲ್ಪನೆ'ಯ ಬಗೆಗೆ ಒಂದು ದೀರ್ಘಾವದಿ ಕಾರ್ಯಕ್ರಮವನ್ನು ರೂಪಿಸಲು ಯಾವುದೇ ಪಕ್ಷ ಒಂದು ಯೋಜನೆಯನ್ನು ಹಾಕಿಕೊಂಡಿಲ್ಲ. 'ಜಾತ್ಯಾತೀತತೆ' ಜನರ ದೈನಂದಿನ ಜೀವನದಲ್ಲಿ ಹಾಸು ಹೊಕ್ಕಾಗಬೇಕಾದ ಒಂದು ಪರಿಕಲ್ಪನೆ. ಶಾಶ್ವತ ಪರಿಹಾರವನ್ನು ಹುಡುಕುವುದು, ಯಾವ ರಾಜಕೀಯ ಪಕ್ಷಗಳಿಗೂ ಬೇಕಾಗಿಲ್ಲ. ಸಮಸ್ಯೆಗಳು ಜೀವಂತವಾಗಿರಬೇಕಾದುದು ರಾಜಕೀಯ ಪಕ್ಷಗಳಿಗೆ ಅಗತ್ಯವಾದುದು. ಸದಾ ಈ ಸಮಸ್ಯೆಗಳನ್ನು ಜೀವಂತವಾಗಿಸುವುದರಿಂದ ಇತರ ಪ್ರಮುಖ ಸಮಸ್ಯೆಗಳನ್ನು ಅಮುಖ್ಯಗೊಳಿಸುವುದರ ಜೊತೆಗೆ ಅವುಗಳ ಮುಂದುವರಿಕೆಗೂ ಕಾರಣವಾಗುತ್ತವೆ.

'ಭ್ರಷ್ಟಾಚಾರ'ದ ಹಾಗೂ 'ಜಾತಿ'ಯ ಪ್ರಶ್ನೆಗಳನ್ನು ಹಿನ್ನೆಲೆಗೆ ತಳ್ಳಿರುವುದು ಇದಕ್ಕೆ ಉತ್ತಮ ನಿದರ್ಶನವಾಗಿದೆ. ಕೋಮುವಾದವನ್ನು ದೊಡ್ಡ ದನಿಯಲ್ಲಿ ವಿರೋಧಿಸುವ, ಅಲ್ಪಸಂಖ್ಯಾತರ, ದೀನ ದಲಿತರ ಪರವಾಗಿರುವ ಪಕ್ಷದ ನೇತಾರರು ಹಲವಾರು ಪ್ರಕರಣಗಳಲ್ಲಿ ತೊಡಗಿರುವುದನ್ನು ಕಾಣಬಹುದು. ಕೋಮುವಾದವನ್ನು ವಿರೋಧಿಸಬೇಕಾದರೆ ಭ್ರಷ್ಟರ ಜೊತೆಗೆ ಶಾಮೀಲಾಗುವುದು ಅನಿವಾರ್ಯವೆ?

ಕೋಮುವಾದವನ್ನು ವಿರೋಧಿಸುವ ಜಾತ್ಯಾತೀತ ಪಕ್ಷಗಳು ಜಾತಿಯ ಆಧಾರದ ಮೇಲೆ ರಾಜಕೀಯ ನಡೆಸುತ್ತಿರುವುದು ದ್ವಂದ್ವಮಯವಾಗಿದೆ. ಪಕ್ಷದಲ್ಲಿ ಟಿಕೇಟ್ ನೀಡುವ, ಗೆಲ್ಲುವ ಲೆಕ್ಕಾಚಾರವನ್ನು 'ಜಾತಿ'ಯ ಆಧಾರದ ಮೇಲೆ ನಡೆಸಲಾಗುವುದು. ಕೋಮುವಾದ ವಿರೋಧಿ ನೇತಾರರೆಲ್ಲಾ, ಪ್ರಾದೇಶಿಕ ಮಟ್ಟದಲ್ಲಿ 'ಜಾತಿ' ರಾಜಕೀಯವನ್ನು ಮಾಡುತ್ತಿರುವುದು ಒಂದು ವೈರುಧ್ಯ ಅಂಶ.

ನಮ್ಮ ದೇಶದ ಜನತೆಯ ಸಮಗ್ರ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಬದಲಾವಣೆ ದೀರ್ಘಾವದಿಯ ಯೋಜನೆಗಳು ಅತ್ಯಗತ್ಯವಾಗಿವೆ. ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ರಾಜಕೀಯವನ್ನು ಬದಿಗೊತ್ತಿ, ಸಮಸ್ಯೆಗಳ ಶಾಶ್ವತ ಪರಿಹಾರದತ್ತ ಯೋಚಿಸುವ ರಾಜಕೀಯ ಸಿದ್ಧಾಂತಗಳತ್ತ ಗಂಬೀರವಾಗಿ ಯೋಚಿಸಬೇಕಾಗಿದೆ.

ಚುನಾವಣಾ ಮೈತ್ರಿ

ರಾಷ್ಟ್ರೀಯ ಭದ್ರತೆ, ಸುಭದ್ರ ಸರ್ಕಾರದ ರಚನೆ ಈ ಬಾರಿಯ ಚುನಾವಣೆಯ ಕೇಂದ್ರ ವಿಷಯವಾಗಿದೆ. ಒಂದು ಪಕ್ಷ ದೇಶವನ್ನು ಆಳುವ ಕಾಲ ಸಂಪೂರ್ಣವಾಗಿ ಮುಗಿದು ಹೋಗಿದೆಯೆಂದು ಭಾವಿಸುತ್ತಾ, ಚುನಾವಣಾ ಹೊಂದಾಣಿಕೆಗೆ ತಾತ್ವಿಕ ತಳಪಾಯವನ್ನು ಹಾಕಲಾಯಿತು. ಚುನಾವಣೆಗೆ ಮೊದಲು ಪ್ರತಿಯೊಂದು ಪಕ್ಷವೂ ತನ್ನದೇ ಪ್ರಣಾಳಿಕೆಯನ್ನು ಹೊಂದಿದ್ದು, ಅದರ ಆಧಾರದ ಮೇಲೆ ಜನರ ಬೆಂಬಲವನ್ನು ಪಡೆದು, ನಂತರ ಇತರ ಪಕ್ಷಗಳೊಂದಿಗೆ ಸರ್ಕಾರವನ್ನು ರಚಿಸುವುದು ಮೂಲಭೂತವಾಗಿ ವೈರುಧ್ಯಮಯವಾದುದು. ಈ ಚುನಾವಣಾ ಹೊಂದಾಣಿಕೆಗಳು ಕೇಂದ್ರದಲ್ಲಿ ಅಧಿಕಾರವನ್ನು ಹಿಡಿಯಲು ನಡೆಸುತ್ತಿರುವ ಅವಕಾಶವಾದಿ ರಾಜಕಾರಣವಾಗಿದೆ. ಈ ಚುನಾವಣಾ ಮೈತ್ರಿಗಳು ಅವಕಾಶವಾದಿ ಹಾಗೂ ತತ್ವ ರಹಿತ ರಾಜಕಾರಣವನ್ನು ಎತ್ತಿ ಹಿಡಿಯುತ್ತವೆ.

ಒಂದು ಪಕ್ಷ ಇನ್ನೊಂದು ಪಕ್ಷದೊಡನೆ ಸಮಾನ ಸಿದ್ಧಾಂತ, ಸಮಾನ ನಂಬಿಕೆ, ಸಮಾನ ರಾಜಕೀಯ ಧೋರಣೆಯ ಮೂಲಕ ಸಾಮಾನ್ಯ ಕನಿಷ್ಠ ಕಾರ್ಯಗಳಡಿಯಲ್ಲಿ ಚುನಾವಣಾ ಮೈತ್ರಿಯನ್ನು ಮಾಡಿಕೊಳ್ಳಬಹುದು. ಆದರೆ ಚುನಾವಣಾ ಮೈತ್ರಿ ಮಾಡಿಕೊಳ್ಳಲು ಕಂಡು ಬರುತ್ತಿರುವ ಸಮಾನ ಅಂಶವೆಂದರೆ ಅಧಿಕಾರದ ಆಶಯ. ಈ ಹಿಂದೆ ಕಂಡರಿಯದ ರೀತಿಯಲ್ಲಿ ಚುನಾವಣಾ ಹೊಂದಾಣಿಕೆಗಳು ಅವಕಾಶವಾದಿ ರಾಜಕಾರಣದ ಮೌಲ್ಯಗಳನ್ನು ಹುಟ್ಟು ಹಾಕುವುದರ ಜೊತೆಗೆ, ತತ್ವ ಸಿದ್ಧಾಂತಗಳನ್ನು ಬಲಿಕೊಟ್ಟು ಜನರನ್ನು ಮೂರ್ಖರನ್ನಾಗಿಸುತ್ತವೆ.

ಹಲವಾರು ದಶಕಗಳಿಂದ ಕೋಮುವಾದಿ ಪಕ್ಷವೆಂದು, ಆ ತಾತ್ವಿಕತೆಯ ನೆಲೆಯಲ್ಲಿ ಜನಬೆಂಬಲವನ್ನು ರೂಢಿಸಿಕೊಂಡು ಬಂದ ಪಕ್ಷಗಳು ಇಂದು ಬಿ.ಜೆ.ಪಿ.ಯ ಜೊತೆಗೆ ಚುನಾವಣಾ ಮೈತ್ರಿಯನ್ನು ಮಾಡಿಕೊಂಡಿವೆ. AIADMK , ಲಕ್ಷ್ಮೀ ಪಾರ್ವತಿಯ ಪಕ್ಷ, ಜಾರ್ಜ್ ಫರ್ನಾಂಡೀಸರ ಸಮತಾ ಪಕ್ಷ, ಲೋಕಶಕ್ತಿ, ಅಕಾಲಿದಳ ಹೀಗೆ ಹಲವಾರು ಪಕ್ಷಗಳು ಬಿ.ಜೆ.ಪಿ.ಯೊಂದಿಗೆ ಮೈತ್ರಿಯನ್ನು ಮಾಡಿಕೊಂಡಿವೆ. ಬಿ.ಜೆ.ಪಿ.ಯೊಂದಿಗಿನ ಈ ಮೈತ್ರಿಯನ್ನು ಹಲವಾರು ಕಾರಣಗಳನ್ನು ನೀಡುತ್ತಾ ಸಮರ್ಥಿಸಿಕೊಳ್ಳಲಾಗುತ್ತಿದೆ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಸರ್ವಸಮ್ಮತವಾದ ಪಕ್ಷ, ಕಾಲಕ್ಕನುಗುಣವಾಗಿ ಬಿ.ಜೆ.ಪಿ. ಬದಲಾಗಿದೆ, ಜಾತ್ಯಾತೀತ ಪರಿಕಲ್ಪನೆಯನ್ನು ಬಿ.ಜೆ.ಪಿ.ಯು ಸಹ ಒಪ್ಪಿಕೊಳ್ಳಬೇಕಾಗಿದೆ, ಹೀಗೆ ಬಿ.ಜೆ.ಪಿ.ಯ ಸಡಿಲಗೊಂಡ ಮುಖವನ್ನು ತೋರಿಸಲು ಈ ಪಕ್ಷಗಳು ಅತ್ಯಂತ ಕಾಳಜಿ ವಹಿಸಿವೆ. ಕರ್ನಾಟಕದ ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ದೇವೇಗೌಡರನ್ನು ಸೋಲಿಸುವ ಏಕೈಕ ಉದ್ದೇಶದಿಂದ ಬಿ.ಜೆ.ಪಿಯೊಂದಿಗಿನ ಮೈತ್ರಿಯನ್ನು ಸಮರ್ಥಿಸುತ್ತಾರೆ, ರಾಷ್ಟ್ರೀಯ ಹಿತಾಸಕ್ತಿಯನ್ನು ಕಾಪಾಡುವ ಉದ್ದೇಶದಿಂದ, ರಾಷ್ಟ್ರವ್ಯಾಪಿ ಹರಡಿರುವ ಭ್ರಷ್ಟಾಚಾರವನ್ನು ತಡೆಯುವ ಉದ್ದೇಶದ ಅಸ್ತ್ರವನ್ನಾಗಿ ಸಹ ಚುನಾವಣಾ ಮೈತ್ರಿಯ ಪರವಾಗಿ ವಾದಿಸಲಾಗುತ್ತಿದೆ. ಚುನಾವಣಾ ಮೈತ್ರಿಯನ್ನು ಸದಾ ನಿರ್ಲಕ್ಷಿಸುತ್ತಿದ್ದ ಬಿ.ಜೆ.ಪಿ, ಯಾವ ಸಂಕೋಚವಿಲ್ಲದೆ, ಅಧಿಕಾರ ಸೂತ್ರವನ್ನು ಹಿಡಿಯುವ ಒಂದೇ ಉದ್ದೇಶದಿಂದ ಚುನಾವಣೆ ಮೈತ್ರಿಯನ್ನು ಮಾಡಿಕೊಂಡಿತು. ಮೇಲು ನೋಟಕ್ಕೆ ಬಿ.ಜೆ.ಪಿಯ ನಿಲುವು ಸಡಿಲಗೊಂಡಿದೆಯೆಂದು ಕಂಡುಬಂದರೂ, ಅದರ ಮೂಲಭೂತ ಸಿದ್ಧಾಂತಗಳಲ್ಲಿ ಬದಲಾವಣೆಯಿಲ್ಲದಿರುವುದು, ಚುನಾವಣಾ ಮೈತ್ರಿಯನ್ನು ಮಾಡಿಕೊಂಡ ನಂತರ ಪ್ರಾಣಾಳಿಕೆಯನ್ನು ಬಿಡುಗಡೆ ಮಾಡುವುದರಿಂದ ಸ್ಪಷ್ಟವಾಯಿತು. ಚುನಾವಣೆಯಲ್ಲಿ ಗೆದ್ದು ಬರಲು ಬಿ.ಜೆ.ಪಿಯು ರೂಪಿಸಿದ ಕಾರ್ಯತಂತ್ರವದು. ಈ ಮೈತ್ರಿಯ ಆಧಾರದ ಮೇಲೆ ಗೆದ್ದು ಬಂದ ಪಕ್ಷ ನಂತರ ಪಕ್ಷದೊಳಗಿನ ತೀವ್ರವಾದಿಗಳು ಅಧಿಕಾರವನ್ನು ತಮ್ಮ ಕೈಗೆ ತೆಗೆದುಕೊಳ್ಳುತ್ತಾರೆ. ಪಕ್ಷದ ಪ್ರಣಾಳಿಕೆಯಲ್ಲಿ ಜನರಿಗೆ ಮಾತು ಕೊಟ್ಟಂತೆ ಕಾರ್ಯಕ್ರಮಗಳನ್ನು ರೂಪಿಸಬಹುದು. ಜನಪ್ರಿಯ ನಟರು, ಕೆಲವು ಮುಸ್ಲಿಂ ನಾಯಕರು, ಚುನಾವಣಾ ಮೈತ್ರಿ ಬಿ.ಜೆ.ಪಿ. ಪರವಾದ ಅಲೆಯನ್ನು ಸೃಷ್ಟಿಸುವಲ್ಲಿ ಪೂರಕವಾಗಿ ಕೆಲಸ ಮಾಡಿವೆ.

"ಯಾವುದೇ ರೀತಿಯ ಚುನಾವಣಾ ಮೈತ್ರಿಯನ್ನು ಮಾಡಿಕೊಂಡರೂ ಬಿ.ಜೆ.ಪಿ. ತಾನು ನಂಬಿರುವ ಮೂಲಭೂತ ತತ್ವಗಳೊಂದಿಗೆ ಹೊಂದಾಣಿಕೆಯನ್ನು ಮಾಡಿಕೊಳ್ಳುವುದಿಲ್ಲವೆಂಬ ಮಾತನ್ನು ಗೋವಿಂದಾಚಾರ್ಯ ಹೇಳಿದ್ದಾರೆ. ಚುನಾವಣಾ ಮೈತ್ರಿ ಕೇವಲ 'ವಾಸ್ತವಿಕ ಅಂಶಗಳಿಗಾಗಿ ಮಾತ್ರ' ಎಂದು ಒತ್ತಿ ಹೇಳಿದ್ದಾರೆ.

ಚುನಾವಣಾ ಮೈತ್ರಿಗಳು ಕಣ್ಣಿಗೆ ರಾಚುವ ವೈರುಧ್ಯ ಅಂಶಗಳನ್ನು ಒಳಗೊಂಡಿದೆ. ಒರಿಸ್ಸಾದಲ್ಲಿ ಬಿಜು ಜನತಾದಳ (ಮೇಲುಜಾತಿಯ ಬೆಂಬಲಿತ) ಮಂಡಳ ವರದಿಯನ್ನು ಬೆಂಬಲಿಸಿರಲಿಲ್ಲ. ಇಂದು ಬಿಜು ಜನತಾದಳ ಬಿ.ಜೆ.ಪಿಯೊಂದಿಗೆ ಚುನಾವಣಾ ಮೈತ್ರಿಯನ್ನು ಮಾಡಿಕೊಂಡಿದೆ. ಉತ್ತರ ಭಾರತದ ಹೇರುವಿಕೆಯ ವಿರುದ್ಧ; ಕೇಂದ್ರದ ವಿರುದ್ಧ ಸದಾ ಸಮರ ಸಾರುತ್ತಿದ್ದ AIADMK, ಅಕಾಲಿದಳ, ಲೋಕಶಕ್ತಿ, ಸಮತಾ ಪಾರ್ಟಿಯ ಹೊಂದಾಣಿಕೆಯಲ್ಲಿ ಯಾವ ಸಮರ್ಥನೆಯು ಒಪ್ಪಿಕೊಳ್ಳಲಾರದಷ್ಟು ವೈರುಧ್ಯದಿಂದಿತ್ತು. ಕೋಮುವಾದವನ್ನು ವಿರೋಧಿಸುವ ಪ್ರಧಾನಿ ಇಂದ್ರಕುಮಾರ್ ಗುಜ್ರಾಲ್‌ಗೆ ಅಕಾಲಿದಳದ ಬೆಂಬಲ, ಅಕಾಲಿ ದಳ ಬಿ.ಜೆ.ಪಿ. ಚುನಾವಣಾ ಮೈತ್ರಿ, ಇವು ಕೇವಲ ಅಧಿಕಾರ ಹಿಡಿಯುವ ಹುನ್ನಾರವನ್ನು ಹೇಳುತ್ತವೆ. ಎಡಪಕ್ಷಗಳ ನಿಲುವು ಸಹ ಗೊಂದಲಮಯವಾಗಿವೆ. ಚುನಾವಣಾ ಪ್ರಣಾಳಿಕೆಯಲ್ಲಿ ಅಜಗಜಾಂತರ ವ್ಯತ್ಯಾಸವಿರುವ ಸಂಯುಕ್ತ ರಂಗದ ಮೈತ್ರಿ, ಚುನಾವಣೆಯ ನಂತರ ಹೇಗೆ ಕೆಲಸ ಮಾಡುತ್ತದೆಯೆಂದು ಕಾದು ನೋಡಬೇಕು. ಸಂಯುಕ್ತ ರಂಗದ ಅಧಿಕಾರಕ್ಕೆ ಬಂದರೆ, ಸರ್ಕಾರದ ಒಳಗಡೆ ತಾನು ಇರುವುದೆನ್ನುವ ಆಶಯವನ್ನು ಎಡಪಕ್ಷ ವ್ಯಕ್ತಪಡಿಸಿದೆ.

ಸ್ಥಿರತೆ ಸುಭದ್ರತೆಯನ್ನು ಮಾತನಾಡುವ ಕಾಂಗ್ರೆಸ್, ಕಾಂಗ್ರೇಸೇತರ ಸರ್ಕಾರ ಬಂದಾಗಲೆಲ್ಲಾ, ತಾನು ಕಾಲೆಳೆಯುವ ಕೆಲಸವನ್ನು ಮಾಡುತ್ತಲೇ ಬಂದಿದೆ. ಗುಜರಾತ್‌ನಲ್ಲಿ ಬಿ.ಜೆ.ಪಿ. 3ನೇ ಎರಡರಷ್ಟು ಬಹುಮತ ಪಡೆದು ಸ್ಥಿರ ಸರ್ಕಾರವಿದ್ದರೂ ಬಿದ್ದು ಹೋಗಲು ಕಾರಣವೇನು? ಸುಭದ್ರತೆ, ಸ್ಥಿರ ಸರ್ಕಾರವೆಂದರೆ, ರಾಷ್ಟ್ರದ ಸುಭದ್ರತೆ, ಸಾಮಾಜಿಕ, ಆರ್ಥಿಕ ಸ್ಥಿತಿಯ ಸುಭದ್ರತೆ. ಕೇವಲ ಸರ್ಕಾರಗಳನ್ನು ರಚಿಸುವ ರಾಜಕೀಯ ಪಕ್ಷಗಳ ಸುಭದ್ರತೆಯನ್ನು ದೇಶದ ಸುಭದ್ರತೆಯೆನ್ನಬೇಕೆ? ಎಲ್ಲಾ ರಾಜಕೀಯ ಪಕ್ಷಗಳು ಅಧಿಕಾರ ಹಿಡಿಯುವ ಏಕೈಕ ಉದ್ದೇಶದಿಂದ ಕೆಲವು ಭ್ರಮಾತ್ಮಕ ಆಲೋಚನೆಗಳನ್ನು ಚಾಲನೆಗೆ ಬಿಡುತ್ತವೆ.

ಇಂದಿನ ಚುನಾವಣಾ ಮೈತ್ರಿಗಳು ಒಂದು ಕಡೆ 'ಹಿಂದೂ ಮತದಾರ'ರನ್ನು ಒಗ್ಗೂಡಿಸುವುದರ ಜೊತೆ ಜೊತೆಯಲ್ಲಿ ಜಾತಿ, ವರ್ಗದ ಧೃವೀಕರಣವೂ ಸಹ ಆರಂಭವಾಗುತ್ತಿದೆಯೆಂದು ಭಾಸವಾಗುತ್ತಿದೆ. ವಿವಿಧ ರಾಜಕೀಯ ಪಕ್ಷಗಳ ಚುನಾವಣಾ ಮೈತ್ರಿ ಮೇಲು ಜಾತಿ, ವರ್ಗಗಳ ಹೊಂದಾಣಿಕೆಯೂ ಆಗಿದೆ.

(ಮಾನಸದಲ್ಲಿ ನಡೆಸಿದ ಚರ್ಚೆಯ ಲೇಖನ ರೂಪ : ಹೆಚ್. ಎಸ್. ರಾಜೇಶ್ವರಿ)

ಮತ ಚಲಾವಣೆಯಿಂದ ವಂಚಿತರಾದ ಹೈಕೋರ್ಟ್ ನ್ಯಾಯಾಧೀಶರು!

ಇಲ್ಲಿಂದಲ್ಲಿಗೆ ಫುಟ್‌ಬಾಲ್‌ನಂತೆ ಒದೆಸಿಕೊಂಡು ಮತ ಚಲಾಯಿಸಲು ಗುರುತಿನ ಚೀಟಿ ಪಡೆದುಕೊಂಡರೂ ಮತ ಚಲಾಯಿಸುವ ಅವಕಾಶ ದೊರೆಯಲಿಲ್ಲ ಕಾರಣ ಮತದಾರರ ಪಟ್ಟಿಯಲ್ಲಿ ಹೆಸರು ನಾಪತ್ತೆ!

ಕನಕಪುರ ರಸ್ತೆಯ 300 ಮತದಾರರ ಪಟ್ಟಿಯೇ ಇಲ್ಲ. ಬ್ಯಾಟರಾಯನಪುರದಲ್ಲಿ ಹತ್ತಿರ 1,800 ಜನರ ಹೆಸರು ಮತದಾರರ ಪಟ್ಟಿಯಲ್ಲಿಲ್ಲ. ಕೆಲವೆಡೆ ಇಡೀ ರಸ್ತೆಯಲ್ಲಿನ ಮನೆಗಳನ್ನೆ, ಕೆಲವಡೆ ಇಡೀ ವಿಬಾಗವನ್ನೆ, ಬೀದಿಯನ್ನೆ ಮತದಾರರ ಪಟ್ಟಿಯಲ್ಲಿ ಕೈಬಿಡಲಾಗಿದೆ. 1996ರ ಚುನಾವಣೆಯಲ್ಲಿ ಮತ ಚಲಾಯಿಸಿದ ಅನೇಕ ಮಂದಿಯ ಹೆಸರು ಈ ಭಾರಿಯ ಚುನಾವಣೆಯ ಮತದಾರರ ಪಟ್ಟಿಯಲ್ಲಿಲ್ಲ. 30 ವರ್ಷಗಳಿಂದಲೂ ಮತ ಚಲಾಯಿಸುತ್ತ ಬಂದಿರುವ ಮತದಾರರ ಹೆಸರು ಪಟ್ಟಿಯಲಿಲ್ಲ. ಇದಕ್ಕೆ ಹೈಕೋರ್ಟ್ ನ್ಯಾಯಾಧೀಶರೂ ಹೊರತಲ್ಲ!

ಕರ್ನಾಟಕ ಹೈಕೋರ್ಟಿನ ನ್ಯಾಯಾಧೀಶರಾದ ನ್ಯಾಯಮೂರ್ತಿ ಮೈಕೆಲ್ ಎಫ್. ಸಲ್ದಾನ ಅವರು ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದ ಕಾರಣ ಮತ ಚಲಾಯಿಸಲಾಗಲಿಲ್ಲ. ಚುನಾವಣೆ ನಡೆಸುವುದಾಗಿ ನವೆಂಬರ್‌ನಲ್ಲೆ ಘೋಷಿಸಲಾಯ್ತು. ಚುನಾವಣಾ ಆಯೋಗದ ಸಿಬ್ಬಂದಿಗಳಿಗೆ ಮತದಾರರ ಪಟ್ಟಿಯನ್ನು update ಮಾಡಲು ಸಾಕಷ್ಟು ಸಮಯವಿತ್ತು. ಇತ್ತೀಚಿನ ಹೊಸ ಮತದಾರರ ಪಟ್ಟಿಯನ್ನು ಚುನಾವಣಾ ಆಯೋಗವು ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿತ್ತು. ಹೊಸ ಪಟ್ಟಿಯನ್ನು ತಯಾರಿಸಲು ಆಯೋಗವು ಸರ್ಕಾರಿ ನೌಕರರನ್ನು ನೇಮಕಮಾಡಿಕೊಂಡು ಭತ್ಯೆ ನೀಡಲು ಹೆಚ್ಚಿನ ಹಣ ವಿನಿಯೋಗಿಸಿದೆ. ಅನೇಕ ಕಡೆ ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದ ಕಾರಣ ಬಹಳಷ್ಟು ಜನ ಮತ ಚಲಾಯಿಸಿಲ್ಲ. ಆ ಕಾರಣಕ್ಕಾಗಿಯೇ ಇಡೀ ಚುನಾವಣೆಯ ಮಾನ್ಯತೆಯನ್ನೆ ಅನುಮಾನಿಸಬೇಕಾಗುತ್ತದೆ ಎಂದು ಸಲ್ದಾನ ಅವರು ಹೇಳಿದ್ದಾರೆ. ವಿವರಣೆ ಕೇಳಿ ಚುನಾವಣ ಆಯೋಗಕ್ಕೆ ಬರೆಯುವುದಾಗಿ ಹೇಳಿದ್ದಾರೆ.

ಚುನಾವಣಾ ರಾಜಕೀಯ - ಮಹಿಳಾ ಸಂಘಟನೆಗಳ, ವ್ಯಕ್ತಿಗಳ ಅಭಿಪ್ರಾಯಗಳು

ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ಒಂದು ರಾಜಕೀಯ ಶಕ್ತಿಯಾಗಿ ಭಾಗವಹಿಸಿದರೆ ಬದಲಾವಣೆ ಸಾಧ್ಯ - ವಿಮೋಚನ ಮಹಿಳಾ ಹಕ್ಕುಗಳ ವೇದಿಕೆ

ಚುನಾವಣ ರಾಜಕೀಯದಲ್ಲಿ ನಾವು ನೇರವಾಗಿ ಪಾಲ್ಗೊಂಡಿಲ್ಲ. ಆದರೆ ಪರೋಕ್ಷವಾಗಿ ಮತದಾರರಿಗೆ ಅರಿವು ಮೂಡಿಸುವ, ಪಕ್ಷಗಳ ಪ್ರಣಾಳಿಕೆಗಳನ್ನು ಟೀಕಿಸುವ, ಮಹಿಳೆಯರಿಗಾಗಿ ಮಾಡುವ ಕೆಲಸಗಳನ್ನು ಪ್ರಶ್ನಿಸುವ ಕೆಲವು ಭ್ರಷ್ಟ, ಸ್ತ್ರೀ ವಿರೋಧಿ ರಾಜಕಾರಣಿಗಳ ವಿರುದ್ಧ ಪ್ರಚಾರ ಮಾಡಿ ಜನರಿಗೆ ತಿಳಿಸುವಂತಹ ಕೆಲಸಗಳನ್ನು ಮಾಡಿದ್ದೇವೆ. ಚುನಾವಣಾ ರಾಜಕೀಯದ ಮೂಲಕ ನಮ್ಮ ರಾಜಕೀಯವನ್ನು ವ್ಯಕ್ತಪಡಿಸಬಹುದೆಂದು ನಮಗನಿಸುವುದಿಲ್ಲ. ಆದರೆ ಈ ಪ್ರಕ್ರಿಯೆಯನ್ನು ನಾವು ಕೆಲಸ ಮಾಡುತ್ತಿರುವ ಮಹಿಳಾ ವಿಚಾರವನ್ನು ರಾಜಕೀಯ ಪಕ್ಷಗಳು, ಗುಂಪುಗಳು ಮತ್ತು ಸಾರ್ವಜನಿಕರೊಂದಿಗೆ ಪ್ರಸ್ತಾಪಿಸುವ ಅವಕಾಶವಾಗಿ ನೋಡುತ್ತೇವೆ. ಸದ್ಯದ ರಾಜಕೀಯ ವ್ಯವಸ್ಥೆ ಕುರಿತು ನಮಗೆ ಪ್ರಬಲವಾದ ಟೀಕೆಗಳಿವೆ. ಈ ವ್ಯವಸ್ಥೆಯು ಪೂರ್ತಿಯಾಗಿ ಒಬ್ಬರನ್ನು Co-opt ಮಾಡಿಕೊಳ್ಳುವಂತಹದ್ದು. ಸ್ವಲ್ಪ ಮಟ್ಟಿಗಾದರೂ ಬದಲಾವಣೆಯಾಗಬೇಕೆಂದರೆ ಒಂದಿಬ್ಬರೂ ಮಹಿಳೆಯರು ಸಕ್ರೀಯವಾಗುವುದರಿಂದ ಸಾಧ್ಯವಾಗುವುದಿಲ್ಲ. ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ಒಂದು ರಾಜಕೀಯ ಶಕ್ತಿಯಾಗಿ ಭಾಗವಹಿಸಿದರೆ ಬದಲಾವಣೆ ಸಾಧ್ಯವಾಗಬಹುದು. ಮಹಿಳೆಯರ ಬರಿದೇ ಭಾಗವಹಿಸುವಿಕೆಯಿಂದ ಬದಲಾವಣೆ ಆಗಬಹುದು. ಆದರೆ ಆ ಬದಲಾವಣೆ ಸಂಪೂರ್ಣ ಬದಲಾವಣೆಯಾಗುವುದಿಲ್ಲ. ಹೆಚ್ಚಿನ ಸಂಖ್ಯೆಯಲ್ಲಿ ಒಂದು ರಾಜಕೀಯ ಶಕ್ತಿಯಾಗಿ ಮಹಿಳೆಯರು ರಾಜಕೀಯದಲ್ಲಿ ಭಾಗವಹಿಸದಿದ್ದರೆ ಅವರೂ ಸಹ ಸುಲಭವಾಗಿ Co-Opt ಆಗಿ ಬಿಡುವ, ಭ್ರಷ್ಟರಾಗುವ, ಅಧಿಕಾರ ಮದರಾಗುವ ಇಲ್ಲವೆ ವರ್ಗ, ಜಾತಿ, ಕೋಮಿನ ಹೆಸರಿನಲ್ಲಿ ನಿಯಂತ್ರಿಸುವವರ ಕೈಗೊಂಬೆಗಳಾಗುವ ಸಾಧ್ಯತೆಗಳಿವೆ.

ಒಂದು ಮಹಿಳಾ ಸಂಘಟನೆಯಾಗಿ ನಾವು ಸದ್ಯದ ರಾಜಕೀಯ ವ್ಯವಸ್ಥೆಯಿಂದ ಪ್ರತ್ಯೇಕವಾಗಿರಲು ಸಾಧ್ಯವಿಲ್ಲ. ವ್ಯವಸ್ಥೆಯನ್ನು ಟೀಕಿಸುವುದರ ಜೊತೆಗೇ ಅದು ಕೊಡುವ ಕೆಲ ಸೌಲಭ್ಯ ಅಥವಾ ಸವಲತ್ತುಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ಸವಲತ್ತುಗಳನ್ನು ಪಡೆದುಕೊಳ್ಳುವುದಕಷ್ಟೇ ಸೀಮಿತವಾಗಿರಬಾರದು. ನಮ್ಮ ರಾಜಕೀಯವನ್ನು ವ್ಯಕ್ತಪಡಿಸಲು, ಜಾರಿಗೆ ತರಲು ಸವಲತ್ತುಗಳನ್ನು ಉಪಯೋಗಿಸಿಕೊಳ್ಳದಿದ್ದರೆ ಇರುವ ವ್ಯವಸ್ಥೆಯನ್ನು ಬಲಪಡಿಸಲು ಮತ್ತೊಂದು ಪಡೆಯನ್ನು ಸೇರಿಸುವಂತಾಗಿ ಬಿಡುತ್ತದೆ. 33% ಮೀಸಲಾತಿಯು ಮಹಿಳೆಯರನ್ನು ರಾಜಕೀಯದಲ್ಲಿ ಸೇರಿಸಿಕೊಳ್ಳುವುದಕ್ಕಷ್ಟೆ ಸೀಮಿತವಾಗದೆ ಮಹಿಳೆಯರು ಹೇಗೆ ಬದಲಾವಣೆಯ ಶಕ್ತಿಯಾಗಬಲ್ಲರು ಎಂಬುದು ನಮ್ಮ ಮುಂದಿರುವ ಮುಖ್ಯ ವಿಷಯ. ಇಲ್ಲಿ ಬೇರೆ ರಾಜಕೀಯ ಪಕ್ಷಗಳು 33% ಮೀಸಲಾತಿಯ ಬಗ್ಗೆ ಮಾತನಾಡುವುದಕ್ಕೂ ಸ್ವಾಯತ್ತ ಮಹಿಳಾ ಸಂಘಟನೆಗಳು ಮಾತನಾಡುವುದಕ್ಕೆ ವ್ಯತ್ಯಾಸವಿದೆ. ಮಹಿಳಾ ಗುಂಪುಗಳಿಗೆ ಶೇ. 33 ಮೀಸಲಾತಿ Major agenda ಅಲ್ಲ. ಮೀಸಲಾತಿ ಕುರಿತಂತೆ ಸ್ವಾಯತ್ತ ಮಹಿಳಾ ಗುಂಪುಗಳ ಪ್ರತಿಕ್ರಿಯೆ ನೀರಸವಾಗಿದೆ ಎಂದಾಕ್ಷಣ ನಾವು ರಾಜಕೀಯವಾಗಿ ನೀರಸ (sobre) ಎಂದೇನೂ ಅಲ್ಲ. ಮೀಸಲಾತಿಗೆ ಸಂಬಂಧಿಸಿದಂತೆ ನಮ್ಮ ರಾಜಕೀಯ ಬೇರೆ. ರಾಜಕೀಯ ಪಕ್ಷಗಳು ಚುನಾವಣಾ ರಾಜಕೀಯದ ಚೌಕಟ್ಟಿನೊಳಗೇ ರಾಜಕೀಯವನ್ನು ಸೀಮಿತಗೊಳಿಸುವುದರಿಂದ ಅವರಿಗೆ ಮಹಿಳಾ ಮೀಸಲಾತಿಗೆ ಮುಖ್ಯ ಆದ್ಯತೆಯಾಗಿ ಬಿಡುತ್ತದೆ. ನಮ್ಮ ರಾಜಕೀಯವು ಚುನಾವಣ ರಾಜಕೀಯಕ್ಕಿಂತ ಆಳವಾದುದು, ವಿಶಾಲವಾದುದು. ಮೀಸಲಾತಿ ನಮ್ಮ ವಿಭಿನ್ನ ರಾಜಕೀಯವನ್ನು ವ್ಯಕ್ತಪಡಿಸಲು ಒಂದು ಅವಕಾಶವಷ್ಟೇ.

ರಾಜಕೀಯ ಪಕ್ಷಗಳಿಗೆ ಮಹಿಳಾ ಪ್ರಶ್ನೆ ಚಲಾವಣೆಯ ನಾಣ್ಯವಾಗಿದೆ ಅಷ್ಟೇ. ಎಡಪಕ್ಷಗಳೂ ಸಹ ಜಾತಿ, ವರ್ಗ, ಜನಾಂಗಕ್ಕೆ ಸಂಬಂಧಪಟ್ಟ ತಾರತಮ್ಯವನ್ನು ಪ್ರಶ್ನಿಸಿದರೇ ಹೊರತು ಲಿಂಗತಾರತಮ್ಯ ಕುರಿತಂತೆ ಮೌನವಾಗಿದ್ದಾರೆ. ಈಗಲೂ ಮಹಿಳಾ ಪ್ರಶ್ನೆಯನ್ನು, ಪಿತೃ ಪ್ರಧಾನತೆಯನ್ನು ಗುರುತಿಸಿದ್ದರೂ ವರದಕ್ಷಿಣೆಯ ಹಿಂಸೆ, ಹೆಂಡತಿಯನ್ನು ಥಳಿಸುವಂತಹ ಕೌಟುಂಬಿಕ ಕ್ರೌರ್ಯ ಕುರಿತು ಯಾವ ಎಡಪಕ್ಷಗಳು, ಟ್ರೇಡ್ ಯೂನಿಯನ್‌ಗಳು ಮಾತನಾಡುತ್ತಿವೆ? ಅವನ್ನು ವೈಯಕ್ತಿಕವೆಂದು ದೂರವಿಡುತ್ತಾರೆ. ಮಹಿಳಾ ಪ್ರಶ್ನೆ ಅವರಿಗೆ ಒಂದು Side Issue ಆಯಿತೆ ಹೊರತು ಮುಖ್ಯ ವಿಷಯವಾಗಲಿಲ್ಲ. ಮಹಿಳಾ ಪ್ರಶ್ನೆಗೆ ಸಿಗಬೇಕಾದ ಪ್ರಾಮುಖ್ಯತೆಯನ್ನು ನೀಡಲಿಲ್ಲ. ಮಹಿಳಾ ಪ್ರಶ್ನೆ ಒಂದು ರಾಜಕೀಯ ಪ್ರಶ್ನೆ. ಅದನ್ನು ಈಗಿರುವ ಸ್ತ್ರೀ

ವಿರೋಧಿ, ಶ್ರೇಣೀಕೃತ ಶೋಷಣಾತ್ಮಕ ರಾಜಕೀಯ ಚೌಕಟ್ಟಿನಲ್ಲಿ ನೋಡಬೇಕಾಗಿಲ್ಲ. ಅದರ ಮೂಲವನ್ನೆ ಪ್ರಶ್ನಿಸುವುದರ ಜೊತೆಗೆ ರಾಜಕೀಯವನ್ನು ಮರುವ್ಯಾಖ್ಯಾನಿಸುವ ಅಗತ್ಯವಿದೆ.

ಸದ್ಯದ ರಾಜಕೀಯ ಪರಿಸ್ಥಿತಿಯು ತುಂಬಾ ಮಹತ್ವದ್ದಾದರಿಂದ ನಾವು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಯಾಕೆಂದರೆ BJPಯಂತಹ ಮತೀಯ ಪಕ್ಷಗಳು ಪ್ರಬಲವಾಗುತ್ತಿವೆ. ಒಂದು ಪರ್ಯಾಯ ವ್ಯವಸ್ಥೆಯನ್ನು ನಾವು ಸದ್ಯದ ರಾಜಕೀಯ ವ್ಯವಸ್ಥೆಯಾಚೆಯೇ ಹುಡುಕಿಕೊಳ್ಳ ಬೇಕಾಗುತ್ತದೆ. ಯಾಕೆಂದರೆ ಸದ್ಯದ ರಾಜಕೀಯ ಸಂಪೂರ್ಣವಾಗಿ ವ್ಯಾಪಾರೀಕರಣಗೊಂಡಿದೆ, ಭ್ರಷ್ಟಗೊಂಡಿದೆ, ಅಪರಾಧೀಕರಣ ಗೊಂಡಿದೆ. ಅಲ್ಲದೆ ಅಭಿವೃದ್ಧಿ, ಉದಾರೀಕರಣದ ಹೆಸರಿನಲ್ಲಿ ಶೋಷಣಾತ್ಮಕವಾಗಿದೆ. ನಾವೀಗ 2 ದೈತ್ಯಗಳ ನಡುವೆ ಸಿಕ್ಕಿಕೊಂಡಿದ್ದೇವೆ. ಒಂದು ಜಾಗತೀಕರಣ ಇನ್ನೊಂದು ಕೋಮುವಾದ. ಇವೆರಡು ದೈತ್ಯಗಳ ನಡುವೆ ನಾವು ನಂಬುವ ಸಮಾನ (ಲಿಂಗ, ಜಾತಿ, ವರ್ಗ) ಸ್ವಾತಂತ್ರ್ಯ, ಪ್ರಜಾಸತ್ತಾತ್ಮಕ ರಾಜಕೀಯವನ್ನು ಜೀವಂತವಾಗಿಡುವ ಸವಾಲು ನಮ್ಮ ಮುಂದಿದೆ. ದಲಿತ ಚಳುವಳಿ, ಮಹಿಳಾ ಚಳುವಳಿ, ಆದಿವಾಸಿಗಳ ಚಳುವಳಿಯಂತಹ ಜನಪರ ಚಳುವಳಿಗಳು ನಮ್ಮ ಜನಸಾಮಾನ್ಯರ ಪರಂಪರಾಗತ ವಿವೇಕದೊಂದಿಗೆ (Common Peoples Traditional Wisdom) ಪರ್ಯಾಯ ರಾಜಕೀಯ ವ್ಯವಸ್ಥೆಯನ್ನು ಹುಟ್ಟು ಹಾಕಬಹುದು. ಇಲ್ಲಿ ಪರಂಪರಾಗತ ವಿವೇಕವೆಂದರೆ ಪರಂಪರೆಗೆ ಹಿಂತಿರುಗುವುದೆಂದಲ್ಲ. ಯಾವ ಪರಂಪರೆಗಳು ಮುಕ್ತವಾಗಿದ್ದು, ಈಗಲೂ ಜೀವಂತವಾಗಿವೆಯೋ ಆ ಪರಂಪರೆಗಳು ಮಾತ್ರ. ಇದು ಕೋಮುವಾದಿಗಳು ಮಾತನಾಡುವ ಪರಂಪರೆಗಿಂತ ಭಿನ್ನ. ಅವರು ಮಾತನಾಡುವುದು ಸಂಕುಚಿತ ಪರಂಪರೆಗಳು ಮತ್ತು ಅಂತಹ ಪರಂಪರೆಗೆ ಹಿಂತಿರುಗಬೇಕೆನ್ನುವ ಬಗ್ಗೆ. ಪರಂಪರೆಗೆ ಹಿಂತಿರುಗಬೇಕೆನ್ನುವ ಪರಂಪರೆಯ ಮಾಲೀಕರಾದ ಕೋಮುವಾದಿಗಳು ಒಂದೆಡೆಯಾದರೆ ಮತ್ತೊಂದೆಡೆ ಅಭಿವೃದ್ಧಿ ಆಧುನೀಕರಣ, ಜಾಗತೀಕರಣ ಹುಟ್ಟು ಹಾಕಿರುವ ಪ್ರಗತಿ, ಸ್ವಾತಂತ್ರ್ಯ, ಮುಕ್ತ ಸಮಾಜದಂತಹ Notionಗಳು. ಇಲ್ಲಿಯೂ ಭವಿಷ್ಯದ ರಕ್ಷಕರೆಂದು ಕರೆದುಕೊಳ್ಳುವವರು ಕೆಲವೆ ಸಾಂಸ್ಕೃತಿಕವಾಗಿ, ಆರ್ಥಿಕವಾಗಿ ಪ್ರಾಬಲ್ಯ ಹೊಂದಿರುವ ಶಕ್ತಿಗಳು. ಈ ಗುಂಪುಗಳೆ ಇಡೀ ಜಗತ್ತಿನ ಕೋಟ್ಯಾಂತರ ಜನರನ್ನು ಮುಂದುವರೆದವರೊ ಹಿಂದುಳಿದವರೊ ಎಂದು ನಿರ್ಧರಿಸುತ್ತವೆ. ಈ ರೀತಿ ಸಾಂಸ್ಕೃತಿಕವಾಗಿ ಉದ್ದಟದ, ಆರ್ಥಿಕವಾಗಿ reductionistಗಳಾದ ಶಕ್ತಿಗಳಿಂದಲೇ ಮೊದಲ ಜಗತ್ತು, ಮೂರನೆ ಜಗತ್ತು ಹುಟ್ಟಿಕೊಂಡಿದ್ದು. ಹಿಂದೆ ಹೋಗಬೇಕೆನ್ನುವವರು, ಮುಂದೆ ಹೋಗಬೇಕೆನ್ನುವವರೂ ಇಬ್ಬರಿಗೂ ತಮ್ಮ ಹಿತಾಸಕ್ತಿಗಳಷ್ಟೆ ಮುಖ್ಯ. ಆರೋಗ್ಯಕರ ವರ್ತಮಾನವನ್ನು ಹುಡುಕಿಕೊಳ್ಳುವ ಪ್ರಕ್ರಿಯೆಯಲ್ಲಿ ನಮ್ಮ ಕನಸುಗಳು ಕೈಬಿಟ್ಟು ಹೋಗಬಾರದು, ಕನಸುಗಳ ಬೇರು ಮಣ್ಣಲ್ಲಿ ಹುದುಗಿದ್ದರೂ ಅದರ ನೋಟ ಭವಿಷ್ಯಕ್ಕೂ ಹರಡಿಕೊಂಡಿರುತ್ತದೆ.

●

ಕಾಂಗ್ರೆಸ್ ಪಕ್ಷಕ್ಕೆ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದ ಹಿನ್ನಲೆ ಇದ್ದುದರಿಂದ ಅನೇಕ ವರ್ಷ ಆಳಿದರು. ಜನರು ಸ್ವಾತಂತ್ರ್ಯಕ್ಕೆ ಹೋರಾಡಿದ ಕುಟುಂಬವೆಂಬ ಸಿಂಪಥಿಯಿಂದಾಗಿ ಅನೇಕ ವರ್ಷ ಗೆಲ್ಲಿಸಿದರು. ಕಾಂಗ್ರೆಸ್ ಅತ್ಯಂತ ಭ್ರಷ್ಟಗೊಂಡಿದೆ. ರಾಜಕೀಯ ಹೊಲಸೆದ್ದು ಹೋಗಿದೆ. ಜಾತೀಯತೆ, ಆಮಿಷ ಒಡ್ಡಿ ಓಟು ಹಾಕಿಸುಕೊಳ್ಳುವಂತಹದು ಸಾಮಾನ್ಯವಾಗಿ ಬಿಟ್ಟಿದೆ. ಚುನಾವಣೆಯ ಪ್ರಕ್ರಿಯೆ ಅರ್ಥಪೂರ್ಣವಾಗಬೇಕಾದರೆ ಸುಧಾರಣೆಗಳಾಗಬೇಕು. ಜನರಲ್ಲಿ ಅರಿವು ಮೂಡಿಸುವ ಪ್ರಯತ್ನವನ್ನು ಪ್ರಗತಿಪರ ಸಂಘ ಸಂಸ್ಥೆಗಳು ಮಾಡಬೇಕು.

ಲಕ್ಷ್ಮಿ

☆ ☆ ☆

ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವವೇ ಇಲ್ಲವೆನ್ನಬೇಕು. ಒಂದೇ ಕುಟುಂಬವೇ ಅನೇಕ ವರ್ಷ ಆಡಳಿತ ನಡೆಸಿದೆ. ಪ್ರಾರಂಭದಲ್ಲಿ ಒಳ್ಳೆ ಗುರಿಯಿದ್ದ ಕಾಂಗ್ರೆಸ್ ಇಂದಿರಾಗಾಂಧಿ ಕಾಲದಿಂದ ಭ್ರಷ್ಟಗೊಂಡಿತು. ನಿತ್ಯ ಜೀವನದ ಅವಶ್ಯಕತೆಗಳಿಗೂ ಜನರು ಪರದಾಡುವ ಸ್ಥಿತಿ ಇದೆ. ರಾಜಕೀಯ ವ್ಯಕ್ತಿಗಳು ಸರಿಯಿಲ್ಲ. ಲಾಲ್‌ಬಹದ್ದೂರ್ ಶಾಸ್ತ್ರಿಯಂತಹ ರಾಜಕಾರಣಿಗಳು ಇಲ್ಲವೇ ಇಲ್ಲ, ಅಂತಹ ಒಬ್ಬ ವ್ಯಕ್ತಿ ಸಿಗುವವರೆಗೂ ಓಟು ಹಾಕುವುದಿಲ್ಲವೆಂದು ತೀರ್ಮಾನ ತೆಗೆದುಕೊಂಡಿದ್ದೇನೆ.

ಶಾಂತಮ್ಮ

ರಾಜಕೀಯ ಪಕ್ಷಗಳಲ್ಲಿ ಮಹಿಳಾ ವಿಷಯಗಳ ಕುರಿತು ಸಹಾನುಭೂತಿ ಹೆಚ್ಚುತ್ತಿದೆ

ಮೀರಾ ಚಕ್ರವರ್ತಿ, ಮಾನಿನಿ

ಒಂದು ಕಾಲದಲ್ಲಿ ಮಹಿಳೆ ಮತ್ತು ರಾಜಕೀಯ ಇವೆರಡೂ ಪರಸ್ಪರ ಪ್ರತ್ಯೇಕವಾದ ವಿಷಯಗಳು ಹಾಗಾಗಿ ಅವು ಬೇರೆ ಬೇರೆ ವಲಯಗಳನ್ನು ವ್ಯಾಪಿಸುವಂಥವು ಎಂಬುದು ಎಲ್ಲರ ಗಂಭೀರ ತಿಳುವಳಿಕೆಯಾಗಿತ್ತು. ರಾಜಕೀಯವೆಂಬುದು ಪುರುಷರ ಪ್ರಾಬಲ್ಯ ಹೊಂದಿದ ಸಾರ್ವಜನಿಕ ಚಟುವಟಿಕೆ ಮತ್ತು ಪುರುಷ ಲಕ್ಷಣಗಳು ಇಲ್ಲಿ ಅತ್ಯವಶ್ಯ ಎಂದು ಗ್ರಹಿಸಲಾಗಿತ್ತು. ಮಹಿಳೆಯರನ್ನು ಕೌಟುಂಬಿಕ ಹಾಗೂ ಗೃಹಕೃತ್ಯದ ಚೌಕಟ್ಟಿನಲ್ಲಿ ಮಾತ್ರ ಗುರುತಿಸಲಾಗಿತ್ತು.

ಆದರೆ ಮಹಿಳಾ ಚಳುವಳಿ ಈ ದೃಷ್ಟಿಕೋನದ ಬದಲಾವಣೆಗೆ ಬಹುಮುಖ್ಯ ಕೊಡುಗೆ ನೀಡಿ ಮಹಿಳೆಯರ ಸಂಬಳ (ಕೂಲಿ) ಹೆಚ್ಚಳ, ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸದ ಹಕ್ಕು, ಮಹಿಳಾ ಆಸ್ತಿ ಹಕ್ಕು, ಆರೋಗ್ಯ ಹಾಗೂ ನಿವೇಶನದ ಹಕ್ಕು, ಭೂ ಒಡೆತನದ ಹಕ್ಕು ಮುಂತಾದುವುಗಳನ್ನು ಸಾರ್ವಜನಿಕ ಚರ್ಚೆ ಹಾಗೂ ಸಂಘರ್ಷ ಕ್ಷೇತ್ರಕ್ಕೆ ಎಳೆ ತಂದಿತು.

ಮಹಿಳೆಯರನ್ನು ಅಧಿಕಾರ ಕೇಂದ್ರಗಳಿಂದ ದೂರವಿಟ್ಟು ಅವರ ಖಾಸಗಿ ಮತ್ತು ಸಾರ್ವಜನಿಕ ಜೀವನದಲ್ಲಿ ಮೂಲಭೂತ ತಾರತಮ್ಯ ಬೇರೂರಿಸಿದ್ದನ್ನು ಹಾಗೂ ಬಂಧಿಸಿದ ಸಂಕೋಲೆಯನ್ನು ಕಡಿದೆಸೆದು ಮಹಿಳೆಯು ರಾಜಕೀಯ ಕ್ಷೇತ್ರದಲ್ಲಿ ದುಮುಕಿದ ಚರಿತ್ರೆಯನ್ನು ದಾಖಲಿಸುತ್ತಾ, ಮಹಿಳಾ ಹೋರಾಟವು ಮಹಿಳೆ ಮತ್ತು ರಾಜಕೀಯಗಳ ನಡುವಣ ಸಂಬಂಧದ ಮೇಲೆ ಬೆಳಕು ಚೆಲ್ಲಿದೆ. ಬಹುಮುಖ್ಯವಾಗಿ, ರಾಜಕೀಯ ಮತ್ತು ನೀತಿ ಕಾರ್ಯಕ್ರಮಗಳು, ನೀತಿಗಳು ಪರೋಕ್ಷವಾಗಿ ಅಥವಾ ಪ್ರತ್ಯಕ್ಷವಾಗಿ ಮಹಿಳೆಯರ ಬದುಕಿನ ಮೇಲೆ ಪರಿಣಾಮ ಬೀರಿವೆ ಎಂಬುದನ್ನು ಅರ್ಥಮಾಡಿಕೊಳ್ಳಲು ಮಹಿಳಾ ಹೋರಾಟವು ಸಹಕಾರಿಯಾಗಿದೆ. ಉದಾಹರಣೆಗೆ ಕುಟುಂಬ ಯೋಜನೆ ನೀತಿ, ಭೂ ಒಡೆತನ ನೀತಿ, ಆರೋಗ್ಯ ನೀತಿ ಮತ್ತಿತರೆ.

ವೈಯಕ್ತಿಕವಾದುದೂ ರಾಜಕೀಯವಾದುದೇ ಎಂಬ ಗ್ರಹಿಕೆಯ ಆಧಾರದಲ್ಲಿ ಮಹಿಳೆಯರನ್ನು ರಾಜಕೀಯಕರಣಗೊಳಿಸುವುದು ಈಗ ಅಗತ್ಯವಾಗುತ್ತದೆ. ಆದುದರಿಂದ ಈ ದಿಕ್ಕಿನಲ್ಲಿ ಮೊದಲನೇ ಹೆಜ್ಜೆಯಾಗಿ, ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡರೆ ಮಹಿಳೆಯರಲ್ಲಿ ರಾಜಕೀಯ ಚಿಂತನೆಯು ಉದ್ದೀಪನಗೊಂಡು, ಪುರುಷರಿಂದ ನಡೆಯುವ ಸಾಮಾನ್ಯ ದಬ್ಬಾಳಿಕೆಯ ವಿರುದ್ಧ ಸಂಘರ್ಷ ನಡೆಸುವ ಛಲ ಹಾಗೂ ಒಗ್ಗಟ್ಟು ಮೂಡಲು ಸಾಧ್ಯವಿದೆ. ಈಗಾಗಲೇ ನಮ್ಮಲ್ಲಿ ಸಾಕಷ್ಟು ಜಾಗೃತಿ ಹೊಂದಿದ ಕೆಲ ಮಹಿಳೆಯರಿದ್ದಾರೆ ಅವರು ತಮ್ಮ ರಾಜಕೀಯ ದೃಷ್ಟಿಯ ಹಿನ್ನೆಲೆಯಲ್ಲಿ ತಮ್ಮ ಶಕ್ತಿ ಸಾಮರ್ಥ್ಯಗಳಿಂದ ಉಪಯುಕ್ತವಾದುದ್ದನ್ನು ಮಾಡಬಯಸುತ್ತಾರೆ. ಇಂಥವರನ್ನು ರಾಜಕೀಯದಲ್ಲಿ ಭಾಗವಹಿಸುವಂತೆ ಪ್ರೇರೇಪಿಸುವ ಮೂಲಕ, ಸಮಾನತೆಯನ್ನೇ ಸಾಧಿಸುವುದು ಸಾಧ್ಯವಾಗುವಂತೆ ಅವಕಾಶ ಕಲ್ಪಿಸುವುದು ಅವಶ್ಯಕ.

ಆರಂಭದ ಹಂತದಲ್ಲಿ, ಮಹಿಳಾ ಸಂಘಟನೆಗಳು ಪುರುಷ ಬೆಂಬಲಿಗರನ್ನು ಸದಸ್ಯರನ್ನಾಗಿಸಿಕೊಳ್ಳಲಿಲ್ಲ. ಇದು ಕೊಂಚ ಅರ್ಥಪೂರ್ಣವೇ ಆಗಿತ್ತು. ಏಕೆಂದರೆ ಅದು ಮಹಿಳಾ ಸಂಘಟನೆಗಳು ರೂಪಗೊಳ್ಳುವ ಪ್ರಾರಂಭಿಕ ಹಂತವಾಗಿತ್ತು. ಮಹಿಳೆಯರು ತಮ್ಮ ಕೌಶಲ್ಯವನ್ನು, ವಿಶ್ಲೇಷಣಾ ವಿಧಾನವನ್ನು ಹಾಗೂ ಒಗ್ಗಟ್ಟನ್ನು ವಿಶಿಷ್ಟವಾಗಿ ರೂಪಿಸಿಕೊಳ್ಳುವ ಕಾಲ ಅದಾಗಿತ್ತು. ಆದರೆ ಇಂದು ಪುರುಷ ಬೆಂಬಲಿಗರನ್ನು ದೂರವಿಡುವುದು ಸ್ವಾಗತಾರ್ಹ ಕಾರ್ಯ ತಂತ್ರವಾಗಲಾರದು. ಸಮಾಜದಲ್ಲಿನ ಇತರೆ ಸಮುದಾಯಗಳ ಅಗತ್ಯಗಳೊಂದಿಗೆ ಮಹಿಳೆಯರ ಬೇಡಿಕೆಗಳನ್ನು ಮೇಳೈಸಿ ಮಂಡಿಸದೇ ಹೋದರೆ ಮಹಿಳೆಯರ ಬೇಡಿಕೆಗಳಿಗೆ ಸಮಸ್ತ ಸಮಾಜದ ಒತ್ತಾಸೆ, ಬೆಂಬಲಗಳು ಸಿಕ್ಕುವುದು ದುಸ್ತರ. ಇವುಗಳನ್ನೆಲ್ಲ ಮೇಳೈಸಿ ಮಂಡಿಸದೇ ಹೋದರೆ ಸ್ವಹಿತಾಸಕ್ತ ಶಕ್ತಿಗಳ ವಿರೋಧಿ ಹೋರಾಟಕ್ಕೆ ಅಗತ್ಯವಾದ ಬೆಂಬಲವನ್ನು ಪಡೆದುಕೊಳ್ಳುವುದು ಕಷ್ಟಕರ. ಸಂದರ್ಭವು ಸಂಕೀರ್ಣವಾಗಿರುವ ಈ ಹೊತ್ತಿನಲ್ಲಿ ಎಡ ಮೈತ್ರಿಕೂಟವು ಗಮನಾರ್ಹ ಚರ್ಚೆಯ ವಿಷಯವಾಗಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ ತುರ್ತಿನ ಹಾಗೂ ದೂರದೃಷ್ಟಿಯ ಎಂಬ ಎರಡು ಮಾನದಂಡ ಅನುಸರಿಸಿದರೆ, ಎಡಪಕ್ಷಗಳೊಂದಿಗೆ ಗುರುತಿಸಿಕೊಳ್ಳುವುದು ಅನುಕೂಲಕರವಾಗಬಲ್ಲದು. ಆರ್ಥಿಕವಾಗಿ ಬಿಕ್ಕಟ್ಟಿನ ಸಂದರ್ಭವನ್ನು ಎದುರಿಸಿ ಮಹಿಳೆ ನಡೆಸಿದ ಹೋರಾಟವನ್ನು ಉದಾಹರಣೆಗೆ ಸಮಾಜ ಕಲ್ಯಾಣ, ಶಿಕ್ಷಣ, ಆರೋಗ್ಯ, ಉದ್ಯೋಗ ಕ್ಷೇತ್ರಗಳ ಸೌಲಭ್ಯಗಳಲ್ಲಿ ಆದ ಕಡಿತಗಳನ್ನು ಎಡಪಕ್ಷಗಳು ಎತ್ತಿಕೊಳ್ಳುತ್ತಾ ಬಂದಿವೆ. ಇದೇ ಕಾಲಕ್ಕೆ, ಇತರ ರಾಜಕೀಯ ಪಕ್ಷಗಳಲ್ಲಿ ಕೂಡ ಕಾರಣಗಳೇನೇ ಇರಲಿ, ಮಹಿಳಾ ವಿಷಯ/ಬೇಡಿಕೆಗಳ ಬಗೆಗಿನ ಸಹಾನುಭೂತಿ ಹೆಚ್ಚುತ್ತಿದೆ. ಇವೆಲ್ಲವೂ ಚುನಾವಣಾ ಪ್ರಕ್ರಿಯೆಯೊಂದಿಗಿನ ಮಹಿಳಾ ಚಳುವಳಿಯ ಸಂಬಂಧ ಅರ್ಥಪೂರ್ಣವಾಗಿ ಏರ್ಪಡಲು ಕಾರಣಗಳಾಗುತ್ತವೆ. ಇಂಥ ಕಾರಣಗಳ ಪ್ರಯೋಜನ ಪಡೆದುಕೊಳ್ಳುವುದೂ ಮುಖ್ಯ. ಈ ದಿಕ್ಕಿನಲ್ಲಿ ರೂಪಿಸುವ ಕಾರ್ಯತಂತ್ರಕ್ಕೆ ಈಗಾಗಲೇ ಒತ್ತಾಯಿಸಿರುವಂತೆ ಸಂಸತ್ತಿನಲ್ಲಿ ಮಹಿಳೆಯರಿಗೆ ಶೇ. 33 ಮೀಸಲಾತಿ ಕೂಡ ಇನ್ನೊಂದು ಮುಖ್ಯ ಅಂಶವಾಗಬಲ್ಲದು.

ಕನ್ನಡಕ್ಕೆ : *ಶಾರದ ಬಿ. ಎಸ್.*

ಚುನಾವಣ ರಾಜಕೀಯ - ಪ್ರತಿಯೊಬ್ಬ ಪ್ರಜೆಯ ಭಾಗವಹಿಸುವಿಕೆಯನ್ನು ಖಾತ್ರಿಗೊಳಿಸುತ್ತದೆ

- ಡೋನ

ಈಗ ಆಚರಣೆಯಲ್ಲಿರುವ ಚುನಾವಣ ರಾಜಕೀಯದ ಬಗ್ಗೆ ಏನು ಹೇಳಲು ಸಾಧ್ಯ? ಇಡಿ ಪ್ರಕ್ರಿಯೆಯ ತಮಾಷೆಯ ವಿಷಯವಾಗಿದೆ. ಕಾರಣ ಅದು ಪ್ರತಿಬಿಂಬಿಸುವುದು ಪ್ರತಿಯೊಂದು ಎಳೆಯೂ ಕುಲಗೆಟ್ಟಿರುವ ಸಮಾಜವನ್ನು. ಚುನಾವಣ ಕಣದಲ್ಲಿ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳಾದರು ಎಂತಹವರು? ಬಹಳಷ್ಟು ಮಂದಿ ಅಪರಾಧದ ಹಿನ್ನೆಲೆಯುಳ್ಳವರು. ಆ ರೀತಿಯ ಅಭ್ಯರ್ಥಿಗಳು ರಾಜಕೀಯದಲ್ಲಿ ನೈತಿಕತೆಯನ್ನು ತರಬಲ್ಲರೆ? ಇಡೀ ಸಮಾಜವೇ ಕೊಳೆತು ಹೋಗಿದೆ. ಈ ಕೊಳಕಿನಿಂದ ಸಮಾಜವನ್ನು ಶುದ್ಧಗೊಳಿಸಬೇಕಾದರೆ ವ್ಯವಸ್ಥೆಯನ್ನು ಸಂಪೂರ್ಣವಾಗಿ ಮಗುಚಬೇಕಾಗುತ್ತದೆ. ರಾಜಕೀಯ ಪ್ರತಿನಿಧಿಗಳ ಚುನಾವಣ ಪ್ರಕ್ರಿಯೆಯನ್ನು ಖಂಡಿತವಾಗಿಯೂ ಬೆಂಬಲಿಸಬೇಕು ಮತ್ತು ಪ್ರೋತ್ಸಾಹಿಸಬೇಕು, ಆದರೆ ಈಗ ಆಚರಣೆಯಲ್ಲಿರುವ, ನಾವು ಕಾಣುತ್ತಿರುವ ಪ್ರಕ್ರಿಯೆಯನ್ನಲ್ಲ.

ಚುನಾವಣ ರಾಜಕೀಯದ ವ್ಯವಸ್ಥೆಯೇ ಮೌಲ್ಯವನ್ನು ಕಳೆದುಕೊಂಡಿರುವುದು ವಿಷಾದಕರ. ಕಾರಣ ಇಡಿ ಪ್ರಕ್ರಿಯೆಯೆ ಮೋಸ, ವಂಚನೆ, ಭ್ರಷ್ಟತೆಯಿಂದ ತುಂಬಿಕೊಂಡಿವೆ. ಚುನಾವಣ ಪ್ರಚಾರದಿಂದಿಡಿದು ಫಲಿತಾಂಶ ಪ್ರಕಟವಾಗುವವರೆಗೆ ಭಯ, ಗುಮಾನಿಯಿಂದ ಕುಳಿತಿರಬೇಕಾದ ಪರಿಸ್ಥಿತಿ.

ಎಲ್ಲಾ ಪ್ರಚಾರಗಳು, ಸಾರ್ವಜನಿಕ ಭಾಷಣಗಳು, ಮತ್ತು ಪ್ರಣಾಳಿಕೆಗಳು ಸುಳ್ಳಿನ ಕಂತೆಗಳು. ಆಶ್ವಾಸನೆಗಳನ್ನು ಈಡೇರಿಸಲಿಲ್ಲವೆಂದು ಪಕ್ಷಗಳನ್ನು ದಂಡಿಸುವ ವ್ಯವಸ್ಥೆ ಇದೆಯೆ? ಚುನಾಯಿತ ಪ್ರತಿನಿಧಿಗಳು ಸದಾಚಾರ ಸಂಹಿತೆಯನ್ನು ಉಲ್ಲಂಘಿಸಿದರೆಂಬ ಕಾರಣಕ್ಕೆ ಅವರ ಸ್ಥಾನದಿಂದ ಕೆಳಗಿಳಿಸುವ ವ್ಯವಸ್ಥೆಯನ್ನು ಹೊಂದಲು ಸಾಧ್ಯವೆ? ಅಭ್ಯರ್ಥಿಗಳನ್ನು ಪರಮಾರ್ಶಿಸುವ Fool Proof ವ್ಯವಸ್ಥೆಯನ್ನು, ಈಗಿರುವ ದುಬಾರಿ ಪ್ರಚಾರಕ್ಕೆ ಬದಲಾಗಿ ಜನಪ್ರಿಯ ವಿಧಾನಗಳನ್ನು ಪರಿಚಯಿಸುವ ವ್ಯವಸ್ಥೆಯನ್ನು ಜಾರಿಗೊಳಿಸಲು ಸಾಧ್ಯವೆ? ಮತ ಚಲಾವಣೆಯಿಂದ ಹಿಡಿದು ಮತ ಏಣಿಕೆಯವರೆಗೆ ಎಲ್ಲಾ ಅರ್ಥದಲ್ಲೂ ಮುಕ್ತ, ನಿಷ್ಪಕ್ಷಪಾತ ಚುನಾವಣೆ ವ್ಯವಸ್ಥೆಯನ್ನು ತರಲು ಸಾಧ್ಯವೆ? ಇವು ಸಾಧ್ಯವಾದರೆ ಪರಿಣಾಮ ಆಶಾದಾಯಕವಾಗಬಹುದು. ಇಲ್ಲವಾದಲ್ಲಿ ಪರ್ಯಾಯವೇನಿದೆ?.

ಚುನಾವಣಾ ರಾಜಕೀಯ ವ್ಯವಸ್ಥೆಯು ಪ್ರತಿಯೊಬ್ಬ ಪ್ರಜೆಯ ಭಾಗವಹಿಸುವಿಕೆಯನ್ನು ಖಾತ್ರಿ ಪಡಿಸುತ್ತದೆ, ಇದು ನಮ್ಮಂತಹ ದೊಡ್ಡ ಪ್ರಜಾಪ್ರಭುತ್ವಕ್ಕೆ ಬಹುಮುಖ್ಯ. ವ್ಯವಸ್ಥೆಯ ದುರುಪಯೋಗವಾಗಿರುವುದರಿಂದ, ಚುನಾವಣ ವ್ಯವಸ್ಥೆಯನ್ನೆ ಖಂಡಿಸಲಾಗುವುದಿಲ್ಲ.

Cheks & Balance ಅನ್ನು ಹುಟ್ಟು ಹಾಕುವ, ಪ್ರಾರಂಭಿಸುವ ಅಗತ್ಯವಿದೆ. ಆಗ ನಿಜ ಅರ್ಥದಲ್ಲಿ ಅರ್ಥಪೂರ್ಣ ರಾಜಕೀಯವನ್ನು ಅನುಭವಿಸಬಹುದು. ಜನರಿಗೆ ನಿಲುಕುವ, ಜನರನ್ನು ತಲುಪುವ ಅರ್ಥಪೂರ್ಣ ರಾಜಕೀಯವೇ ಸಶಕ್ತ ರಾಜಕೀಯ. ಇಂತಹ ರಾಜಕೀಯ ನಮಗೆ ಬೇಕಿರುವುದು. ಭ್ರಷ್ಟತೆ, ಹಿಂಸೆ, ಆತಂಕದಿಂದ ಕೂಡಿದ ರಾಜಕೀಯವಲ್ಲ. ನೈತಿಕತೆಯನ್ನು ಕಳೆದುಕೊಂಡಿರುವ ಬಡವರನ್ನು ಭೀತಿಗೊಳಿಸುವ ರಾಜಕೀಯವಲ್ಲ. ●

ಪ್ರಜೆ ಕಾಣೆಯಾಗಿ ತಂತ್ರ ಮಾತ್ರ ಉಳಿದುಕೊಂಡಿದೆ

- ಚಂದ್ರಮತಿ ಸೋಂದಾ, ಸುತ್ತಾ, ಮೈಸೂರು

ಭಾರತವು ಅತ್ಯುತ್ತಮ ರಾಜಕೀಯ ವ್ಯವಸ್ಥೆಯಾದ ಪ್ರಜಾಸತ್ತೆಯನ್ನು ಹೊಂದಿದ್ದರೂ ಪಕ್ಷಗಳ ರಾಜಕೀಯ ಹುನ್ನಾರದಿಂದಾಗಿ ಇತ್ತೀಚಿನ ವರ್ಷಗಳಲ್ಲಿ ದೇಶದಲ್ಲಿ ಪ್ರಜಾಸತ್ತೆಯ ಅಣಕ ಮಾತ್ರ ನಡೆಯುತ್ತಿದೆ. ಶಕ್ತಿ ಪ್ರದರ್ಶನ ಮತ್ತು ಹಣ ಚುನಾವಣೆಯಲ್ಲಿ ಜಯ ಗಳಿಸಲು ಬೇಕಾದ ಅರ್ಹತೆಯಾಗಿದೆ. ಈ ತತ್ತ್ವ ರಹಿತ ರಾಜಕಾರಣದಿಂದಾಗಿ ರಾಜಕೀಯ ಅಪರಾಧೀಕರಣ ಎಲ್ಲೆ ಮೀರಿದೆ. ರಾಜಕಾರಣ ಎನ್ನುವುದು ಹಣ ಮಾಡುವ ದಂಧೆಯಾಗಿ ಪರಿಣಮಿಸಿದೆ. ಹಾಗಾಗಿ, ನಾಯಿ ಕೊಡೆಗಳಂತೆ ರಾಜಕೀಯ ಪಕ್ಷಗಳು ಹುಟ್ಟಿಕೊಳ್ಳುತ್ತಿವೆ. ಈಗ ತಾನೇ ಅಸ್ತಿತ್ವಕ್ಕೆ ಬಂದ ಪಕ್ಷವೂ ರಾಷ್ಟ್ರೀಯ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶವಿರುವುದರಿಂದ ಚುನಾವಣಾ ವೆಚ್ಚ ದಿನೇ ದಿನೇ ಏರುತ್ತಿದೆ. ಅಭ್ಯರ್ಥಿಗಳ ಆಯ್ಕೆ ಗೋಜಲಾಗುತ್ತಿದೆ.

ಇನ್ನು ಪಕ್ಷಗಳ ಪ್ರಣಾಳಿಕೆಯನ್ನು ಗಮನಿಸಿದರೆ ಅವರ ಧ್ಯೇಯೋದ್ದೇಶ - ಪ್ರಣಾಳಿಕೆ - ವ್ಯವಹಾರಗಳ ನಡುವೆ ತಾಳಮೇಳವಿಲ್ಲ. 'ಮಹಿಳಾ ಮೀಸಲಾತಿ' ಕುರಿತ ವಿಷಯವನ್ನೇ ಉದಾಹರಣೆಗೆ ನೋಡಬಹುದು. ತಾನು ಮಹಿಳಾಪರ ಎಂದು ಹೇಳಿಕೊಳ್ಳುತ್ತಿದ್ದ/ಹೇಳಿಕೊಳ್ಳುತ್ತಿರುವ ಪಕ್ಷಗಳೂ ಸ್ಥಾನ ಹಂಚಿಕೆಯಲ್ಲಿ ಮಹಿಳೆಯರಿಗೆ ಸಾಕಷ್ಟು ಪ್ರಾತಿನಿಧ್ಯ ನೀಡಿಲ್ಲ. ಇದರಲ್ಲಿ ಎಡಪಂಥೀಯ, ಬಲಪಂಥೀಯ ಪಕ್ಷಗಳೆಂಬ ಭಿನ್ನತೆಯಿಲ್ಲ. ಅಧಿಕಾರ ಗ್ರಹಣವೇ ಮುಖ್ಯವಾದ್ದರಿಂದ ಸಾಮಾಜಿಕ ನ್ಯಾಯವಾಗಲಿ, ಮೌಲ್ಯವಾಗಲಿ, ಬದ್ಧತೆಯಾಗಲಿ ಇವತ್ತು ಯಾವ ಪಕ್ಷಕ್ಕೂ ಬೇಕಾಗಿಲ್ಲ. ಇನ್ನು ರಾಜಕೀಯ ಸಂಕಲ್ಪ ಶಕ್ತಿಯನ್ನಂತೂ ರಾಜಕಾರಣಿಗಳಲ್ಲಿ ಅರಸುವುದು ವ್ಯರ್ಥ ಸಾಹಸ. ಏನಕೇನ ಪ್ರಕಾರೇಣ ಕುರ್ಚಿ ಹಿಡಿಯಲು ಯಾವುದೇ ಬಗೆಯಲ್ಲಾದರೂ, ಯಾರೊಂದಿಗಾದರೂ ರಾಜಿಯಾಗಲು, ಕೈಗೂಡಿಸಲು ಎಲ್ಲ ಪಕ್ಷಗಳೂ ಸಿದ್ಧ. ಇದರಿಂದಾಗಿ ಪ್ರಜಾತಂತ್ರವು ಅರ್ಥವತ್ತಾಗಿ ಬಲಿಷ್ಠವಾಗುವ ಬದಲು 'ಪ್ರಜೆ' ಕಾಣೆಯಾಗಿ 'ತಂತ್ರ' ಮಾತ್ರ ಉಳಿದುಕೊಂಡಿದೆ.

ನೇರವಾಗಿ ಪ್ರಜೆಗಳೇ ನೇತಾರರನ್ನು ಆರಿಸುವ ವ್ಯವಸ್ಥೆ ಬರಬೇಕು. ಬಹುಮತ ಪಡೆದ ಪಕ್ಷವೊಂದು ದೇಶದ ನಾಯಕನನ್ನು ಆರಿಸುವ ಈಗಿನ ವ್ಯವಸ್ಥೆಯಲ್ಲಿ ಅತಂತ್ರ ಲೋಕಸಭೆ ನಿರ್ಮಾಣವಾಗುವ ಸಾಧ್ಯತೆ ಹೆಚ್ಚು. ಹೀಗಾದಲ್ಲಿ ದೇಶದ ಸುಭದ್ರತೆಗೆ ಸಂಚಕಾರ ಬರಬಹುದು. ಬೇಕಾಬಿಟ್ಟಿಯಾಗಿ ಪಕ್ಷಗಳು ಹುಟ್ಟಿಕೊಳ್ಳುತ್ತಿರುವುದನ್ನು ನಿಯಂತ್ರಿಸಬೇಕು. ರಾಷ್ಟ್ರೀಯ ಪಕ್ಷವೆನಿಸಿಕೊಳ್ಳಲು ಲೋಕಸಭೆಗೆ ಶೇ. 50 ಸ್ಥಾನಗಳಿಗೆ, ಪ್ರಾಂತೀಯ ಪಕ್ಷವೆನಿಸಿಕೊಳ್ಳಲು ವಿಧಾನಸಭೆಗೆ ಶೇ. 50 ಸ್ಥಾನಗಳಿಗೆ ಅಭ್ಯರ್ಥಿಗಳನ್ನು ನಿಲ್ಲಿಸುವ ಸಾಮರ್ಥ್ಯವಿರುವ ಪಕ್ಷಗಳಿಗೆ ಮಾತ್ರ ಮಾನ್ಯತೆ ದೊರಕಬೇಕು. ಚುನಾವಣೆಯಲ್ಲಿ ಶೇ. 6ರಷ್ಟು ಮತ ಪಡೆದ ಪಕ್ಷಗಳಿಗೆ ಮಾತ್ರ ಇನ್ನು ಮುಂದೆ ಮಾನ್ಯತೆ ನೀಡುವುದಾಗಿ ಚುನಾವಣಾ ಆಯೋಗವು ಸೂಚಿಸಿದೆ. ಇದನ್ನು ಶೇ. 10ಕ್ಕೇರಿಸಿ, ಈಗಿರುವ ಪಕ್ಷಗಳಿಗೆ ಇದನ್ನು ಅನ್ವಯಿಸಬೇಕು. ಸಾಮಾಜಿಕ ಹಾಗೂ ಲಿಂಗಾಧಾರಿತ ಅಸಮಾನತೆ ಹೋಗಲಾಡಿಸಲು ಕಾಲಮಿತಿಯಲ್ಲಿ ರಾಜಕೀಯ ಮೀಸಲಾತಿ ಸೌಲಭ್ಯವನ್ನು ಕಡ್ಡಾಯಗೊಳಿಸಬೇಕು. ●

ಚುನಾವಣೆ ಗ್ರಾಲರ ಮಹಿಳೆಯರ ಬೇಡಿಕೆಗಳು

ದಿನಾಂಕ 6-2-1998ರಂದು ಜನವಾದಿ ಮಹಿಳಾ ಸಂಘಟನೆಯ ನೇತೃತ್ವದಲ್ಲಿ ವಿವಿಧ ರಾಜಕೀಯ ಪಕ್ಷಗಳೊಂದಿಗೆ ಮುಖಾಮುಖಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಖ್ಯಾತ ಪತ್ರಕರ್ತೆ ಪಾರ್ವತಿ ಮೆನನ್‌ರವರು ಮಹಿಳೆ ಮತ್ತುಪ್ರಸ್ತುತ ಸಮಸ್ಯೆಗಳನ್ನು ಕುರಿತು ವಿಷಯ ಮಂಡನೆ ಮಾಡುತ್ತಾ, ಚುನಾವಣಾ ಪ್ರಕ್ರಿಯೆಯ ಪ್ರತಿಯೊಂದು ಹಂತದಿಂದ ಮಹಿಳೆಯರು ದೂರವಿರುವುದನ್ನು ಗಮನಿಸಬೇಕು. ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು, ಪ್ರಣಾಳಿಕೆಯನ್ನು ನಿರ್ಧರಿಸುವುದು, ಚುನಾವಣಾ ಪ್ರಚಾರದ ಜವಾಬ್ದಾರಿ, ಸಂಪೂರ್ಣವಾಗಿ ಪುರುಷರಿಂದ ನಿರ್ಧರಿಸಲ್ಪಡುತ್ತದೆಯೆಂದರು. ರಾಜಕೀಯ ಪಕ್ಷಗಳ ಪ್ರಣಾಳಿಕೆಯಲ್ಲಿನ ಮುಕ್ತ ಆರ್ಥಿಕ ನೀತಿಯಿಂದಾಗಿ ಮಹಿಳೆಯರು ನೇರವಾದ ತೊಂದರೆಗೆ ಒಳಗಾಗುತ್ತಾರೆಂದರು.

ಮಹಿಳಾ ದಕ್ಷತಾ ಸಮಿತಿಯ ಶ್ರೀಮತಿ ಶರಣ್ಯ ಹೆಗಡೆ "ಸರ್ವ ವ್ಯಾಪಿಯಾದ ಭ್ರಷ್ಟಾಚಾರವನ್ನು ಕುರಿತು ಮಾತನಾಡುತ್ತಾ, ಉನ್ನತ ಅಧಿಕಾರದಲ್ಲಿರುವ ಯಾರೇ ಈ ಅಪರಾಧವನ್ನು ಮಾಡಿದರೆ ಸಾಮಾನ್ಯರಿಗೆ ನೀಡುವ ಶಿಕ್ಷೆಯನ್ನು ನೀಡುವಂತಹ ಮಸೂದೆಯನ್ನು ಜಾರಿಗೆ ತರಬೇಕೆಂದು ನುಡಿಧರು.

ಡಾ. ವಿಜಯಾ ಅವರು ಕೋಮುವಾದವನ್ನು ಕುರಿತು ಮಾತನಾಡುತ್ತಾ ಹೊರಗಡೆಯ ಕೂಟವನ್ನು ವಿರೋಧಿಸುವ ಉದ್ದೇಶದಿಂದ, ಭಾರತೀಯ ನಾರಿಯ ಪರಿಕಲ್ಪನೆಯನ್ನು ಹುಟ್ಟು ಹಾಕಲಾಗಿದೆಯೆಂದರು. ಈ ಭಾರತೀಯ ನಾರಿ ಕಲ್ಪನೆಯನ್ನು ಸ್ತ್ರೀಯರ ಮೇಲೆ ಹೇರಲಾಗಿದೆ. ಇದು ಒಂದು ವರ್ಗದ ಹಿತಾಸಕ್ತಿಯನ್ನು ಕಾಪಾಡಲು ಹುಟ್ಟಿದವು. ಕೋಮು ಗಲಭೆಯ ಸಂದರ್ಭದಲ್ಲಿ ಒಂದು ಕೋಮಿನ ಗಂಡಸರ ಅಹಂನ್ನು ನಾಶಪಡಿಸಲು ಇನ್ನೊಂದು ಕೋಮಿನ ಸ್ತ್ರೀಯರ ಮೇಲೆ ಅತ್ಯಾಚಾರವೆಸಗಲಾಗುವುದು ಎಂದರು.

ಈ ಮುಖಾಮುಖಿ ಕಾರ್ಯಕ್ರಮದಲ್ಲಿ ಕಾಂಗ್ರೆಸ್, ಬಿ.ಜೆ.ಪಿ., ಲೋಕಶಕ್ತಿ, ಸಿ.ಪಿ.ಐ, ಜನತಾದಳ, ಸಿ.ಪಿ.ಐ.ಎಂ. ರಾಜಕೀಯ ಪಕ್ಷದ ವಕ್ತಾರರು ಭಾಗವಹಿಸಿ, ಮಹಿಳೆಯರ ಬಗ್ಗೆ ತಮ್ಮ ತಮ್ಮ ಪಕ್ಷದ ನಿಲುವುಗಳನ್ನು ವ್ಯಕ್ತಪಡಿಸಿದರು.

ಮಹಿಳಾ ಸಂಘಟನೆಗಳು ಮಹಿಳೆಯರ ಬೇಡಿಕೆಗಳನ್ನೊಳಗೊಂಡ ಕರಪತ್ರವನ್ನು ಬಿಡುಗಡೆ ಮಾಡಲಾಯಿತು.

ಬೇಡಿಕೆಗಳ ವಿವರ

ದೇಶದ ಮಹಿಳಾ ಸಮೂಹದ ಆಶೋತ್ತರಗಳಿಗೆ ಸ್ಪಂದಿಸುವ ಈ ಕೆಳಗಿನ ಸಂಘಟನೆಗಳು ಎಲ್ಲ ರಾಜಕೀಯ ಪಕ್ಷಗಳಿಗೆ ನಮ್ಮ ಈ ಬೇಡಿಕೆಯ ಪಟ್ಟಿಯನ್ನು ಮುಂದಿಡುತ್ತಿದ್ದೇವೆ.

ಕಳೆದ ಚುನಾವಣೆ ನಂತರ ಹಲವು ಸಂದರ್ಭಗಳಲ್ಲಿ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು/ನಾಯಕರುಗಳನ್ನು ಭೇಟಿ ಮಾಡಿ "ಶಾಸನ ಸಭೆಗಳಲ್ಲಿ ಮಹಿಳೆಯರಿಗೆ 33 ಪ್ರತಿಶತ ಮೀಸಲಾತಿ" ಮಸೂದೆ ಕುರಿತಂತೆ ಹಿಂದಿನ ಚುನಾವಣೆಯಲ್ಲಿ ಮಹಿಳೆಯರಿಗೆ ಕೊಟ್ಟ ವಚನಕ್ಕೆ ಬದ್ಧರಾಗಿ ನಡೆದುಕೊಳ್ಳುವಂತೆ ಮನವಿ ಮಾಡಿದ್ದೆವು. ಕರಡುಮಸೂದೆಯನ್ನು ತಯಾರಿಸಿ ಚರ್ಚೆಗೆಂದು ಸಂಸತ್ತಿನಲ್ಲಿ ಮಂಡಿಸಿದ ಸಂಯುಕ್ತರಂಗ ಸರ್ಕಾರದ ಪ್ರಯತ್ನವನ್ನು ನಾವು ಶ್ಲಾಘಿಸುತ್ತೇವೆ. ಸಂಸದರ ಅಭಿಪ್ರಾಯದಂತೆ ಮಸೂದೆಯನ್ನು ಜಂಟಿ ಸಮಿತಿಗೆ ಒಪ್ಪಿಸಲಾಯಿತು. ಸಮಿತಿ ತನ್ನ ಶಿಫಾರಸ್ಸುಗಳನ್ನು ಮಾಡಿದ ನಂತರವೂ ಕೂಡ ಮಸೂದೆ ಅಂಗೀಕಾರವಾಗಲಿಲ್ಲ ಎಂಬುದು ಕಹಿ ಸತ್ಯ. ವಿಪರ್ಯಾಸವೆಂದರೆ ಒಂದೇ ಪಕ್ಷಕ್ಕೆ ಸೇರಿದ ಸಂಸದರಿಂದ ವಿಭಿನ್ನ ರೀತಿಯ ಅಭಿಪ್ರಾಯಗಳು ವ್ಯಕ್ತವಾದವು. ತಮ್ಮದೇ ಪಕ್ಷದ ಚುನಾವಣಾ ಪ್ರಣಾಳಿಕೆಗೆ ವಿರುದ್ಧವಾಗಿ ಸಂಸದರು ನಡೆದುಕೊಂಡ ಹಿನ್ನೆಲೆಯಲ್ಲಿ "ಮಹಿಳಾ ಮೀಸಲಾತಿ ಮಸೂದೆ" ಹಿಂದಿನ ಸಂಸತ್ತಿನ ಅಪೂರ್ಣ ಕಲಾಪಗಳಲ್ಲಿ ಒಂದಾಗಿ ಉಳಿಯಿತು ಎಂದು ನಾವು ಅಭಿಪ್ರಾಯ ಪಡುತ್ತೇವೆ. ಪಕ್ಷದ ಚುನಾವಣಾ ಪ್ರಣಾಳಿಕೆಗೆ ಬದ್ಧರಾಗಿ ನಡೆದುಕೊಳ್ಳುವಂತೆ ಸಂಸದರಿಗೆ ಆದೇಶ ನೀಡುವಲ್ಲಿ ಪಕ್ಷದ ನಾಯಕತ್ವ ವಿಫಲವಾಗಿದ್ದು - ಬಹುಸಂಖ್ಯೆಯ ಮಹಿಳೆಯರು ಮತ್ತು ಮಹಿಳಾ ಸಮಾನತೆಯನ್ನು ಗೌರವಿಸುವ ಪುರುಷರಿಗೆ ದೊಡ್ಡ ಆಘಾತವನ್ನುಂಟುಮಾಡಿತಷ್ಟೇ ಅಲ್ಲದೇ ಪ್ರಜಾತಂತ್ರದ ಮುಖ್ಯ ಅಂಶವಾದ ರಾಜಕೀಯ ಹೊಣೆಗಾರಿಕೆಗೆ ದೊಡ್ಡ ಪೆಟ್ಟು ನೀಡಿದಂತಾಗಿದೆ.

ಈ ಹಿನ್ನೆಲೆಯಲ್ಲಿ ಪ್ರಸಕ್ತ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳಿಂದ ಮತ್ತು ಪಕ್ಷಗಳಿಂದ ಮತ ನೀಡುವ ಮುನ್ನ ಉತ್ತರಗಳನ್ನು ಬಯಸುತ್ತೇವೆ.

1. ಅ. ಮಹಿಳಾ ಮೀಸಲಾತಿ ಮಸೂದೆಯ ಜಾರಿ : 12ನೇ ಲೋಕಸಭೆಯ ಮೊದಲ ಅಧಿವೇಶನದಲ್ಲಿ ಆದ್ಯತೆ ಪಡೆಯುವಂತೆ ಮಾಡಬೇಕೆನ್ನುವುದು ನಮ್ಮ ಆಗ್ರಹ - ನೀವು ಅದಕ್ಕೆ ಬದ್ದರಾಗಿ ನಡೆದುಕೊಳ್ಳುವಿರೇ?

   ಆ ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿರುವ "ಮಹಿಳಾ ಮೀಸಲಾತಿ ಶಾಸನ"ದ ಜಾರಿಗೆ ಬದ್ಧರಾಗಿ ನಿಮ್ಮ ಪಕ್ಷದ ಸಂಸದರು ನಡೆದುಕೊಳ್ಳುವಂತೆ ಕ್ರಮ ವಹಿಸುವಿರೇ? ಪ್ರಥಮ ಅಧಿವೇಶನದಲ್ಲಿ ಈ ಮಸೂದೆಯ ಜಾರಿಯ ವಚನಕ್ಕೆ ನಿಮ್ಮ ಪಕ್ಷ ಬದ್ಧವೇ?

2. ಮಹಿಳಾ ಮೀಸಲಾತಿ ಮಸೂದೆ ಮಹಿಳೆಯರಿಗೆ ರಾಜಕೀಯ ಅಧಿಕಾರ ನೀಡುವಂತೆ, ದೇಶದುದ್ದಗಲಕ್ಕೂ ಇರುವ 30 ಮಿಲಿಯಕ್ಕಿಂತಲೂ ಹೆಚ್ಚಿರುವ ಮಹಿಳೆಯರ ಬದುಕಿನ ಭದ್ರತೆಗೆ ಆಧಾರವಾಗಬಲ್ಲ ಕೃಷಿಕೂಲಿಕಾರ ಮಸೂದೆಯ ಕುರಿತು ನಾವು ನಿಮ್ಮಿಂದ ಸ್ಪಷ್ಟ ಉತ್ತರಗಳನ್ನು ಬಯಸುತ್ತೇವೆ. ಕೃಷಿಯೇ ಪ್ರಧಾನವಾದ ನಮ್ಮ ದೇಶದಲ್ಲಿ ಸ್ವಾತಂತ್ರದ 50ನೇ ವರ್ಷವನ್ನು ಆಚರಿಸುತ್ತಿರುವ ಸಂದರ್ಭದಲ್ಲಿಯೂ ಕೃಷಿ ಕೂಲಿಕಾರರ ಬದುಕಿನ ಕುರಿತು ನಿರ್ದಿಷ್ಟ ಹೆಜ್ಜೆಗಳನ್ನಿಡದಿರುವುದು ವಿಪರ್ಯಾಸ. ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಕೂಡ ಶಿಫಾರಸು ಮಾಡಿರುವಂತೆ ಈ ವರ್ಗದ ಜನರಿಗೆ ರಕ್ಷಣಾತ್ಮಕ ಕಾನೂನುಗಳನ್ನು ಜಾರಿಗೆ ತರಲು ನಿಮ್ಮ ಪಕ್ಷ ಮತ್ತು ಸಂಸದರು ಬದ್ಧರಾಗಬೇಕು.

3. ಮುಂಬರುವ ಚುನಾವಣೆಯನ್ನು ಪುರುಷ ಮತ್ತು ಮಹಿಳೆಯರ ಮಧ್ಯದ ಅಸಮಾನತೆಯನ್ನು ಹೋಗಲಾಡಿಸುವ ನಮ್ಮ ಹೋರಾಟದ ಒಂದು ಭಾಗವಾಗಿ ನಾವು ನೋಡುತ್ತೇವೆ. ಮತ್ತು ರಾಜಕೀಯ ಪಕ್ಷಗಳಲ್ಲಿ ಈಗಿರುವ "ಮಹಿಳೆಯರ ಸಮಸ್ಯೆಗಳು ಮಹಿಳೆಯರಿಗೆ ಸೇರಿದ್ದು" ಎಂಬ ಧೋರಣೆಯನ್ನು ಬದಲಾಯಿಸಿಕೊಂಡು ಮಹಿಳೆಯರ ಸಮಸ್ಯೆಗಳು ದೇಶದ ಇತರ ಸಮಸ್ಯೆಗಳಷ್ಟೇ ಪ್ರಮುಖವಾದುದೆಂದು ಪರಿಗಣಿಸಿ ಒಟ್ಟಾರೆ ಪರಿಹಾರ ಹುಡುಕುವತ್ತ ಗಂಭೀರ ಪ್ರಯತ್ನಗಳಾಗಬೇಕು.

ಈ ಹಿನ್ನೆಲೆಯಲ್ಲಿ ಈ ಕೆಳಗಿನ ಬೇಡಿಕೆಗಳನ್ನು ನಿಮ್ಮ ಮುಂದಿಡುತ್ತಿದ್ದೇವೆ.

ರಾಜಕೀಯ ಬೇಡಿಕೆಗಳು

1. ದಿನೇಶ್ ಗೋಸ್ವಾಮಿ ಸಮಿತಿಯ ಶಿಫಾರಸಿನಂತೆ ಚುನಾವಣಾ ಸುಧಾರಣೆಗಳಿಗೆ ಬದ್ಧರಾಗಬೇಕು. ಮಹಿಳೆಯರ ಮೇಲಿನ ದೌರ್ಜನ್ಯಗಳು ಒಳಗೊಂಡಂತೆ ಯಾವುದೇ ರೀತಿಯ ಕ್ರಿಮಿನಲ್ ಅಪರಾಧಗಳ ಪಟ್ಟಿಯಲ್ಲಿರುವವರಿಗೆ ಅಭ್ಯರ್ಥಿಯಾಗಲು ಅವಕಾಶ ನೀಡಬಾರದು.
2. ಧರ್ಮವನ್ನು ರಾಜಕೀಯದೊಂದಿಗೆ ಬೆರಸಬಾರದು. ಧಾರ್ಮಿಕ ಚಿನ್ಹೆಗಳನ್ನು ಮತ್ತು ಘೋಷಣೆಯನ್ನು ಚುನಾವಣೆಯ ಸಂದರ್ಭದಲ್ಲಿ ಬಳಸಬಾರದು. ಈ ಕುರಿತು ಕಾನೂನು ತರಬೇಕು. ಅವಶ್ಯಕತೆ ಬಂದರೆ ಸಂವಿಧಾನದಲ್ಲಿ ತಿದ್ದುಪಡಿ ತರಲೂ ಬದ್ಧರಾಗಬೇಕು.
3. ಎರಡಕ್ಕಿಂತ ಹೆಚ್ಚು ಮಕ್ಕಳಿರುವವರಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡಬಾರದೆಂಬ ಸಂವಿಧಾನದ 79ನೇ ತಿದ್ದುಪಡಿ - 1992ನ್ನು ಕೈ ಬಿಡಬೇಕು. ಜಾರಿಗಾಗಿ ಕಾಯುತ್ತಿರುವ ಜನಸಂಖ್ಯಾ ನೀತಿಯಲ್ಲಿ ದೇಶದ ಮಹಿಳಾ ಚಳುವಳಿ ಎತ್ತಿರುವ ಆಕ್ಷೇಪಣೀಯ ಅಂಶಗಳನ್ನು ಕೈಬಿಡಬೇಕು.
4. ದೇಶದ ಜಾತ್ಯಾತೀತ ಸಂವಿಧಾನದ ರಕ್ಷಣೆಗೆ ಬದ್ಧರಾಗಬೇಕು. ಜಾತಿ, ಕೋಮುಗಲಭೆಗಳ ಸಂದರ್ಭದಲ್ಲಿ ದಲಿತ ಆದಿವಾಸಿಗಳ ಮತ್ತು ದೇಶದ ಜನರ ಹಿತರಕ್ಷಣೆಗೆ ಬದ್ಧರಾಗಬೇಕು.
5. ದೇಶದ ಆರ್ಥಿಕ, ರಾಜಕೀಯ ಸ್ವಾವಲಂಬನೆ ಮತ್ತು ಸಾರ್ವಭೌಮತೆಯ ರಕ್ಷಣೆಗೆ ಬದ್ಧರಾಗಿರಬೇಕು.

ಆರ್ಥಿಕ ಬೇಡಿಕೆಗಳು :

1. ಬಡತನ, ನಿರುದ್ಯೋಗ, ಮಹಿಳೆಯರನ್ನು ಮೂಲೆಗುಂಪು ಮಾಡುವಿಕೆ.... ಮುಂತಾಗಿ ದೇಶದ ಸಮಸ್ಯೆಗಳನ್ನು ಹೆಚ್ಚು ಮಾಡುತ್ತಿರುವ ಜಾಗತೀಕರಣ, ಉದಾರೀಕರಣ ನೀತಿಗಳ ಕುರಿತು ಪುನರ್ವಿಮರ್ಶೆಯಾಗಬೇಕು.
2. ಭೂ ಸುಧಾರಣಾಕ್ರಮವನ್ನು ತತ್‌ಕ್ಷಣದಿಂದ ಜಾರಿ ಮಾಡಬೇಕು. ಮಹಿಳೆಯರಿಗೆ ಜಂಟಿ ಭೂ ಒಡೆತನದ ಹಕ್ಕುಗಳನ್ನು ನೀಡಬೇಕು. ಸಮಾನ ಆಸ್ತಿ ಹಕ್ಕು ಮಹಿಳೆಯರಿಗೆ ಸಿಗುವಂತಾಗಬೇಕು. ಜಂಟಿ ಪಟ್ಟಾಗಳನ್ನು ನೀಡಬೇಕು.
3. ಲಿಂಗ ಸಮಾನತೆಯ ಪ್ರಥಮ ಸೋಪಾನ ಸ್ವಾವಲಂಬನೆ. ಈ ಹಿನ್ನೆಲೆಯಲ್ಲಿ ಆಧುನೀಕರಣ, ಯಾಂತ್ರೀಕರಣ, ಗಣಕೀಕರಣಗಳ ಹೆಸರಿನಲ್ಲಿ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸದೇ ಮಹಿಳೆಯರನ್ನು ಕೆಲಸದಿಂದ ತೆಗೆದು ಹಾಕಬಾರದು. ಮಹಿಳೆಯರಲ್ಲಿ ತಾಂತ್ರಿಕ ನೈಪುಣ್ಯತೆಯನ್ನು ಹೆಚ್ಚಿಸುವ ದಲಿತ, ಆದಿವಾಸಿ, ಅಲ್ಪಸಂಖ್ಯಾತ ಮತ್ತು ಇತರ ಹಿಂದುಳಿದ ವರ್ಗದ ಮಹಿಳೆಯರಿಗೆ ಆದ್ಯತೆ ನೀಡುವ, ತರಬೇತಿ ಶಿಬಿರಗಳನ್ನು ನಡೆಸಬೇಕು.
4. ಮಹಿಳೆಯರಿಗೆ ಸ್ವಾವಲಂಬಿಗಳಾಗಲು ಸುಲಭ ಸಾಲ ಸೌಲಭ್ಯಗಳು, ತಾಂತ್ರಿಕ ತರಬೇತಿಗಳು, ಕಾನೂನುದತ್ತ ಹಕ್ಕುಗಳ ಮಾಹಿತಿ, ಮೂಲಭೂತ ಸೌಲಭ್ಯಗಳ ಲಭ್ಯತೆಗೆ ಗಮನ ನೀಡಬೇಕು.
5. ಸಾರ್ವಜನಿಕ ಪಡಿತರ ವಿತರಣಾ ವ್ಯವಸ್ಥೆಯನ್ನು ಬಲಗೊಳಿಸಬೇಕು. ಜನರಿಗೆ ಆಹಾರ ಕೊಡುವ ಮೂಲಭೂತ ಜವಾಬ್ದಾರಿ ಸರ್ಕಾರದ್ದು ಎನ್ನುವುದನ್ನು ಪರಿಗಣಿಸಿ ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯನ್ನು ಸರ್ಕಾರ ತಡೆಗಟ್ಟಲು ಬದ್ಧವಾಗಬೇಕು.

7. ಜನರಿಗೆ ಕುಡಿಯುವ ನೀರು ಒದಗಿಸುವುದನ್ನು ಆದ್ಯ ಕರ್ತವ್ಯವೆಂದು ಪರಿಗಣಿಸಬೇಕು. ಅತ್ಯಂತ ಹೀನಸ್ಥಿತಿಯಲ್ಲಿ ಬದುಕುತ್ತಿರುವ ದಲಿತ, ಹಿಂದುಳಿದ, ಗ್ರಾಮೀಣ ಜನರಿಗೆ ವ್ಯವಸ್ಥೆ ಕಲ್ಪಿಸಲು ಬದ್ಧರಾಗಬೇಕು.
8. ಪ್ರಾಥಮಿಕ ಆರೋಗ್ಯ ರಕ್ಷಣೆ ಸರ್ಕಾರದ ಆದ್ಯ ಕರ್ತವ್ಯವಾಗಬೇಕು. ಮಹಿಳೆಯರ ಆರೋಗ್ಯ ರಕ್ಷಣೆ - ಎಂದರೆ ಕುಟುಂಬ ಯೋಜನೆ ಎಂಬ ಧೋರಣೆ ಬದಲಾಗಬೇಕು. ಆರೋಗ್ಯಕ್ಕೆ ಹಾನಿಕರವಾದ ಗರ್ಭನಿರೋಧಕಗಳನ್ನು ತತ್‌ಕ್ಷಣದಿಂದ ಭಾರತದ ಮಾರುಕಟ್ಟೆಯಿಂದ ನಿಷೇಧಿಸಬೇಕು.
9. ಶಿಶು ರಕ್ಷಣಾ ಸೂತ್ರಗಳು ಜಾರಿಗೆ ಬರಬೇಕು. ಅಂಗನವಾಡಿ ಕಾರ್ಯಕರ್ತರನ್ನು ಸರ್ಕಾರಿ ನೌಕರರೆಂದು ಪರಿಗಣಿಸಬೇಕು. ಬಾಲ ಕಾರ್ಮಿಕ ಪದ್ಧತಿ ನಿಲ್ಲಬೇಕು.
10. ಬಜೆಟ್‌ನ 10%ನ್ನು ಶಿಕ್ಷಣಕ್ಕೆ ಮೀಸಲಿಡುವ ಮೂಲಕ ಹೈಯರ್ ಸೆಕೆಂಡವರೆಗಿನ ಶಿಕ್ಷಣವನ್ನು ಕಡ್ಡಾಯ ಉಚಿತ ಶಿಕ್ಷಣವನ್ನಾಗಿ ಮಾಡುವ ಮೂಲಕ ಸರ್ಕಾರ ಸಂವಿಧಾನಿಕ ಕರ್ತವ್ಯವನ್ನು ಪೂರೈಸಬೇಕು.

ಸಾಮಾಜಿಕ ಮತ್ತು ಕಾನೂನು ಬದ್ಧ ಬೇಡಿಕೆಗಳು :

1. ಎಲ್ಲ ಕೋಮಿನ ಜನರಿಗೆ ಸಮಾನ ಹಕ್ಕುಗಳು : ಸಮಾನ ಕಾನೂನುಗಳು ಜಾರಿಗೆ ಬರುವಂತಾಗಬೇಕು.
2. ಕೌಟುಂಬಿಕ ಹಿಂಸೆಗಳು, ದೈಹಿಕ ಕಿರುಕುಳಗಳನ್ನು ತಡೆಗಟ್ಟಲು, ಮಹಿಳೆಯರು ಮತ್ತು ಮಕ್ಕಳನ್ನು ಬೀದಿಪಾಲು ಮಾಡುವ ಕುಕೃತ್ಯಗಳಿಗೆ ಪೂರ್ಣ ವಿರಾಮ ಹಾಕಲು ಸಾಧ್ಯವಾಗುವಂತೆ ಆಸ್ತಿಯಲ್ಲಿ ಸಮಾನ ಹಕ್ಕು, ವೈವಾಹಿಕ ಆಸ್ತಿಯಲ್ಲಿ ಸಮಪಾಲು, ವಿವಾಹದ ಕಡ್ಡಾಯ ನೊಂದಣಿಗಳು ಜಾರಿಗೆ ಬರಬೇಕು.
3. ಮಹಿಳೆಯರನ್ನು ಲೈಂಗಿಕವಾಗಿ ಶೋಷಿಸುವ ದೇವದಾಸಿ ಪದ್ಧತಿಯನ್ನು ನಿಷೇಧಿಸಬೇಕು.
4. ಮಹಿಳೆಯರನ್ನು ಗ್ರಾಹಕ ವಸ್ತುವಾಗಿಸಲು ನೆರವಾಗುತ್ತಿರುವ ಅಶ್ಲೀಲ ಜಾಹಿರಾತು ಸಂಸ್ಕೃತಿಯನ್ನು ಬೆಳೆಸುತ್ತಿರುವ ಮಾಧ್ಯಮಗಳ ಮೇಲೆ ನಿಯಂತ್ರಣ ತರಲು ಮಾಧ್ಯಮ ನೀತಿಯೊಂದನ್ನು ಜಾರಿಗೆ ತರಬೇಕು. ಮಹಿಳೆಯರು ಸ್ವಂತ ವ್ಯಕ್ತಿತ್ವವನ್ನು ಹೊಂದಿದ ಗೌರವಯುತ ವ್ಯಕ್ತಿಗಳಾಗಿ ಬಾಳಲು ಸಾಧ್ಯವಾಗುವ ವಾತಾವರಣ ನಿರ್ಮಾಣವಾಗಬೇಕು.

ಈ ಮೇಲಿನ ಕನಿಷ್ಠ ಬೇಡಿಕೆಗಳನ್ನು ತಮ್ಮ ಮುಂದಿಡುತ್ತಿದ್ದೇವೆ. ಇವು ಇಡೀ ದೇಶದಾದ್ಯಂತ ನಡೆದ ಹಲವು ಚಟುವಟಿಕೆಗಳ, ಹೋರಾಟಗಳ ಭಾಗವಾಗಿ ಬಂದ ಅಭಿಪ್ರಾಯಗಳಾಗಿದ್ದು, ಜನಸಂಖ್ಯೆಯ ಅರ್ಧ ಭಾಗದ (1/2 ಭಾಗದ) ಸಾಂವಿಧಾನಿಕ ಬೇಡಿಕೆಗಳಾಗಿವೆ. ಎಲ್ಲ ರಾಜಕೀಯ ಪಕ್ಷಗಳೂ ಮಹಿಳೆಯರ ಸಮಸ್ಯೆಗಳ ಕುರಿತ ರಾಜಕೀಯ ಬದ್ಧತೆಯನ್ನು ಪ್ರಣಾಳಿಕೆಗಳಲ್ಲಿ ಪ್ರಕಟಿಸಬೇಕು ಮತ್ತು ತಮ್ಮ ಬದ್ಧತೆಗಳನ್ನು ನಿರ್ದಿಷ್ಟ ನೀತಿ, ಯೋಜನೆಗಳಾಗಿ ಜಾರಿಗೆ ತರಲು ಪ್ರಜ್ಞಾಪೂರ್ವಕ ಪ್ರಯತ್ನ ನಡೆಸಬೇಕೆಂಬುದು ದೇಶದ ಮಹಿಳಾ ಸಮೂಹದ ಬೇಡಿಕೆಗಳಾಗಿವೆ.

ಜನವಾದಿ ಮಹಿಳಾ ಸಂಘಟನೆ, ಸಂಯುಕ್ತ ಮಹಿಳಾ ವೇದಿಕೆ, ಸುಮಂಗಲೀ ಸೇವಾಶ್ರಮ, ದುಡಿಯುವ ಮಹಿಳೆಯರ ಸಮನ್ವಯ ಸಮಿತಿ, ಮಹಿಳಾ ದಕ್ಷತಾ ಸಮಿತಿ, ಅಖಿಲ ಭಾರತ ಮಹಿಳಾ ಕಾನ್‌ಫರೆನ್ಸ್, ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ವೈ. ಡಬ್ಲ್ಯು. ಸಿ. ಎ.

ನಿಮ್ಮ ಆತ್ಮಸಾಕ್ಷಿಯ ಮತವನ್ನು ಉತ್ತಮ ಅಭ್ಯರ್ಥಿಗೆ ನೀಡಿ

ಭಾರತೀಯ ಪತಿತ ಉದ್ಧಾರ್ ಸಭಾ ಎಂಬ Sex worker ಸಂಘಟನೆಯು ತಮ್ಮ ಮನಸ್ಸಾಕ್ಷಿಯ ಮತವನ್ನು ಉತ್ತಮ ಅಭ್ಯರ್ಥಿಗೆ ನೀಡಬೇಕೆಂದು ಕರೆಕೊಟ್ಟಿದೆ. ಆ ಮೂಲಕ ಉತ್ತಮ ಆರೋಗ್ಯ, ಶಿಕ್ಷಣ ಸೌಲಭ್ಯಗಳು ತಮಗೂ ತಮ್ಮ ಮಕ್ಕಳಿಗೂ ಸಿಗಲೂ ಸಹಾಯವಾಗಬಹುದೆಂದು ಹೇಳಿದೆ. ಸಂಘಟನೆಯ ಅಧ್ಯಕ್ಷರು ಆರೋಗ್ಯ ಸೌಲಭ್ಯದ ಅವಶ್ಯಕತೆಯಿರುವ ಶೇ. 90ರಷ್ಟು ಮಹಿಳೆಯರನ್ನು ವೇಶ್ಯೆಯರೆಂಬ ಕಾರಣಕ್ಕಾಗಿ ಸರ್ಕಾರಿ ಆಸ್ಪತ್ರೆಗಳಿಂದ ಹೊರದೂಡಲಾಗುತ್ತದೆ. 5.1 ಮಿಲಿಯನ್ ವೇಶ್ಯೆಯರ ಮಕ್ಕಳಲ್ಲಿ ಶೇ. 2ರಷ್ಟು ಮಕ್ಕಳು ಮಾತ್ರ ಶಿಕ್ಷಣದ ಸೌಲಭ್ಯ ಪಡೆದಿದ್ದಾರೆ. 4ರಿಂದ 14 ವಯಸ್ಸಿನವರೆಗೆ ಎಲ್ಲಾ ಮಕ್ಕಳಿಗೂ ಉಚಿತ, ಕಡ್ಡಾಯ ಶಿಕ್ಷಣ ದೊರೆಯಬೇಕೆಂಬ ಸುಪ್ರೀಂ ಕೋರ್ಟ್ ತೀರ್ಮಾನವನ್ನು ಸರ್ಕಾರ ಜಾರಿಗೊಳಿಸಬೇಕು.

ನಮ್ಮ ಜನರ ದುಡಿಮೆಯ ಬಹುಪಾಲು ಖಾಸಗಿ ವೈದ್ಯರಿಗೆ ಹೋಗುತ್ತಿದೆ. ಸಂಚಾರಿ ಆಸ್ಪತ್ರೆಗಳ ವ್ಯವಸ್ಥೆಯನ್ನು ನಾವಿರುವ ಜಾಗಗಳಲ್ಲಿ ಒದಗಿಸಿದರೆ ಖಾಸಗಿ ವೈದ್ಯರಿಗೆ ಹೋಗುವ ಹಣದ ಉಳಿತಾಯವಾಗುತ್ತದೆ.

ಒಟ್ಟು 2.3 ಮಿಲಿಯನ್‌ನಷ್ಟಿರುವ ವೇಶ್ಯೆಯರಲ್ಲಿ ಶೇ. 25ರಷ್ಟು ಮತದಾರರಾಗಿ ನೊಂದಾಯಿಸಲ್ಪಟ್ಟಿದ್ದಾರೆ. ಉಳಿದವರಿಗೆ ಸರ್ಕಾರವು ಗುರುತಿನ ಚೀಟಿ ನೀಡಬೇಕೆಂದು ಸಂಘಟನೆಯ ಅಧ್ಯಕ್ಷರು ಹೇಳಿದ್ದಾರೆ.

ದನಿನ್ ಚಮ್ಡ್ದ್ ಮೆಟ್ ಮೆಟ್ಕಂಡ್ರೆ ಗ್ಯಾಮಾತೆ ತುಳ್ದಂಗಲ್ವಾ?

ಸರಸ್ವತಿ ದು.

ತಲೆಮ್ಯಾಲೆ ಒರೆ ಒತ್ಕಂಡ್ ಮನ್ಗೆ ಬಂದ್ ಸಣ್ ತಿಮ್ಮಿ, ಬಾಗ್ಲಾಗ್ ಯಾರೊ ಕುಂತಿರಾ ಅಂಗ್ ಅನ್ಸಿ ಕಣ್ ಕಿರ್‍ದು ನೋಡಿಳು ನೋಡಿ-

ಅಗಳೆ, ಸರೋಜಕ್ಕ ಬಂದ್ ಸ್ಯಾನೆ ಒತ್ತಾಯ್ತ್ ಏನೆ? ತ್ಯಾಟ್‌ದಾಗ್ ಬಿದ್ದಿದ್ ಕುರಂಬಳೆನೆಲ್ಲ ಒಟ್ ಮಾಡ್ಕಂಡ್ ಬರೋತ್‌ಗೆ ಒತ್ತಾಯ್ತ್ ಕಣೆ ಅಂತ ಕುರಂಬಳೆನೆಲ್ಲ ಕೊಟ್ಗೆಗೆಸ್ದು ಬಂದ್ಲು. ತಂಬ್ಗೇಲಿ ನೀರ್ ತತ್ತಿನಿ ತಡಿ, ಎಲ್ಡ್ ಬಾಳೆಣ್ಣವೆ ತಿನ್ನು ಬಿರಿನಡ್ಗೆ ಮಾಡ್ತಿನಿ ಅಂತ ಸೊಂಟ್‌ದಾಗಿದ್ದ ಬಿಗ್‌ದೆಸ್ಲ್ ತೆಗ್ದು ಬೀಗ ತಗುದ್ಲು.

ಸರೋಜಕ್ಕ : ಒಂದ್ ಗಳ್ಗೆ ಕುಂತ್ಕಂಡ್ ಸುಧಾರ್‍ಸ್ಕಳೆ, ನಾನಾಗ್ಲೆ ನಂಜಕ್ಕನ್ ಮನೇಲುಂಡ್ ಬಂದಿದೀನಿ. ಅಡ್ಗೆ ಆಮೇಲ್ ಮಾಡಿವಂತೆ.

ಸಣ್‌ತಿಮ್ಮಿ : ಅಂಗೊ ತಡಿ ಕಾಪಿನಾರು ಕಾಸ್ತೀನಿ ಬಾವಳೀಕೆ.

(ಸರೋಜಕ್ಕ ಅವಳಿಂದೆನೆ ಮನೆ ಒಳಿಕೋದ್ಲು, ಅಡ್ಗೆ ಕೋಣೆಲಿ ಮಣೆ ಎಳ್ಕಂಡ್ ಕುಂತ್ಕಂಡ್ಲು. ಸಣ್‌ತಿಮ್ಮಿ ಸೌದೆ ಒಲೆ ಒಳಿಕ್ಕಿಕ್ಕಿ, ತೆಂಗಿನ್‌ಗರಿ ತರ್‍ದು ಕಡ್ಡಿಲಗೀರಿ ವೊಚ್ಚಿ ಒಲೆ ವಳಿಕ್ಕಿಕ್ಕಿ ಊರಿ ವತ್ಸಿಲು ಕಾಪಿಗ್ ನೀರಿಕ್ಕಿಳು. ಸರೋಜಕ್ಕನ್‌ಕಡಿಕ್ ತಿರ್‍ಗಿ)

ಸಣ್ ತಿಮ್ಮಿ : ಇದ್ಯಾಕೆ ಇಂಗ್ ವಣಿಕಂಡಿದಿಯಾ? ಒಂದ್ ತಿಂಗ್ಳ್‌ಗಂಟು ಇರು. ದಿನಾಲೂ ಬಿಸ್‌ಬಿಸೆ ಇಟ್ಟು, ಬೆರ್‍ಕೆಸೊಪ್ಪುನ್ ಸಾರು ಉಂಡ್ಕಂಡು, ನಾಟಿ ಮಟ್ಟೆ ತಿಂದ್ರೆ ಗೆಲ್‌ವಾಗ್ತಿಯಾ.

ಸರೋಜಕ್ಕ : ಇಲ್ಕಣೆ ರಜ ಸಿಗಕ್ಕಿಲ್ಲ, ನಾಕೈದ್‌ದಿಸ್ಕ ಬಂದೆ.

ಸಣ್‌ತಿಮ್ಮಿ : ಬರಾದ್ ಬತ್ತೀಯ ಸ್ಯಾನೆ ದಿನ್ಕೆ ಬರ್‌ಬರ್‍ದ್ವಾ, ತಗಾ ಕಾಪಿ ಕುಡ್ಕ, ನಿನ್ನ ಇಂದ್ಕೆ ಮಡ್ಕೆಲೆಲ್ಡೊ ಎಲ್ಡ್ ಕಳ್ಳೆಪುರಿದ್‌ವು ತಿನ್ನು.

(ಕಾಫಿ ಕುಡಿತಲೆ ಅಂಗೆ ಸಾರಿಗಿಕ್ಕಿ, ಇನ್ನೊಂದೊಲೆನು ಅಚ್ಚಿ ಇಟ್‌ಗೆ ಎಸ್ರಿಟ್ಟು, ಊರಿ ಅಂಗೆ ಇಂದ್ಕೆ ತಳ್ಳಿ ಕೊಡೊಲೆಮ್ಯಾಲೆ ನೀರ್ ಕಾಯಕಿಟ್ಲು ಸಣ್‌ತಿಮ್ಮಿ. ಅಂಗೆ ಮಾತ್ ಮುಂದ್‌ವರಿತು).

ಸಣ್‌ತಿಮ್ಮಿ : ಅದೇನ್ ಕೈಯಾಗ್ ಎಂಥದೊ ಪುಸ್ತಕ ಮಡಿಕಂಡಿದೀಯಾ

ಸರೋಜಕ್ಕ : ಇದು ಬಿ.ಜೆ.ಪಿ. ಮ್ಯಾನಿಫೆಸ್ಟೊ ಕಣೆ, ಅಂದ್ರೆ ಚುನಾವಣೆ ಪ್ರಣಾಳಿಕೆ.

ಸಣ್‌ತಿಮ್ಮಿ : ಎಂಥದದು ಬಿಡ್ಸೇಳೆ.

ಸರೋಜಕ್ಕ : ಅಂದ್ರೆ ನಮ್ಮುನ್ ಗೆಲ್ಸಿರೆ ಇಂಥಿಂಥ ಕೆಲ್ಸ ಮಾಡ್ತ್‌ತೀವಿ ಅಂಥ ಬರ್‍ಕಂಡವ್ರೆ ಕಣೆ ಬಿ.ಜೆ.ಪಿರು.

ಸಣ್‌ತಿಮ್ಮಿ : ಒಹೋ, ಎಲೆಕ್ಸನ್ನು ಅನ್ನು ಅದ್ ಬಿಟ್ಟು ಎಂತದೋ ಫೆಸ್ಟು ಆಲ್‌ಕೆ ಅಂತಿಯಾ, ಏನಂತ ಬರ್‍ಕಂಡವ್ರೆ ಆ ಕುಂಕುಮದ್ ಬೊಟ್‌ನೋರು?

ಸರೋಜಕ್ಕ : ಮದ್ಲಿಗೆ ರಾಮ್‌ಮಂದ್ರ ಕಟ್‌ತರಂತ್ ಕಣೆ, ಅಯೋಧ್ಯೇಲಿ.

ಸಣ್ ತಿಮ್ಮಿ : ಅವರ್ ಮಕ್ ನಾಯ್ ತಿನ್ನ, ಇವ್‌ರು ಕಟ್ಟಾ ಗುಡ್ಗೆ ರಾಮೇನ್‌ಳ್ತ ಕುಂತಿದ್ನ? ಅದುವೆ ಏಸೊ ವರ್ಸದ್ ಮಸೀದಿ ಕೆಡ್ವಿ ಗುಡಿ ಕಟ್ಟು ಅಂದಿದ್ನಾ? ಒಟ್ ಮಾಡ್ದ್ ಇಟ್ಗೆನೆಲ್ಲ ಕೊಟ್ಟಿದ್ರೆ ಅಟ್ಟಲಿ ಏಸ್ ಮನೆ ಆಗಿರಾವು.

ಸರೋಜಕ್ಕ : ಗುಡಿ ಕಟ್ಟಿದ್ಮೊಂದೆ ಅಲ್ಕಣೇ, ದನ ಕುಯ್ಯಾದ್ ನಿಲ್ಸತರಂತೆ, ಕೆಲ್ಸ ಮಾಡಾ ಎಂಗ್‌ಸ್ರಂಗೆ ಆರ್ಡರ್ ಮನೇಗ್ ತಾಂಡೋಗಿ ಮಾಡ ಅಂತ ಕೆಲ್ಸ ಕೊಡ್ತರಂತೆ, ಮನೇಲಿ ಅಡ್ಗೆ ಕೆಲ್ಸ, ಬ್ಯಾರೆ ಕೆಲ್ಸ ಮಾಡ್ಕಂಡು ಮಕ್ಳುನ್ನು ನೋಡ್ಕಂಡು ಆಫೀಸ್ ಕೆಲ್ಸಾನೂ ಮಾಡ್‌ಬೋದಂತೆ.

ಸಣ್ ತಿಮ್ಮಿ : ಉತ್ತು ಬಿತ್ತು ಕಳೆಕೀಳಾ ಎಂಗ್‌ಸ್ರು ಯಾವ್‌ಬದ್ಕು ಮನ್ಗೆ ತಂದಾರೆ ಮತೀಗಾ ದನ ಕುಯ್‌ಬಾರ್‍ದು ಅಂತ ಪುಸ್ತಕ್ದಾಗೂ ಬರ್‍ದವ್ರಾ? ಒಂದಾಳೆ ಇಡ್ಕಂಡು ಇಲ್ಲೂಗ್ವೆ ಬಂದ್ಬಿದ್ರು ಆ ಕುಂಕುಮ್ದ್ದ್ ಉಡ್ರು.

ಸರೋಜಕ್ಕ : ಏನ್ ಏಳ್ಕಂಡ ಬಂದ್ಬಿದ್ರೆ?

ಸಣ್‌ತಿಮ್ಮಿ : ತಿಮ್ಮಕ್ಕೊ, ದನ ಗೋಮಾತೆ, ಉಳ್‌ಮೆಗೆ, ಗೊಬ್ರ್‌ಕೆ, ಏನೇನ್ನೆಕೆಲ್ಲ ಪ್ರಯೋಜ್ನಕ್ ಬತ್ತೈತೆ ಅಂತಾವ್ನ ಈ ಸಾಬ್ರು ಕುಯ್ಕಂಡ್ ತಿಂತರೆ ಅದ್ನ ನಿಲ್ಸ್‌ಬೇಕು. ಅದ್ಕೆ ದನ ಕುಯ್‌ಬಾರ್‍ದು ಅಂತ ಬರ್‍ದಿರೊ ಈ ಆಳೆಗೆ ಎಬ್ಬೆಟ್ಬೊತ್ತು ಅಂದ್ರು.

ಸರೋಜಕ್ಕ : ಔದಾ, ಅದ್ಕೆ ನೀನೆನಂದೆ?

ಸಣ್‌ತಿಮ್ಮಿ : ಎಬ್ಬೆಟ್ಟಾಕ್ರಪ್ಪ, ನಂಗೂವೆ ಸೈನಾಕಾಕ್ ಬತ್ತದೆ, ಆಳೆನಾಗ್ ಮಾತ್ರ ಆಕಾಕಿಲ್ಲ ಅಂದೆ, ಅದ್ಕೆ ಯಾಕ್ಕಕ್ಕೊ ಅಂತ ಕೇಳಿವು. ಏಯ್ ತಲಳ್ಬೆ ಮುಂಡೆವ ಬದ್‌ಕ್ ನೋಡೊಗ್ರೊ. ದನಾವ ನೆನ್ನ ಮನ್ನಿಂದಾವ ಕುಯ್‌ತಿರಾದು? ಅಲ್ದೆಯಾ ಸಾಬ್ರೊಬ್ರೆಯಾ ದನಾ ತಿನ್ನಾದು? ದನಿನಿಂದ ಏನೇನ್ ಪ್ರಯೋಜ್ನ ಅಂತ ನಂಗೆ ಏಳಾಕ್ ಬತ್ತೀರಾ, ಯಾವತ್ತಾದ್ರುವೆ ಕೈಯಾಗ್ ಸೆಗ್ಣಿ ಎತ್ತಿದಿರಾ? ಸೆಗ್ಣಿ ಮಕ್ರಿ ತಲೆ ಮ್ಯಾಲೊತ್‌ಕಂಡೋಗಿ ತಿಪ್ಗೆ ಆಕಿದಿರಾ? ದನ ಸತ್ರೆ ವತ್ತಾಕಕ್ಕೆ ಚಮ್ಮ ಸುಲ್ಸಕ್ಕೆ ಅಟ್ಟಿ ಜನ ಕರಿತಿರಾ, ಚಮ್ಮ ಸುಲ್ದ್ ಮೆಟ್ ಮಾಡಿರೆ ಮೆಟ್ಕಂಡು ತಿರ್‍ಗ್‌ತಿರಾ ಗೋಮಾತೆ ತುಳ್ದಂಗಲ್ವಾ? ಅಂತ ಗದ್ರಿ ಕಳಿಸ್ದೆ.

ಸರೋಜಕ್ಕ : ಓದು, ಬರಾ ಬರೊ ಜನ್ಕು ನಿನ್ ಬುದ್ದಿಲ್ಲ ಕಣೆ you are really secular.

ಸಣ್‌ತಿಮ್ಮಿ : ಅದೇನೆ ಇಂಗ್ಲಿಸ್‌ನಾಗಂತಿಯಾ? ನಂಗ್ ತಿಳ್ಯಾಕಿಲ್ಲ.

ಸರೋಜಕ್ಕ : ಅಂದ್ರೆ ನೀನು ಮನ್ಸುರ್‌ನಾ ಮನ್ಸರಂಗೆ ನೋಡ್ತಿಯಾ, ಜಾತಿ ಪಾತಿ ನೋಡಕಿಲ್ಲ ಅಂತಾವ.

ಸಣ್ ತಿಮ್ಮಿ : ಊ ಕಣೆ, ಜಗ್ಳ ಜೂಟಿ ಮಾಡೀರೇನ್ ಬಂತು? ಒಬ್ರಿಗೊಬ್ರು ಆಧಾರ್‌ವಾಗ್ ಬದ್ಕ್ ಮಾಡಿರೊಂದ್ ಚೆಂದ್‌ವಪ್ಪ. ಸಾಬ್ರು ನಂ ತಾತುನ್ ಕಾಲ್ದ್‌ದಿಂದ್ಲುವೆ ಊರಾಗವ್ರೆ. ಊರಾಗೆಲ್ರುಗುವೆ ಜಾಗೀಟೋಲ್‌ಕೊಡೋಳೆ ಆಬೂಬಮ್ಮ.

ಸರೋಜಕ್ಕ : ಬೂಬಮ್ಮ ಎಂಗವ್‌ಳೆ?

ಸಣ್‌ತಿಮ್ಮಿ : ಚೆಂದಗವ್‌ಳೆ. ಪಾಪ ಯಾವಗೋದ್ರುವೆ ಬಾ ತಿಮ್ಮಕ್ಕ ಅಂತ ಕರ್‍ದು ಟೀ ಕಾಯ್ಸ್‌ಕೊಡ್ತಳೆ ಒಳ್ಳೆ ಎಂಗ್‌ಸು. ಪೂಜಾರಪ್ಪನ್ ಮನೆರೂ, ನಮ್ಮನ್ನೆನಾರು ಒಳಿಕಿ ಬಿಟ್ಕುಂಡಾರಾ? ಅಟ್ಟಿ ಉಡ್ರುನ್ ಕಂಡ್ರೆ ಅಚಅಚ ಅಂತ ನಾಯೊಡಿಸ್‌ದಂಗೊಡಿಸ್ತರೆ.

ಸರೋಜಕ್ಕ : ಗೊತ್ ತಗಾ, ಸರಿ ಬೂಬಮ್ಮನ್ ಇರೆ ಉಡ್ಗಿ ಏನ್ ಮಾಡುತ್ತೆ?

ಸಣ್ ತಿಮ್ಮಿ : ಮದ್‌ವಾಗಿ ಆಗ್ಲೆ ಒಂದ್ ಮಗ ಕಣೆ. ನಮ್ ಅಕ್ಕರೆ ದಾಸಯ್ಯನ್ ಮಗ ಯಂಕ್ಟನ್ ಜೊತೆ ಒಡೋಗ್ ಮದ್ವೆ ಮಾಡ್ಕಂಡ್ಲು.

ಸರೋಜಕ್ಕ : ಔದಾ! ಪರ್‍ವಾಗಿಲ್ ಕಣೆ ಯಂಕ್ಟ. ಗಲಾಟೇನೂ ಆಗ್ಲಿಲ್ವಾ?

ಸಣ್ ತಿಮ್ಮಿ : ಬಲ್ಯೆನಾತಿ ಕಣೆ ಅವ್ನು ಆ ಉಡ್ಗಿ ಬಿರ್‍ಯಾಣಿ ಪರ್‍ಯಾಣಿ ರುಚ್‌ಯಾಗ್ ಮಾಡಾದು. ಅದುರ್ ರುಚ್ಗೆ ಇಂದ್‌ಬಿದ್ದು ಒಡೋಗ್ ಮದ್ವೆ ಮಾಡ್ಕಂಡ. ಎಲ್ದ್ ದಿನಾ ಮಾತಿಗ್ ಮಾತ್ ನಡ್ದು ಸುಮ್ನಾದ್ರು ಎಲ್ದ್ ಮನೇರೂ. ತುಮ್‌ಕೂರಾಗೆ ಕೆಲ್ಸ್‌ದಾಗವ್ನೆ ಯಂಕ್ಟ. ಚೆಂದಾಗವ್ರೆ, ಯಾವ್ದೊಮದಿವ್‌ಗೋದಾಗ ಮನಿಗ್ ಕರ್‍ಕಂಡೋಗಿದ್ದ. ಆ ಉಡ್ಗಿನೂ ಬಲ್ ಬಾವಣ್ಕೆ. ಅಡ್ಗೆ ಮಾಡ್ಸಿ ಉಣ್ಯಾಕ್ಕಿಕ್ಸಿ ಕಳಿಸ್ದಾ. ಮಗವಳ್ಳೆ ಚೆಂದಾಗದೆ, ಎಂಗೊ ಚೆಂದಾಗ್ ಬದುಕ್ಕಳ್ಳಿ ಬಿಡು.

ಸರೋಜಕ್ಕ : ಎಲೆಕ್ಸನ್ನ ಬಿಸಿ ಎಂಗದೆ ಇಲ್ಲಿ? ಅಟ್ಟಿ ಉಡ್ರು ಏನೇಳ್ತರೆ?

ಸಣ್‌ತಿಮ್ಮಿ : ಅಟ್ರ ಉಡ್ರು ಬಂದು ತಿಮ್ಮಕ್ಕ ಯಾಂಗಾರು ಮಾಡಿ ಬಿಜೆಪಿಯಾ ಸೋಲಿಸ್‌ಬೇಕು, ಅದ್ಕೆ ಕಾಂಗ್ರೇಸ್‌ಗಾದ್ರು ಸರ್ಕೆಯು ಒಟಾಕು, ದೇವ್‌ಸ್ಥಾನ್‌ಕಾದ್ರು ಬಿಡ್ಸವ್ರೆ ನಮ್ಮುನ್ನ ಅಂದ್‌ವು.

ಸರೋಜಕ್ಕ : ನೀನೆನಂದೆ?

ಸಣ್ ತಿಮ್ಮಿ : ಅನ್ನದೇನ್ ಬಂತೆ? ಇಟ್ ವರ್ಸ ಆಳವ್ರಲ್ಲ ಏನ್ ಮಾಡೋರೆ? ಕಾಂಗ್ರೇಸ್‌ನಾರು. ಎಶ್ಟ್ ಉಡ್ರು ಬದ್‌ಕಿಲ್ದೆ ಕೈಚೆಲ್ಕಂಡ್ ಕುಂತವ್ರೆ. ಒದ್ರೆ ಆ ಸಿಮಿಟ್ ಪ್ಯಾಟ್ರಿಗೆ ಕೂಲ್ಗ್‌ಗೋಗ್ ಬೇಕು. ಅಲ್ಲಿ ಧೂಳು ಕುಡ್ದು ಎಲ್ರೂಗೂವೆ ಒಟ್ಟೆ ಬೆನ್‌ಗೂಗ್ ಸೇರ್ಕಂಡದೆ. ಕೆಲ್ಸ ಕೊಡ್ತೀವಿ ಅಂತವ ಕಾಂಗ್ರೆಸೋರ್ ಯಂತದೊ ರೋಜ್‌ಗಾರಿ ಅಂತ ಕರ್‌ದ್ರು. ರೋಡ್ ಮಾಡಾಕೆ ಮಣ್ ಕೆತ್ತಿ ಅಂತವ. ಅದುವೆ ಕೂಲಿ ಕೆಲ್ಸವೆಯಾ. ಮೂರ್ ತಿಂಗ್ಳಾದ್ ಮ್ಯಾಕೆ ಕೆತ್ತಿದ್ ಮಣ್ ತಿನ್ಕಂಳಿ ಅಂತ ಒದ್ರು, ಅದ್‌ಕಿಂತವಾ ಪ್ಯಾಟ್ರಿನಾದ್ರು ವಾಸಿ ಒದೋಟ್ ದಿನ ಕೂಲಿನಾರು ಸಿಗತ್ತೈತೆ. ಇಗ್ ಇನ್ಯಾವ್ದು ನಡ್ಯಾಕಿಲ್ಲ ಅಂತವಾ ಆ ಎಂಗ್ಸನ ಮುಂದ್‌ಕ್ಕಿಡ್ಕಂಡ್ ಬಂದವೆ. ಅಲ್ಕಣೆ ಆ ಸೋಣಿಗಾಂಧಿ ಉಡ್ರು ಬೆಳ್ದ್ ಆಗ್ನೆ ಕೈಗ್ ಬಂದವಲ್ವಾ?

ಸರೋಜಕ್ಕ : ಆಗ್ನೆ ಉಡ್ಗಿಗೆ ಮದ್‌ವಾಗೈತ್ ಕಣೆ, ಅದ್ಸರಿ ದೇವಸ್ಥಾನಕ್ಕೆ ನಮ್ಮುನ್ ಬಿಡ್ತರೆ ಅಂದಲ್ಲ, ಒಯ್‌ತರೇನೆ ಅಟ್ಟಿ ಜನಾ?

ಸಣ್ ತಿಮ್ಮಿ : ಅಯ್ಯೋ ಗುಡಿ ವಳೀಕೆ ಒಗ್‌ಬೋದು ಎಲ್ರೂವೆ ಅಂತವ ಆಜ್ಞೆ ವಂಡ್ಸಿರು. ಇನ್ನೂವರ್‍ಗ್ಗೆ ವಳಿಕೋಗಾಕೆ ಎದ್ರಂಕಂತರೆ ಜನ. ನಮ್ಮ ಕಿಟ್ಟಯ್ಯನಂತುವೆ 'ಯವ್ವ ನಾ ಕೆಟ್ಟೆ' ವಳಿಕೋಗಾದುಂಟಾ? ತಾಯಿ ಕಣ್‌ಗೆ ಮಳೆ ಉಯ್ತ್ತಳೆ ಅಷ್ಟೆಯಾ' ಅಂತನೆ.

ಸರೋಜಕ್ಕ : ನೀನೋಗಿದ್ದಾ?

ಸಣ್ ತಿಮ್ಮಿ : ಬಿಟ್ಟೇನಾ, ಮೈ ತೊಳ್ಕಂಡು ಕಡ್ಡಿ ಕರ್ಪೂರ, ಕಾಯಿ ತಾಂಡು ಒಗಿದ್ದೆ. ಅಯ್ನೋರು ದುರ್‌ದುರ್‍ನೆ ನೋಡಿರು. ಒಸಿ ಅಣ್‌ಕಾಯ್ ಮಾಡ್‌ಕೊಡ್ ಸಾಮಿ ಅಂದೆ. ಸೆಟ್ದ್ ಕಂಡೆ ಮಾಡ್‌ಕೊಟ್ಟ. ನಂಗೆನಾಗ್‌ಬೇಕು ಆ ತಾಯಿ ನೋಡಿ ಇಟೊರ್ಸುಕ್ ನಿನ್ನ ನೋಡಾ ಪುಣ್ಯಾವ್ ಸಿಗ್ತು ನೋಡ್‌ತಾಯೆ ಅಂತ ಕೈಮುಗ್ದೆ. ವನ್ನಮ್ಮ ಅಂದ್ರ ವನ್ನಮ್ಮನೇ ಕಣೆ ನೋಡಾಕೆಲ್ಡ್ ಕಣ್ ಸಾಲ್ದು. ಇಗ್ಲೂವೆ ನೀರುಯ್ಕಂಡ್ ದಿನ ಒಗಿ ಕೈ ಮುಗಿತಿನಿ. ಬಾಡು ಪಾಡು ತಿಂದ್ ದಿನ ಒಗಾಕಿಲ್ಲ.

ಸರೋಜಕ್ಕ : ಇನ್ಯಾರ್ ಬಂದಿದ್ರ ಓಟ್ ಕೇಳಾಕೆ?

ಸಣ್ ತಿಮ್ಮಿ : ಆಗಡ್‌ದೋವು, ಸಿಮಿಟ್ ಪ್ಯಾಟ್ರಿನಾಗೆ ಕೆಂಪ್ ಬಾವ್‌ಟಾ ಇಡ್ಕಂಡ್ ಕೂಗ್ತವಲ್ಲೆ ಅವುಬಂದಿದ್ದೊ. ಅವು ನಮ್ಮಟ್ಟ ಉಡ್ರಂಗೆ ಅನ್ನ ನೀರ್ ಕಾಣ್ದೆ ಎಸೊ ದಿನಾದಂಗೆ ಒಣಕಂಡವೆ,

ಸರೋಜಕ್ಕ : ಅವ್‌ರೇನ್ ಏಳಿರೆ?

ಸಣ್ ತಿಮ್ಮಿ : ಮನ್ ಮನ್ಸು ಬರ್‍ಲಿಲ್ಲ. ಎಲಾರ್‌ನುವೆ ಅಳ್ಳಿ ಮರ್‍ದ್ ಕೆಳ್ಗೆ ಕರ್‍ಸಿ ಮಾತಾಡಿರು. 'ದುಡ್ಯೊ ಜನ್ಕೆ ಕೆಲ್ಸ ಬೇಕು, ದುಡ್ಯಾಕ್ ತಕ್ಕಾಗಿ ಸಂಬ್ಳ ಬೇಕು. ದೇವ್ರು, ಧರ್ಮ ಎಲ್ಲ ಮನಸ್ರು ಮನುಸ್ರೊಂದ್‌ಗೆ ಜಗ್ಳ ತಂದಿಕ್‌ತ್ತದೆ. ಅವುನ್ನೆಲ್ಲ ಬುಟ್ಟು ದುಡ್‌ಮೆಗಾರ್‍ರೆಲ್ಲ ಒಂದಾಗಿ ಸರ್ಕಾರ ಮಾಡ್ಬೇಕು ಆಗ್ನೆ ಎಲ್ಲ ಸರೋತದೆ ಅದ್ಕೆ ಕೆಂಪ್‌ಬಾವ್ಟ್‌ದೋರ್‌ಗೆ ಒಟಾಕಿ ಅಂದ್ರು.

ಸರೋಜಕ್ಕ : (ಮಾರ್ಕಿಸ್ಟ್‌ರ ಬಗ್ಗೆ ತಿಮ್ಮಿ ಅಭಿಪ್ರಾಯ ತಿಳ್ಕಲೊ ಕುತೂಹಲದಿಂದ) ನಿಂಗೇನ್ ಅನ್‌ಸುತ್ತೆ ಅವರೇಳಿದ್ರ ಬಗ್ಗೆ.

ಸಣ್‌ತಿಮ್ಮಿ : ಇಗನ್ಸದೇನು, ಆಗ್ ಅನ್ಸಿದ್ದಾ ಅವ್‌ರಿಗೆ ಏಳ್ದೆ.

ಸರೋಜಕ್ಕ : ಏನಂತವಾ?

ಸಣ್ ತಿಮ್ಮಿ : ಯಪ್ಪ ನೀವೇಳಾ ಮಾತು ದಿಟ. ದುಡ್ಯ ಜನ್ಕ ಕೆಲ್ಸ ಬೇಕು, ತರ್‌ನಾಗೆ ಒಟ್ಗೆ ಬಟ್ಗೆ ಇರ್‍ಬೇಕು. ನಮ್ಮಟ್ಟೀಲಿ ಕೆಲ್ಸವಿದ್ದೆ ಉಡ್ರು ಅಳಾಗೋಗಿರಾದು ದೇವ್ರಿಂದಲ್ಲ ಕಣ್‌ರಪ್ಪ, ಆ ಪರಮಾತ್ಮ ಎಲ್ಲರಣೆಲೂ ಅನ್ನ ನೀರ್‌ಬರ್‍ದಿರ್ ತಾನೆ, ಪಾತುಕ್ರು

ಕಿತ್ಕಂತರೆ. ಮೈ ಮುರ್ಸ್ದು ದುಡ್ದು, ಕುಂತು ಉಣ್ಣೊವಾಗ ಸ್ವಾಮಿ ಪರಮಾತ್ಮ ಅಂತ ದ್ರಾವ್ರುನ್ನ ನೆನಿಬೇಕು ಕಣಪ್ಪ, ಭೂಮ್ ಬಿರ್ಸ್ವಿ ಧೋ ಅಂತ ಮಳುಯ್ದೋ, ಸಿಡ್ಲು ಬಡ್ದ್ರೂ ಮುಗಿತಲ್ಲ ನಮ್ಕತೆ. ಅದ್ಕೇಕೆಯಾ ನಿನ್‌ದಯಿರ್ಲಿ ಅಂತ ಕೈಯತ್ ಮುಗಿಬೇಕ್ ಕಣ್ರಪ್ಪಾ ಬೇಜಾರ್ ಮಾಡ್ಕಬೇಡಿ ಇಂಗಂದೆ ಅಂತವಾ ಅಂದೆ.

ಸರೋಜಕ್ಕ : ಏನಂದ್ರು ಅದ್ಕೆ?

ಸಣ್‌ತಿಮ್ಮಿ : ಏನೂ ಅನ್‌ಲಿಲ್ಲ ಕಣೆ. ಅದೇನೇನೊ ಕೈ ಎತ್ತಿತಿ ಕೂಗಿರು, ಜನ್‌ವು ಕೂಗ್ತು. ಅಮ್ಯಾಲೆ ಮನ್ಗ್ ಬಂದ್ ನೀರ್ ಕೇಳಿ ಇಸ್ಕಂಡ್ ಕುಡ್ಡೋದ್‌ವು. ಇನ್ನೇನಾಪಾಟಿ ಕೂಗಿರೆ, ಗಂಟ್ಲು ನರ ಉಳ್ದಾವಾ? ಅಲ್ಕಣೆ ದ್ರಾವ್ರು ಪಾಪ್ರು ಅಂತೇನು ಮಾತಾಡಕಿಲ್ಲ ಮಾತ್ಯಾಕಂಗೆ ತಲ್‌ಕೂದ್ಲು, ದಾಡಿ ಬಿಟ್ಕಂಡವೆ?

ಸರೋಜಕ್ಕ : (ದಾಡಿ ಬಿಟ್ಟಿರಾಕೆ ಏನ್ ವಿವರಣೆ ಕೊಡ್ಬೇಕು ಅಂತ ತೋಚ್ದೆ) ಅದ್ ಬಿಡೆದಳ್ಳೋರ್ ಯಾರ್ ಬಂದಿದ್ರೆ?

ಸಣ್‌ತಿಮ್ಮಿ : ದಳ್ಳೋರು ಅವ್ರೇನೆ? ಒಂದೊಂದಾಗಿ ಎಲ್ಲ ಬುಟ್ಬೋಯ್ತಾ ಅವ್ರಂತೆ. ಕೆಂಪ್‌ಗೆಕೊಂಕ್ ನರಿದ್ದಂಗಿಲ್ವಾ ಅವ್ನ ಎಲ್ಲಾರ್‌ನುವೆ ಕರ್ಕಂಡ್ ಬಿಜೆಪಿಗೆ ಸೇರ್ಸ್‌ಬುಡ್ತಾ ಅವ್ನಂತಲ್ಲ. ಅಲ್ಲ ದ್ಯಾವೆಗೌಡ್ನು ಕುಂಕ್‌ಮ ಅಚ್‌ಕಂತನ್ನಲ್ಲ ಅವ್ನ ಬಿಜೆಪಿಗೆ ಸೇರ್ಕಂಡನಾ?

ಸರೋಜಕ್ಕ : (ಕೊಂಕ್‌ನರಿ ಮಾತ್ ಕೇಳಿ ನಕ್ಳು)

ಸಣ್ ತಿಮ್ಮಿ : ಏನೊ ಅವ್ವ ನಾನೇನ್ ಓದ್ದೋಳಾ? ಬರ್ದ್ದೋಳಾ? ನಂಗ್ ತಿಳ್ದಂಗ್ ಮಾತಡ್ದನವ್ವ ಯಾಕ್ ನಗ್ತಿಯಾ?

ಸರೋಜಕ್ಕ : ಥೂ ನಿನ್ನ ನೀನಾಡಾ ಮಾತು ನೂರ್ಕ್ ನೂರ್ ಸತ್ಯ ಕಣೆ. ಕೊಂಕ್‌ನರಿ ನೆನ್‌ಸ್ಕಂಡ್ ನಕ್ಕೆ ಸರ್‍ಯಾದ್ ಎಸ್ರಿಕ್ಕಿದ್ದಿಯಾ. ಎಂಗುಸ್ರು ಯಾರ್ ನಿಂತವ್ರೆ ಎಲ್‌ಕ್ಸನ್‌ಗೆ?

ಸಣ್‌ತಿಮ್ಮಿ : ಯಾರು ಇಲ್ಕಣೆ. ಆ ದಳ್ಳೋನು ಚಿಕ್ ಪುಟ್ಟೇಗೌಡ ಒಂದಿನ್ ಸಿಕ್ಕಿ ತಿಮ್ಮಕ್ಕೊ ಇನ್ಮೇಲೆ ಎಂಗ್‌ಸ್ರುದೆ ರಾಜ್‌ಬಾರಾ. ದಿಲ್ಲಿನಾಗೆ ನೂರ್ಕೆ 33 ಜನ ಎಂಗ್‌ಸ್ರಿರ್‌ಬೇಕು ಅಂತ ಕಾನೂನಾಯ್ತದೆ. ನೀನೂ ಬೇಕಾರೆ ಎಲೆಕ್ಸನ್‌ಗೆ ನಿಂತ್ಕಂಡು ದಿಲ್ಲಿಗೋಗ್‌ಬೋದು ಅಂತ ನೆಗಾಡ್ದ ಕಣೆ.

ಸರೋಜಕ್ಕ : ನಿಜ ಕಣೆ ಅವ್‌ನಂದಿದ್ದು.

ಸಣ್‌ತಿಮ್ಮಿ : ಏ ಸುಮ್ಕಿರೆ. ಎಂಗ್‌ಸ್ರನ್ನಾ ಆಳಾಕ್ ಬಿಟ್ಟಾರಾ? ಅವ್ನ ನಗಾಡ್ದ್‌ಕೆ ಸಿಟ್ಟೆತ್ತಿ ಈಸ್ ವರ್ಸದಿಂದ ರಾಜಭಾರ ಮಾಡಿದಿರಲ್ಲ ನೀವೇನಪ್ಪಕಿಸ್ದ್ ಆರಾಕಿರಾದು? ಎಂಗುಸ್ರು ಚೆಂದಾಗೆ ರಾಜ್‌ಬಾರ ಮಾಡಾರು ಬಿಟ್ರೆ. ನೀನೆ ಕಾಣ ಊರಾಗೆಸ್ಟ್ ಜನ ಮೂರ್ ಕಾಸ್ನ ಬದ್ಕ ಮಾಡ್ದೆ ಉಂಡ್‌ಕಂಡ್ ತಿರ್ಗ್ತಾ ಇರಾದ? ಎಂಗುಸ್ರು ಮನೆ, ಮಠ, ಮಕ್ಳು, ವಲ, ತ್ವಾಟ ಎಲ್ಲಾನೂ ನೋಡ್ಕಂಡು ಬದ್ಕ್ ನಿಬಾಯ್‌ಸ್ತ ಇಲ್ವಾ. ನೀರ್ಗೆ ಮೈಲ್‌ದೂರ ಓಗ್‌ಬೇಕು. ಆ ರಾಮೇಗೌಡ ಏಸ್‌ದಿನ್‌ದಿಂದ ಗೆಲ್‌ತ್ಲೇ ಅವ್ನೆ. ಅವ್ನ ಯೋಗ್ತಗೆ ಒಂದ್ ಬೋರಾಕ್ಸ್‌ಲಿಲ್ಲ. ಬಿಳಿ ಪಂಚೆ ಉಟ್ಕಂಡು ಬೀಡಿ ಸೇದ್ಕಂಡು ಉಡ್ರುನ್ ಜೊತೆ ಆಕ್ಕಂಡು ಬರಿ ತಿರ್ಗದೆಯಾ. ಬದ್ಕ್ ಮಾಡಾಕೆ ಮೈ ಬಗ್ದ್ ಅವ್ನಗಿಂತಲೂ ನಾನೆ ವಾಸಿ ಕಣ್ಲಾ, ಕೆಲ್ಸ ಚೆಂದಾಗಿ ಮಾಡ್ಸಿರುವೆ ಅಂದೆ.

ಸರೋಜಕ್ಕ : ಬಲ್ ಇದಿಯಾ ಕಣೆ ನೀನು. ಸರೀಗ್ ಕೊಡ್ತಿಯಾ (ಯಾರ್ಗೆ ತಿಮ್ಮಿ ಒಟಾಕ್‌ಬೋದು ಅಂತ ಕುತೂಹಲಕ್ಕೆ) ಅದೆಲ್ಲ ಬಿಡು ನಿನ್ಯಾರ್ಗೆ ಒಟಾಕ್ತಿಯಾ?

ಸಣ್‌ತಿಮ್ಮಿ : ಆಹಾ, ತಿಳ್ದಿರೋಳ್ ನೀನೆ ಕೇಳ್ತಿಯಾ? ಯಾರ್ಗ್ ಒಟಾಕ್ತಿನಿ, ಯಾರ್ಗ್ ಒಟಾಕ್ದೆ ಅಂತ ಏಳಾಂಗಿಲ್ಲ ಅಂತ ಗೊತ್ತಿಲ್ವಾ? ಟಿವಿನಾಗೆ, ರೇಡಿದಾಗೆ ಬರಿ ಅದ್ನೆ ಏಳ್ತಾವ್ರೆ. ನಂಗ್ ಸರ್‌ಕಂಡೋರ್ಗೆ ಆಗ್ತಿನಿ, ನಿಂಗ್ಯಾಕೆ ಅಂತ ತಣ್ಗೆಗೆ ಬಿಸ್‌ಬಿಸೆ ಇಟ್ಟು ಅವ್ರೆಕಾಯ್ ಬಸ್ಸಾರ್ ಬಿಟ್ಟು ಮುಂದ್‌ಕಿಕ್ಕಳು. ಉಣ್ಣೆ ಒಟ್ ತುಂಬವಾ ಅಂದ್ಳು.

ಸರೋಜಕ್ಕ ಅವ್‌ಳ ಜಾಣ್ತನಕ್ಕೆ ಮೆಚ್ಕಂಡು ಬಸ್ಸಾರಿನ್ ರುಚಿಗೆ ಲೊಟ್ಟೆ ಒಡ್ದ್ಳು.

ಜರ್ಮನ್ 'ಗ್ರೀನ್' ಪಕ್ಷದ ಪೆಟ್ರಾ ಕೆಲ್ಲಿಯವರ ವಿಡಿಯೋ ಸಂದರ್ಶನದ ಲಿಖಿತ ರೂಪ

ಜರ್ಮನಿಯ 'ಗ್ರೀನ್ ಪಕ್ಷ' 1983ರಿಂದ ಜರ್ಮನಿಯ ಸಂಸತ್ತಿನಲ್ಲಿ ಇಕಾಲಜಿ - ಹಾಗೂ ಇದರ ಜೊತೆ ಕೈಗಾರಿಕೆಗಳಿರುವ ಈಗಿರುವ ಸಂಬಂಧ, ಇರಬೇಕಾದ ಸಂಬಂಧದ ಬಗ್ಗೆ ಅನೇಕಾನೇಕ ಪ್ರಶ್ನೆಗಳನ್ನು ಎತ್ತುವಲ್ಲಿ ಜಯಪ್ರದವಾಗಿದೆ. ಸ್ತ್ರೀವಾದ ಹಾಗೂ ಇಕಾಲಜಿಯ ಸಂಬಂಧದ ಬಗ್ಗೆ ಮಾತನಾಡುವ ಇವರು ಇಕಾಲಜಿಯ ಬಗ್ಗೆ ಹೊಸದೊಂದು ವ್ಯಾಖ್ಯಾನವನ್ನೇ ನೀಡುತ್ತಾರೆ. ಸಣ್ಣ ಸಣ್ಣ ಗುಂಪುಗಳು ಹೊಸದೊಂದು ರಾಜಕೀಯ ಶಕ್ತಿಯ ಆಯಾಮವನ್ನೇ ನೀಡಬಲ್ಲವು ಎಂದು ಹೇಳಿದ ಪೆಟ್ರಾ ಕೆಲ್ಲಿ - 'ಪಕ್ಷ'ದ ರಚನೆ ಹೀಗಿರಬೇಕು ಎಂಬ ತಮ್ಮ ಗ್ರಹಿಕೆಯನ್ನು ಹೇಳಿದ್ದಾರೆ. ಯಾವ ರೀತಿಯ ಕೈಗಾರಿಕೆ, ಉತ್ಪಾದನೆಗಳು ನಮ್ಮ ಬದುಕನ್ನು ಹಸನುಗೊಳಿಸಬಲ್ಲವು, ಯಾವ ರೀತಿಯ ಪರ್ಯಾಯ ವ್ಯವಸ್ಥೆಗಳು ಮಹಿಳೆಯರ, ಕಾರ್ಮಿಕರ, ಜನರ ಜೀವನಗತಿ ಸುಧಾರಿಸಬಲ್ಲವು, ಯಾವ ರೀತಿಯ ಪರ್ಯಾಯ ವ್ಯವಸ್ಥೆಗಳು ಅಗತ್ಯ? ಯಾವ ರೀತಿಯ ಜೀವನ ಶೈಲಿ ರಾಜಕೀಯ ಶಕ್ತಿಯಾಗಿ ಮಾರ್ಪಾಡಾಗಬಲ್ಲವು ಎಂಬುದನ್ನು ಕುರಿತು ಪೆಟ್ರಾಕೆಲ್ಲಿ ಹೇಳಿದ ಮಾತುಗಳು ನಮ್ಮಲ್ಲಿನ ಅನೇಕಾನೇಕ ಪ್ರಶ್ನೆಗಳಿಗೆ, ದ್ವಂದ್ವಗಳಿಗೆ ಉತ್ತರಗಳಾಗಬಹುದಾಗಿದೆ. 1989ರಲ್ಲಿ ಆಲ್‌ಕಾಮ್‌ನ ಕೆ. ಪಿ. ಶಶಿಯವರು ಪೆಟ್ರಾಕೆಲ್ಲಿಯವರೊಡನೆ ಮಾಡಿದ ವಿಡಿಯೋ ಸಂದರ್ಶನದ ಲೇಖನ ರೂಪವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ಗ್ರೀನ್ ಪಾರ್ಟಿಯ ಆದರ್ಶ ನಾಯಕಿಯಾಗಿದ್ದ ಪೆಟ್ರಾ ಅವರು ಆತ್ಮಹತ್ಯೆ ಮಾಡಿಕೊಂಡರೂ ಇಲ್ಲ ಅವರ ಹತ್ಯೆಯಾಯಿತೊ ತಿಳಿದಿಲ್ಲ.

ಪ್ರಶ್ನೆ : ನೀವು 'ನರ್ಮದಾ' ಸಮಸ್ಯೆಯ ಬಗ್ಗೆ ಆಸಕ್ತಿ ತೋರಿಸುತ್ತಿದ್ದೀರಿ. ನರ್ಮದಾ ಸಮಸ್ಯೆಯ ಬಗ್ಗೆ ನಿಮ್ಮ ದೃಷ್ಟಿಕೋನ ಹಾಗೂ ಈ ಕುರಿತು ನೀವು ಮಾಡಿರುವುದನ್ನು ತಿಳಿಸುವಿರಾ?

ಪಿ. ಕೆ. : ಈ ರೀತಿಯ ಅಣೆಕಟ್ಟು ಯೋಜನೆಯ ಬಗ್ಗೆ - ನಿಜವೆಂದರೆ ಈ ರೀತಿಯ ಅಣೆಕಟ್ಟು ಕಟ್ಟುತ್ತಿರುವ ಬಗ್ಗೆಯೇ ನಮಗೆ ವಿರೋಧವಿದೆ. ಉದಾ : ಹೈಡ್ರೋ-ಎಲೆಕ್ಟ್ರಿಕಲ್ ಅಣೆಕಟ್ಟು ವಿಚಾರದಲ್ಲಿ ಹೇಳುವುದಾದರೆ ಇಂತಹ ದೊಡ್ಡ ಯೋಜನೆಗಳು ಆ ಪ್ರದೇಶದಲ್ಲಿ ವಾಸವಾಗಿರುವ ಜನರಿಗೆ ಅತೀ ಕ್ಲಿಷ್ಟಕರ ಜೈವಿಕ ಸಮಸ್ಯೆಗಳನ್ನು ಒಡ್ಡುತ್ತವೆಯೆಂದೇ ನಾವು ಎಣಿಸುತ್ತೇವೆ. ಭಾರತದಲ್ಲಿ ಮಾತ್ರವಲ್ಲ, ಆಸ್ಟ್ರೇಲಿಯ ಹಾಗೂ ಜಗತ್ತಿನ ಇತರ ಭಾಗಗಳಲ್ಲೂ ಇಂತಹ ಅಣೆಕಟ್ಟು ಯೋಜನೆಗಳನ್ನು ನಿಲ್ಲಿಸುವುದಕ್ಕೆ 'ಗ್ರೀನ್ ಪಕ್ಷವು' ಆಂದೋಲನ ಪ್ರಾರಂಭಿಸಿದೆ. 1986ರಿಂದಲೇ 'ಸೊಸೈಟಿ ಫಾರ್ ಎಂಡೇಜರ್ಡ್ ಪೀಪಲ್' ಮೂಲಕ ಮನವಿ ಪತ್ರವನ್ನು ರಾಜೀವ್ ಗಾಂಧಿ ಸರ್ಕಾರಕ್ಕೆ ಕಳುಹಿಸಿದ್ದೆವು. ಈ ನರ್ಮದಾ ಅಣೆಕಟ್ಟು ಯೋಜನೆ ಪರಿಸರ ಹರಣ ಮಾಡುವುದರಿಂದ ಇದನ್ನು ನಿಲ್ಲಿಸಬೇಕೆಂದು ಕೇಳಿದ್ದೆವು. ಈ ಯೋಜನೆಯ ವಿರುದ್ಧ ಇರುವ ಭಾರತೀಯ ಜನರ ವಿರೋಧವನ್ನು ಗೌರವಿಸಬೇಕಲ್ಲದೇ ನಾವು ಮೃದು ತಾಂತ್ರಿಕತೆಯನ್ನು, ಮೃದು ವಿಧಾನದ ಇಂಧನಗಳನ್ನು ಮತ್ತೆ ನವೀನಗೊಳಿಸಬಲ್ಲ ಇಂಧನ ಶಕ್ತಿಯ ಸಂಪನ್ಮೂಲಗಳನ್ನು ಬಳಸಬೇಕೆಂದು ಕೇಳಿದ್ದೆವು. ಇದು 'ಗ್ರೀನ್ ಪಕ್ಷ'ದ ನಿಲುವು. ನಾನು ಮೊದಲೇ ಹೇಳಿದ ಹಾಗೆ ಇದು ಭಾರತ ಸರ್ಕಾರಕ್ಕೆ ಸಂಬಂಧಿಸಿದ ನಿಲುವು ಮಾತ್ರವಲ್ಲ, ಇದು ಎಲ್ಲಾ ಅಣೆಕಟ್ಟು ಯೋಜನೆಗಳ ಬಗ್ಗೆಗಿನ ನಿಲುವು ಕೂಡಾ. ಉದಾ. ಹಂಗೇರಿ ಹಾಗೂ ಆಸ್ಟ್ರೇಲಿಯಾದಲ್ಲಿ ಕೂಡಾ ಈ ಹಂತದಲ್ಲಿ ಪರಿಸರದ ವಿನಾಶ ಕಂಡು ಬಂದಿದೆ.

ಪ್ರಶ್ನೆ : 'ನರ್ಮದ'ಕ್ಕೆ ಸಂಬಂಧಿಸಿದಂತೆ ನಿಮ್ಮ ಕಾರ್ಯ ಚಟುವಟಿಕೆಗಳೇನು?

ಪಿ. ಕೆ. : ಅದರ ವಿರುದ್ಧ 'ಬೇಡಿಕೆ' ಪತ್ರ (Petition) ಇದೆ. 1986ರಿಂದಲೇ ನಾವು ಇದರ ವಿರುದ್ಧ ಸಹಿ ಸಂಗ್ರಹಣೆ ಮಾಡಿದ್ದೇವೆ. ಇವೆಲ್ಲವನ್ನು ರಾಜೀವ್‌ಗಾಂಧಿಗೆ ಕಳುಹಿಸಿದ್ದೆವು. ಆ 'ಬೇಡಿಕೆ' ಹಾಗೂ ಸಹಿಯ ಭಾಗ ನನ್ನಲ್ಲಿಯೇ ಇದೆ. ರಾಜೀವ್‌ಗಾಂಧಿಯ ಜೊತೆ ಮಾತನಾಡುವಾಗ ಇದನ್ನು ಅವರಿಗೆ ನಾವು ಕೊಟ್ಟಿದ್ದೆವು. ಚರ್ಚೆ ಮಾಡಿದ ಇತರ ಎಲ್ಲಾ ಸಮಸ್ಯೆಗಳಲ್ಲಿ ಇದೂ ಒಂದು ವಿಷಯವಾಗಿತ್ತು. ಆದರೆ ಇದರ ಬಗ್ಗೆಯೇ ಹೆಚ್ಚು ಮಾತನಾಡಲಾಗಲಿಲ್ಲ. ಏಕೆಂದರೆ ಇತರ ಮುಖ್ಯ ವಿಚಾರಗಳೂ ಇದ್ದವು. ಆ ಭೇಟಿ 55 ನಿಮಿಷಗಳದ್ದಾಗಿದ್ದಾಗ್ಯೂ ಕೂಡಾ, ಅದರಲ್ಲಿ ರಾಜೀವ್ ಈ ಅಣೆಕಟ್ಟು ಯೋಜನೆಯನ್ನು ವಿರೋಧಿಸುವ ಜನರಿಗೆ ಜರ್ಮನಿಯಲ್ಲಿ ದೊಡ್ಡ ಬೆಂಬಲ ಇದೆಯೆಂಬುದನ್ನು ಅರ್ಥ ಮಾಡಿಕೊಂಡರು.

ಪ್ರಶ್ನೆ : ಪರಿಸರವಾದಿ ಕಾರ್ಯಕರ್ತರು ಭಾರತದಲ್ಲಿ ಒಂದು ಪರ್ಯಾಯ ಅಭಿವೃದ್ಧಿ ಮಾದರಿಗಾಗಿ ಎದುರು ನೋಡುತ್ತಿದ್ದಾರೆ. ಕೈಗಾರಿಕಾ ಸರಕು ಸಂಸ್ಕೃತಿ, ಕೈಗಾರಿಕಾ ಸಮಾಜ ಆವರಿಸುತ್ತಿರುವ ರೀತಿ ಸಮಾಜಕ್ಕೆ ಬೆದರಿಕೆಯನ್ನುಂಟು ಮಾಡುತ್ತಿವೆ. ಆದ್ದರಿಂದ ಜನರು ಪರ್ಯಾಯ ಅಭಿವೃದ್ಧಿ ಮಾದರಿಗಾಗಿ ಎದುರು ನೋಡುತ್ತಿದ್ದಾರೆ. ಅಣೆಕಟ್ಟುಗಳ ವಿರುದ್ಧ, ಅಣು ಶಕ್ತಿ ಸ್ಥಾವರ ವಿರುದ್ಧ, ಥರ್ಮಲ್ ಸ್ಥಾವರ ವಿರುದ್ಧ ಹಾಗೂ ಸ್ವಲ್ಪ ಮಟ್ಟಿಗೆ ನಿರ್ದಿಷ್ಟ ಜೀವನ ಶೈಲಿಯ ವಿರುದ್ಧ ಭಾರತದಲ್ಲಿ ಇಂದು ಅನೇಕ ರೀತಿಯ ವಿರೋಧಗಳು ಕಂಡುಬರುತ್ತಿವೆ. ಆದರೆ ಪರ್ಯಾಯ ಅಭಿವೃದ್ಧಿ ಮಾದರಿಗೆ ತಾತ್ವಿಕ ವಿಚಾರಗಳು ಇಲ್ಲ. ಒಂದು ಕಡೆ ಅಣೆಕಟ್ಟು, ಅಣುಶಕ್ತಿ ಸ್ಥಾವರ ಸ್ಥಾಪನೆ ನಿಲ್ಲಿಸಿದ್ದರೂ ಕೂಡಾ ಇದೇ ಸಂದರ್ಭದಲ್ಲಿ ಕೈಗಾರಿಕಾ ಮಾದರಿ ಹೆಚ್ಚು ತೀವ್ರಗತಿಯಲ್ಲಿ ಬೆಳೆಯತೊಡಗಿದೆ. ಜರ್ಮನಿಯಲ್ಲಿನ ನಿಮ್ಮ ಅನುಭವದಿಂದ ಯಾವ ರೀತಿಯ ಅಭಿವೃದ್ಧಿ ಮಾದರಿಯನ್ನು ನೀವು ಬೆಂಬಲಿಸುತ್ತೀರಿ ಎಂಬುದನ್ನೂ ಹಾಗೂ ಇಂಧನ, ಅಣೆಕಟ್ಟು, ವ್ಯವಸಾಯ, ಸರಕು, ಉತ್ಪಾದನೆಗಳಿಗೆ ಪರ್ಯಾಯ ವ್ಯವಸ್ಥೆಗಳು ಏನಾಗಬಹುದು ಎಂಬುದನ್ನು ವಿವರಿಸುತ್ತೀರಾ?

ಪಿ. ಕೆ. : ನಾವು ಯಾವಾಗಲೂ ಇ. ಎಮ್. ಸುಮಚೆರ್‌ರ ತತ್ವ 'ಚಿಕ್ಕದರಲ್ಲಿ ಸೌಂದರ್ಯವಿದೆ' ಎಂಬುದರ ಕಡೆ ನೋಡುತ್ತೇವೆ. ಎಲ್ಲವನ್ನೂ ನೋಡಬಲ್ಲ, ಮರು ವಿನ್ಯಾಸಗೊಳಿಸಬಲ್ಲ ಸಮುದಾಯಗಳು - ಅವು ಸ್ವಾವಲಂಬಿಗಳಾಗಿರಬೇಕಾಗಿರುತ್ತವೆ, ಸ್ವತಃ ನಿರ್ಧರಿಸಬಲ್ಲವುಗಳಾಗಿರಬೇಕಾಗುತ್ತವೆ. ಇದರರ್ಥ ನಾವು ಇಡಿಯ ಆರ್ಥಿಕ ವ್ಯವಸ್ಥೆಯನ್ನೇ ಬದಲಾಯಿಸಬೇಕಾಗುತ್ತದೆ.

'ಗ್ರೀನ್ ಪಕ್ಷ' - ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಅದು ಆರ್ಥಿಕ ವ್ಯವಸ್ಥೆಯನ್ನು ಬದಲಾಯಿಸುವುದು. ಸೋಷಿಯಲ್ ಡೆಮ್ಯಾಕ್ರೆಟ್ಸ್ ಕೂಡಾ ಇದನ್ನು ಬೆಂಬಲಿಸುತ್ತಾರೆ. ನಾವು ಅಪೇಕ್ಷೆ ಪಡುವ, ಎದುರು ನೋಡುವ ತಾಂತ್ರಿಕತೆಗಳು ಜನರ ಆರೋಗ್ಯವನ್ನು ಹಾಳು ಮಾಡಬಾರದು, ನಾವು ಎದುರು ನೋಡುವ ಇಂಧನ ಶಕ್ತಿಗಳು ಕೂಡಾ ಜನರ ಆರೋಗ್ಯವನ್ನು ಕೆಡಿಸಬಾರದು. ಇಂತಹ ಯೋಜನೆಗಳಲ್ಲಿ ಕೆಲಸ ಮಾಡುವಂತಹವರು ಈ ಅಪಾಯಗಳನ್ನು ಅರಿತಿರುವಂತಹ ಕೆಲಸಗಾರರಾಗಿರಬೇಕಾಗುತ್ತದೆ.

ಅತ್ಯುತ್ತಮ ಮಾದರಿಯೆಂದು ನಾವು ಯೋಚಿಸುವ ವಿಧಾನ 70ರ ದಶಕದ ಪ್ರಾರಂಭದಲ್ಲಿ ಕಂಡು ಬಂದಿತ್ತು. ಆಗ ಗ್ರೀನ್ ಬ್ಯಾನ್ ಚಳುವಳಿಯ ಜರ್ಮನಿಯಲ್ಲಿ ಚರಕ್ ಮಂಡಿ ಮತ್ತು ಆತನ ಕಟ್ಟಡದ ಕೆಲಸಗಾರರು 40 ಕಟ್ಟಡದ ಯೋಜನೆಗಳನ್ನು ಕಟ್ಟಲು ತಿರಸ್ಕರಿಸಿದರು. ಆ ಯೋಜನೆಗಳು ಪರಿಸರಕ್ಕೆ ವಿನಾಶಕಾರಿಯಾಗುವುದರಿಂದ ತಾವು ಕೆಲಸಗಾರರಾಗಿ ಅದನ್ನು ಮಾಡುವುದಿಲ್ಲ ಎಂದು ಹೇಳಿದರು. ಅದು ಅತ್ಯಂತ ಧೈರ್ಯಶಾಲಿ ನಿಲುವಾಗಿತ್ತು. ನಮ್ಮಂತಹ ಅಭಿವೃದ್ಧಿ ಹೊಂದಿದ ದೇಶವಾಗಲೀ, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರವಾಗಲೀ, ಅಥವಾ ಮೂರನೇ ಜಗತ್ತಿನಲ್ಲಾಗಲೀ ಇಂತಹ ಕಾರ್ಮಿಕ ಸಂಘಟನೆಗಳು ಈ ಉದಾಹರಣೆಯನ್ನು ಅನುಸರಿಸಿದರೆ ನಾವು ಒಂದು ದೊಡ್ಡ ಭರವಸೆ ಇಟ್ಟುಕೊಳ್ಳಬಹುದು. ಆದರೆ ಕಾರ್ಮಿಕರು ಹಾಗೂ ಕಾರ್ಮಿಕ ಸಂಘಟನೆಗಳು ಈಗಿರುವ ಆರ್ಥಿಕ ವ್ಯವಸ್ಥೆಯಲ್ಲಿ ಬಹುವಾಗಿ ಬೆರೆತು ಹೋಗಿರುವುದರಿಂದ ಅವರು ಸಾಕಷ್ಟು ಒತ್ತಡ ತರಲಿಕ್ಕೆ ಸಾಧ್ಯವಾಗುವುದಿಲ್ಲ.

ನಮ್ಮ ಮಾದರಿ, ಅಥವಾ ನಮ್ಮ ವಿಚಾರ-ಬಂಡವಾಳಶಾಹಿ ಸಮಾಜವಾದದ ಮಧ್ಯದ್ದು. ಈ ಮಾದರಿಯ ಪ್ರಕಾರ ನಾವು ಅಪೇಕ್ಷೆ ಪಡುವ ಸಮಾಜ ಮೊಟ್ಟ ಮೊದಲನೆಯದಾಗಿ ಕಾರ್ಮಿಕರಿಗೆ ಆತ್ಮ-ಶಕ್ತಿ ಹಾಗೂ ಒಗ್ಗೂಡಿಸುವುದನ್ನು ಕೊಡುತ್ತದೆ. ಆತ ಯಾವ ವಸ್ತುಗಳನ್ನು ತಯಾರಿಸಬೇಕೆಂಬುದರ ಬಗ್ಗೆ ಆತನಿಗೇ ಆಯ್ಕೆ ನೀಡುತ್ತದೆ. ಆ 'ವಸ್ತು'ವನ್ನು ನೋಡುವುದು ಸಾಧ್ಯವಾಗಬೇಕಾಗುತ್ತದೆ. ಆತ ವಿಷಪೂರಿತ ಅಥವಾ ಕ್ಯಾನ್ಸರ್ ತರುವ ಸಾಧ್ಯತೆಗಳಿರುವ ವಸ್ತುಗಳನ್ನು ತಯಾರಿಸಬಾರದು. ಇದು ವ್ಯಕ್ತಿಯ ಮೇಲೆ ಹೆಚ್ಚು ಜವಾಬ್ದಾರಿಯನ್ನು ಹಾಕುತ್ತದೆ. ಆತನು ನಿರ್ವಹಣಾಧಿಕಾರಿ ಬೋರ್ಡ್ ಕಡೆ ನೋಡಬೇಕಾಗಿಲ್ಲ. ಆದರೆ ಸಾಮಾಜಿಕ ಸಮಾನತೆ, ಪರಿಸರ ಹಾಗೂ ಸಾಮಾಜಿಕ ನ್ಯಾಯ ಹೊಂದಿರುವ ಆರ್ಥಿಕ/ಪರಿಸರ ಮಾದರಿ ಪ್ರಪಂಚದ ಯಾವ ಭಾಗದಲ್ಲೂ ಕಾಣ ಸಿಗುವುದಿಲ್ಲ.

ನಮ್ಮಲ್ಲಿ ಈಗ ಕೆಲವು 'ಪ್ರಾರಂಭ'ಗಳನ್ನು ನೋಡಬಹುದಾಗಿದೆ. ಉದಾಹರಣೆಯೆಂದರೆ ಚಿಕ್ಕ ಚಿಕ್ಕ ಕಂಪನಿಗಳು ಪರ್ಯಾಯ ಉತ್ಪಾದನೆಗೆ ನಾಂದಿ ಹಾಡಿವೆ. ನಮ್ಮಲ್ಲಿ (biological agriculture) ಜೈವಿಕ ಕೃಷಿ ಇದೆ. ಆದರೆ ದೊಡ್ಡ ದೊಡ್ಡ ವ್ಯವಸ್ಥೆಯಲ್ಲಿ ಇವು ಚಿಕ್ಕ ಚಿಕ್ಕ ಪ್ರಯತ್ನಗಳು ಮಾತ್ರ. ಕೆಲವು ಸಂದರ್ಭದಲ್ಲಿ ನಾವು ನಿರಾಶಾವಾದಿಗಳಾಗುತ್ತೇವೆ. ಏಕೆಂದರೆ ನೀವು ಹೇಳಿದ ಹಾಗೆ ಕೈಗಾರಿಕಾ ಅಭಿವೃದ್ಧಿ ತೀವ್ರಗತಿಯಲ್ಲಿ ಬೆಳೆಯುತ್ತಿದೆ ಹಾಗೂ ಹೆಚ್ಚು ಅಧಿಕಾರವನ್ನು ಹೊಂದಿದೆ.

ಮೂರನೇ ಜಗತ್ತಿನ ಅಭಿವೃದ್ಧಿಯನ್ನು ಗಮನಿಸಿದಾಗ ನಮಗನ್ನಿಸುವುದೆಂದರೆ - ನಾವು ನಮ್ಮ ತಪ್ಪುಗಳನ್ನು ಅಲ್ಲಿಗೆ ರಫ್ತು ಮಾಡುತ್ತಿದ್ದೇವೆ ಹಾಗೂ ತಪ್ಪು ರೀತಿಯಾದ ಸಹಾಯವನ್ನು ರಫ್ತು ಮಾಡುತ್ತಿದ್ದೇವೆ ಎನಿಸುತ್ತದೆ. ಹಾಗಾಗಿ ಅಲ್ಲಿಯ ಜನರಿಗೆ ಇದನ್ನು ನಿರಾಕರಿಸುವುದು ಕಷ್ಟವಾಗುತ್ತಿದೆ. ಇದೆಲ್ಲಾ ಬೇಡ ಎನ್ನಲು ಸಾಧ್ಯವಾಗುತ್ತಿಲ್ಲ. ನಾವು ಒಂದು ದೊಡ್ಡ ಸಮತೋಲನ ಕಾಯ್ದುಕೊಳ್ಳಬೇಕಾಗಿದೆ. ನಾವು ಎಲ್ಲವನ್ನೂ ಹೆಚ್ಚಾಗಿ ಹೊಂದಿದ್ದೇವೆ. ನಾವು ಅತಿಯಾಗಿ ಇಂಧನ ಬಯಸುತ್ತೇವೆ. ಅತಿಯಾಗಿ ಖನಿಜ ಬಳಸುತ್ತೇವೆ. ಇವುಗಳನ್ನು ಮೂರನೇ ಜಗತ್ತಿನ ಜನರ ಬೆನ್ನ ಮೇಲೆ ಮಾಡಿದ್ದೇವೆ. ನಮ್ಮ ಬದುಕಿನ ಮಟ್ಟ ಹೆಚ್ಚಿಸಿಕೊಳ್ಳಲಿಕ್ಕಾಗಿ ರಫ್ತು ಮಾಡುತ್ತಿದ್ದೇವೆ. ನಮ್ಮ ಜೀವನಮಟ್ಟ ಎಲ್ಲಾ ಮೂರನೇ ಜಗತ್ತಿಗಿಂತ 100 ಪಾಲು ಹೆಚ್ಚು ಉತ್ತಮವಾಗಿದೆ".

ಆದ್ದರಿಂದ ನಮ್ಮ ಮೊದಲ ಜವಾಬ್ದಾರಿಯೆಂದರೆ ನಾವು ಹೊಸ ಜಗತ್ತಿನ ವ್ಯವಸ್ಥೆ ಹೊಂದಬೇಕಾಗಿದೆ. ಹೊಸ ಆರ್ಥಿಕ, ಪರಿಸರದ ಮಾದರಿಗಳನ್ನು ಹೊಂದಬೇಕಾಗಿದೆ. ವಿಶ್ವ ಸಂಸ್ಥೆಯ ಯೋಜನೆಗಳನ್ನು ನಾವು ನಿಲ್ಲಿಸುವ ಅಗತ್ಯವಿದೆ. ಅಂತರ್‌ರಾಷ್ಟ್ರೀಯ ಅಭಿವೃದ್ಧಿ ಬ್ಯಾಂಕ್ ಸಂಸ್ಥೆಯ ಯೋಜನೆಗಳನ್ನು ನಾವು ನಿಲ್ಲಿಸುವ ಅಗತ್ಯವಿದೆ. ಮೂರನೇ ಜಗತ್ತಿನ ಸಾಲಗಳನ್ನು ನಾವು ತಡೆಯಬೇಕಾಗಿದೆ. ಇಲ್ಲದಿದ್ದರೆ ಅವರು ಪರ್ಯಾಯ ಮಾದರಿಗಳನ್ನು ಬೆಳೆಸುವುದಿಲ್ಲ. ಏಕೆಂದರೆ ಅಷ್ಟು ಸಾಲಗಾರರಾಗಿರುವುದರಿಂದ ಪಾಶ್ಚಿಮಾತ್ಯ ದೇಶಗಳಿಗೆ ಬಡ್ಡಿ ಕೊಡುವುದರಲ್ಲಿಯೇ ಮುಳುಗಿ ಹೋಗುತ್ತಾರೆ.

ಹಾಗಾಗಿ ಬಹಳ ತಪ್ಪುಗಳಿವೆ. ಗ್ರ್ಯಾಸ್ ರೂಟ್ ಹಂತದಲ್ಲಿ ಯೋಜನೆಗಳಿಗೆ ವಿರೋಧ ತೋರಿಸುವುದು ಮುಂದುವರಿದರೆ ಮಾತ್ರ ನಾವು ಪ್ರಜ್ಞಾವಂತರಾಗಬಹುದು. ನನಗೆ ಸಂಸತ್ತಿನಲ್ಲಿ ಹೆಚ್ಚು ಭರವಸೆ ಇಲ್ಲ. ಏಕೆಂದರೆ ಸಂಸತ್ತುಗಳು ಕೆಳ ಹಂತದಲ್ಲಿ ಪ್ರತಿರೋಧ, ಒತ್ತಡಗಳಿದ್ದಾಗ ಮಾತ್ರ ಪ್ರತಿಕ್ರಿಯಿಸುತ್ತವೆ.

ಹಾಗಾಗಿ ನಾನು ಸ್ವಲ್ಪ ನಿರಾಶಾವಾದಿಯೇ, ಮತ್ತೊಮ್ಮೆ ಚಿಪ್ಕೋ ಚಳುವಳಿಯ ಕಡೆ ನೋಡುತ್ತೇನೆ, ಭಾರತದ ಹಾಗೂ ಇತರ ಮೂರನೇ ಜಗತ್ತಿನ ಪರಿಸರ ಚಳುವಳಿಯ ಕಡೆ ಹಾಗೂ ಅದರಲ್ಲಿರುವ ಜನರ ಕಡೆಗೆ ನೋಡುತ್ತೇನೆ. ಆಗ ಮತ್ತೊಮ್ಮೆ ಆಶಾವಾದಿಯಾಗುತ್ತೇನೆ. ಇದು ಸರಕು ಸಂಸ್ಕೃತಿಗೆ ವಿರುದ್ಧವಾಗಿರುವ ಸರಿಯಾದ ಅಲೆಯಾಗಿ ಕಾಣಿಸುತ್ತದೆ. ನಮ್ಮ ದೇಶದ ವಿಷಾನಿಲಗಳ ಕಚಡಾ ಒಪ್ಪಿಕೊಳ್ಳಲು ನಿರಾಕರಣೆ,

ಮೃದು ತಾಂತ್ರಿಕತೆಗೆ ತಿರುಗುತ್ತಿರುವ ರೀತಿ ಇವು ಭರವಸೆ ಹುಟ್ಟಿಸುತ್ತವೆ. ಭಾರತ 'ಸೂರ್ಯ' ಶಕ್ತಿಯ ಕಡೆಗೇ ತಿರುಗಬಬೇಕೆಂಧು ನಾನು ಯೋಚಿಸುತ್ತೇನೆ. ಈ ದೇಶಕ್ಕೆ 'ಸೂರ್ಯ' ಶಕ್ತಿಯ ಕಡೆಗೆ ತಿರುಗುವ ಶಕ್ತಿ ಇದೆ. ಇದು ದೊಡ್ಡ ಮಟ್ಟದಲ್ಲಿ ನಡೆಯಬೇಕಾಗಿದೆ. ಸಣ್ಣ ಮಟ್ಟದಲ್ಲಿ ಇದು ಅತ್ಯಂತ ದುಬಾರಿಯದು. ದೊಡ್ಡ ಹಂತದಲ್ಲಿ ಸೂರ್ಯ ಶಕ್ತಿಯನ್ನು ಗೃಹ ಬಳಕೆಗೆ ಮನೆಯಲ್ಲಿ ಅಡಿಗೆ ಮಾಡುವುದಕ್ಕೆ ಬಳಸಬಹುದಾಗಿದೆ. ನಾವು ಅಣು ಶಕ್ತಿಯಿಂದ ದೂರವಾಗಬೇಕಿದೆ. ಇದು ಅಪಾಯಕಾರಿ ಅಣುಶಕ್ತಿ ಆಯುಧಗಳಿಗೆ ದಾರಿ ಮಾಡಿಕೊಡುತ್ತದೆ. ಇವು ನಾಗರಿಕ ಸ್ವಾತಂತ್ರ್ಯಗಳನ್ನು ಕಸಿದುಕೊಳ್ಳುತ್ತವೆ. ಅಣು ಶಕ್ತಿಯನ್ನು ಮೂರನೇ ಜಗತ್ತು ಬಳಸುತ್ತಿರುವುದು ವಿಡಂಬನಕಾರಿಯಾಗಿದೆ. ಇದು ನಂಬಲಾರ್ಹವಾದ ವ್ಯವಸ್ಥೆ ಅಲ್ಲ. ಇದೊಂದು ಕೇಂದ್ರೀಕೃತ ವ್ಯವಸ್ಥೆ.

ಪ್ರಶ್ನೆ : ಸೂರ್ಯ ಶಕ್ತಿ ಇಂಧನ ಕೂಡಾ ಆರೋಗ್ಯಕ್ಕೆ ಅಪಾಯಕಾರಿಯಾದುದು. ಇದರಲ್ಲಿನ ಉದ್ಯೋಗದಲ್ಲಿಯೇ ಆರೋಗ್ಯಕ್ಕೆ ಅಪಾಯಕಾರಿಯಾದ ಅಂಶಗಳಿವೆ.

ಪಿ. ಕೆ. : ಜರ್ಮನಿಯಲ್ಲೂ ಇದು ಗೊತ್ತು. ಉದ್ಯೋಗದಲ್ಲಿ ಆರೋಗ್ಯಕ್ಕೆ ಅಪಾಯ ತರುವ ಅಂಶಗಳಿವೆ. ಆದರೆ ಈ ಸೂರ್ಯ ಶಕ್ತಿ ಉತ್ಪಾದನೆಯಲ್ಲಿ ರಕ್ಷಣಾ ವಿಧಾನಗಳಿವೆ. ಈ ರಕ್ಷಣಾ ವಿಧಾನಕ್ಕೆ ಎಷ್ಟು ರಾಜಕೀಯ ಇಚ್ಛಾ ಶಕ್ತಿ ಇದೆ ಎಂಬುದರ ಮೇಲೆ ಇದು ಅವಲಂಬಿತವಾಗಿದೆ, ಏಕೆಂದರೆ ನೀವು ಕಲ್ಲಿದ್ದಲು ಅಥವಾ ಥರ್ಮಲ್ ಶಕ್ತಿಗಳನ್ನು ತೆಗೆದುಕೊಂಡರೆ ಅಲ್ಲಿ ಯಾವಾಗಲೂ ಅಪಾಯವಿದೆ. ಅನುವಂಶೀಯ ಅಪಾಯವಿದೆ. ಅಣು ಶಕ್ತಿಯಲ್ಲಿನ ಅಪಾಯವೆಂದರೆ ಇಂಧನ ಉಳಿಕೆಗಾಗಿ ಸಮಾಜವನ್ನು ಹೆಚ್ಚು ಕಠಿಣವಾಗಿ ಇಡುತ್ತದೆ. ಮಕ್ಕಳಿಗೆಅನುವಂಶೀಯ ಅಪಾಯವನ್ನು ಒಡ್ಡುತ್ತವೆ. ಲ್ಯುಕೇಮಿಯ ಹಾಗೂ ಕ್ಯಾನ್ಸರ್ ಬರಿಸುತ್ತದೆ. ಇಂತಹ ಅಪಾಯಗಳನ್ನು ಒಪ್ಪಿಕೊಳ್ಳಲಾಗುವುದಿಲ್ಲ. ಆದ್ದರಿಂದ ಇತರ ಇಂಧನ ಶಕ್ತಿಗಳನ್ನು ನಾವು ಸುರಕ್ಷಿತಗೊಳಿಸಬೇಕು. ನಾವು ಕಲ್ಲಿದ್ದಲು ಕೈಗಾರಿಕೆಯನ್ನೂ ಕೂಡಾ ಸುರಕ್ಷಿತಗೊಳಿಸಬಹುದಾಗಿದೆ. ಯುನೈಟೆಡ್ ಸ್ಟೇಟ್ಸ್‌ನಲ್ಲಿ ಒಂದು ಕಲ್ಲಿದ್ದಲು ಸ್ಥಾವರವಿದೆ, ಇದು ಸುರಕ್ಷಿತವಾಗಿದೆಯೆಂದು ಹೇಳಬಹುದಾಗಿದೆ.

ಹೊಸ ತಾಂತ್ರಿಕತೆಗಳಿಂದ ಅನೇಕ ಸಾಧ್ಯತೆಗಳಿವೆ. ಆದರೆ ಬುದ್ಧಿವಂತಿಕೆಯಿಂದ ಅವುಗಳನ್ನು ಬಳಸಬೇಕಾಗಿದೆ. 'ಮೈಕ್ರೋಚಿಪ್' ನಮ್ಮ ಬದುಕನ್ನು ಅಲುಗಾಡಿಸುವ ಬಗ್ಗೆ ಮೂರನೇ ಜಗತ್ತಿನಲ್ಲಿ ಹಾಗೂ ಇತರ ದೇಶಗಳಲ್ಲೂ ಜಾಗರೂಕರಾಗಬೇಕಿದೆ. ಏಕೆಂದರೆ ಈಗ ಕಂಪ್ಯೂಟರ್‌ನಿಂದ ಅಪಾಯಗಳೇ ಹೆಚ್ಚಾಗುತ್ತಿವೆ. ಕಂಪ್ಯೂಟರ್ ಇರುವುದು ನಮಗೆ ಸಹಾಯ ಮಾಡಲಿಕ್ಕಾಗಿ. ಆದರೆ ಕೆಲವು ದೇಶಗಳು ಈ ಅಭಿವೃದ್ಧಿಯತ್ತಲೇ ಬಲವಾಗಿ ಸಾಗುತ್ತಿರುವುದರಿಂದ ವ್ಯಕ್ತಿಯನ್ನು ಇವು ರೋಬೋಟ್ ಆಗಿ ಪರಿವರ್ತಿಸುವ ಸಾಧ್ಯತೆಗಳೇ ಹೆಚ್ಚು.

ನನಗೆನ್ನಿಸುವುದೆಂದರೆ ನಮ್ಮ ಟೀಕಾತ್ಮಕ ದೃಷ್ಟಿಕೋನವಾಗಲೀ ಅಥವಾ ನಾವೆಣಿಸುವ ಮಾದರಿಯಾಗಲೀ ಎಲ್ಲಿಯೂ ಇಲ್ಲ. ನಾವೆಣಿಸುವಂತೆ ನಾವು ಹೊಸ ದಿಕ್ಕಿನತ್ತ ಚಲಿಸಬೇಕಿದೆ. ಇದರಲ್ಲಿ ಪರಿಸರ, ಉದ್ಯೋಗ, ಸಾಮಾಜಿಕ ನ್ಯಾಯ, ಶಾಂತಿ ಎಲ್ಲಾ ಒಂದಾಗಿದೆ. ಯಾವ ಸಮಾಜ ಮೂರನೇ ಜಗತ್ತನ್ನು ಶೋಷಿಸುತ್ತದೋ - ಅಂದರೆ ಕಚ್ಚಾ ವಸ್ತು ತೆಗೆದುಕೊಳ್ಳುವುದು, ಆಸ್ಟ್ರೇಲಿಯಾದಿಂದ ಯುರೇನಿಯಂ, ಟಿಬೇಟ್‌ನಿಂದ ಯುರೇನಿಯಂ ತೆಗೆದುಕೊಳ್ಳುವುದು - ಇಂತಹ ಸಮಾಜ ಹಿಂಸಾತ್ಮಕವಾಗಿ ವರ್ತಿಸುತ್ತದೆ. ಏಕೆಂದರೆ ಇದು ಸಂಪನ್ಮೂಲಗಳನ್ನು ತೆಗೆದುಕೊಂಡು ಬಿಡುತ್ತದೆ. ಅದು ಸ್ವಾವಲಂಬಿಯಾಗಿರುವುದಿಲ್ಲ. ನಾನು ಯೋಚಿಸುವುದೆಂದರೆ ನಾವು ಮೃದು ತಾಂತ್ರಿಕತೆಯೆಡೆಗೆ ತಿರುಗಬೇಕು. ಅದು ಪರಿಸರಕ್ಕೆ ಉತ್ತರವಾಗುತ್ತದೆ. ಇದರ ಅರ್ಥ ನೀವು 'ಬಲ'ವನ್ನು ಉಪಯೋಗಿಸುವುದಿಲ್ಲ. ನೀವು ಒತ್ತಡ - ಆರ್ಥಿಕ ಒತ್ತಡವನ್ನು ಇತರ ದೇಶಗಳ ಮೇಲೆ ಪ್ರಯೋಗಿಸುವುದಿಲ್ಲ. ಪಾಶ್ಚಿಮಾತ್ಯ ಜಗತ್ತು ಈ ದೇಶಗಳಿಗೆ ಸಾಕಷ್ಟು ಅಪಾಯವನ್ನು ಮಾಡಿದೆ. ನಾರ್ವೇಜಿಯದ ಪ್ರಧಾನಮಂತ್ರಿಯವರ 'ದಿ ಬ್ರಂಡ್ಟ್' ವರದಿ (ಬ್ರಂಡ್ಟ್-ಉತ್ತರ-ದಕ್ಷಿಣ ವರದಿ) ಮತ್ತು ಬ್ರಂಡ್ಟ್‌ಲ್ಯಾಂಡ್ ವರದಿ ನಾವು ತಪ್ಪುಗಳನ್ನು ಸ್ಪಷ್ಟವಾಗಿ ಹಾಗೂ ನಾಟಕೀಯವಾಗಿ ಮಾಡಿದ್ದೇವೆ ಎಂಬುದನ್ನು ತೋರಿಸುತ್ತದೆ. ಪಾಶ್ಚಿಮಾತ್ಯ ದೇಶಗಳು ತಾವು ಮೂರನೇ ಜಗತ್ತಿಗೆ ಮಾಡುತ್ತಿರುವ ಸಹಾಯವನ್ನು ಟೀಕಾತ್ಮಕವಾಗಿ ನೋಡುವುದನ್ನು ಕಲಿಯಬೇಕಾಗಿದೆ; ನಾವು ಅವರಿಗೆ ಸಹಾಯಕ್ಕಿಂತ ಹೆಚ್ಚು ಅಪಾಯಗಳನ್ನೇ ಮಾಡಿದ್ದೇವೆ.

ಪ್ರಶ್ನೆ : ಗ್ರೀನ್ ಪಕ್ಷದ ನಾಯಕರೊಬ್ಬರು ಕೆಲವು ಸಮಯದ ಹಿಂದೆ ಇಕಾಲಜಿ ಎಂದರೆ ಫೆಮಿನಿಸಂ, ಫೆಮಿನಿಸಂ ಎಂದರೆ ಇಕಾಲಜಿ ಎಂದಿದ್ದರು, ಇದನ್ನು ವಿವರಿಸುತ್ತೀರಾ?

ಪಿ. ಕೆ. : 'ಫೆಮಿನಿಸಂ' ಎಂದರೆ ಇಕಾಲಜಿ, ಇಕಾಲಜಿ ಎಂದರೆ ಫೆಮಿನಿಸಂ. ಅವೆರಡೂ ಒಂದಾಗಿಯೇ ಇವೆ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಇಕಾಲಜಿ ವಾದದ ಸಮಾಜದಲ್ಲಿ ನೀವು ಶ್ರೇಣೀಕೃತ ವ್ಯವಸ್ಥೆಯಿಂದ ದೂರ ಹೋಗುತ್ತೀರಿ, ಶೋಷಿತ ರಚನೆಗಳಿಂದ ದೂರ ಹೋಗುತ್ತೀರಿ ಹಾಗೂ ಪಿತೃ ಪ್ರಾಧಾನ್ಯತೆಯಿಂದ ದೂರ ಇರುತ್ತೀರಿ.

ಮಹಿಳೆಯರು ಉತ್ತಮರು ಎಂದು ನಾನು ಹೇಳುವುದಿಲ್ಲ, ನಾನು ಹೇಳುವುದೆಂದರೆ ಪುರುಷರು 2,000 ವರ್ಷಗಳಿಂದ ಅಧಿಕಾರ ಹೊಂದಿದ್ದಾರೆ. ಅವರು ಅಧಿಕಾರಕ್ಕೆ, ಅವರದೇ ಆದ ಅಧಿಕಾರದ ವಿಧಾನಕ್ಕೆ ಒಗ್ಗಿ ಹೋಗಿದ್ದಾರೆ. ಮಹಿಳೆಯರನ್ನು ಯಾವಾಗಲೂ ಅಧಿಕಾರದಿಂದ ಆಚೆ ಇಡಲಾಗಿದೆ. ಆದರೆ ಅವರಿಗೆ ಶಕ್ತಿಯುತವಾದ ಪ್ರಭಾವ ಇದೆ. ಅವರು ಮಕ್ಕಳನ್ನು ಬೆಳೆಸುತ್ತಾರೆ, ಜಗತ್ತನ್ನು ನಾವೀನ್ಯಗೊಳಿಸಬಲ್ಲರು, ಪುರುಷರಿಗೆ ಆರೈಕೆ ಮಾಡಬಲ್ಲರು. ಈ ಪ್ಲಾನೆಟ್‌ನಲ್ಲಿ ಎಲ್ಲವನ್ನೂ ಒಟ್ಟಾಗಿ ಇಡಲು, ಇವರು ಇವೆಲ್ಲವನ್ನೂ ಒಂದು ಸಂಬಂಧದ ರೀತಿಯಲ್ಲಿ ಇಡಲು ಸಹಾಯ ಮಾಡುತ್ತಾರೆ. ಈಗ ಇಕಾಲಜಿಯಲ್ಲಿ ಅವರು ತಮ್ಮ ಪ್ರಭಾವವನ್ನು ಬಲವಾಗಿ ಉಪಯೋಗಿಸಬೇಕಾಗಿದೆ. ಪರಿಸರ ಕಾಳಜಿ ಇರುವ ಪ್ರದೇಶಗಳಿಗೆ ಹೋಗಬೇಕಾಗಿದೆ. ಅಲ್ಲಿ ತಮ್ಮ ಶಕ್ತಿಯನ್ನು, ವಿಷನ್ನನ್ನು, ತಮ್ಮ ಬುದ್ಧಿವಂತಿಕೆಯನ್ನು ಹೆಚ್ಚಾಗಿ ಬಳಸಬೇಕಾಗಿದೆ. ನಾವು ಮತ್ತೆ ಮತ್ತೆ ಹೇಳುವುದೆಂದರೆ ಪುರುಷರು ಮತ್ತು ಸ್ತ್ರೀಯರು ಒಬ್ಬರಿಂದೊಬ್ಬರು ಕಲಿಯಬೇಕಾಗಿದೆ. ಪುರುಷರು ಭಾವನಾತ್ಮಕರಾಗಬೇಕಾಗುತ್ತದೆ,

ಕಣ್ಣೀರು ತಡೆಹಿಡಿಯಬಾರದಾಗುತ್ತದೆ, ಹಾಗೆಯೇ ಮಹಿಳೆಯರು ಕೆಲವು ಸಂದರ್ಭಗಳಲ್ಲಿ ವಿಚಾರವಾದಿಗಳಾಗಿ ಇರಬೇಕಾಗುತ್ತದೆ. ಏಕೆಂದರೆ ಪುರುಷರು ಹಾಗೂ ಸ್ತ್ರೀಯರು ಇಬ್ಬರೂ ಪುರುಷತ್ವ ಹಾಗೂ ಸ್ತ್ರೀತ್ವದ ಮೌಲ್ಯಗಳನ್ನು ಹೊಂದಿದ್ದಾರೆ. ನೀವು ಇವುಗಳಲ್ಲಿ ಬಾಂಧವ್ಯದಿಂದ ಬದುಕಿದರೆ - ಅದು ಇಕಾಲಜಿಯ ಭವಿಷ್ಯ ಎಂದು ನಾನು ಭಾವಿಸುತ್ತೇನೆ. ಅಂದರೆ ಸ್ತ್ರೀವಾದ ಇದನ್ನು ತಳಹದಿಯಾಗಿ ಇಟ್ಟುಕೊಳ್ಳುತ್ತದೆ. ಆ ಸಮಾಜದಲ್ಲಿ ಶ್ರೇಣೀಕೃತ ವ್ಯವಸ್ಥೆಯಿಲ್ಲದ ಒಂದು ಮನುಷ್ಯ ಕುಲವಿರುತ್ತದೆ. ಅಲ್ಲಿ ಒಬ್ಬರ ಮೇಲೆ ಇನ್ನೊಬ್ಬರು ಒತ್ತಡ ಬಳಸುವುದಿಲ್ಲ. ಪುರುಷ ಸ್ತ್ರೀಯನ್ನು ಅಥವಾ ಸ್ತ್ರೀ-ಪುರುಷನನ್ನು ಶೋಷಿಸುವುದಿಲ್ಲ. ಮಹಿಳೆ ಹಾಗೂ ಮಕ್ಕಳು ಅನೇಕ ವರ್ಷಗಳಿಂದ ಶೋಷಿತರಾಗಿದ್ದಾರೆ, ವೈಯಕ್ತಿಕವಾಗಿ ಪುರುಷರಿಂದ ಹಾಗೂ ಸಮಾಜದಿಂದ. ಅವರು ಬರಿಯ ಸಮಾಜದಿಂದ ಮಾತ್ರ ಹಿಂಸೆಯನ್ನು ಅನುಭವಿಸಿಲ್ಲ, ಪುರುಷರಿಂದಲೂ ಹಿಂಸೆಯನ್ನು ಅನುಭವಿಸಿದ್ದಾರೆ. ಈ ಜಗತ್ತಿನಲ್ಲಿ ಬಹುತೇಕ ಹೆಂಗಸರು ರಾತ್ರಿಯ ಹೊತ್ತಿನಲ್ಲಿ ಒಂಟಿಯಾಗಿ ದಾರಿಯಲ್ಲಿ ನಡೆಯಲು ಸಾಧ್ಯವಿಲ್ಲ. ಇದನ್ನು ಹಕ್ಕಾಗಿ ನಾನು ಪಡೆಯಬೇಕಾಗಿದೆ. ರಾತ್ರಿ ಒಂಟಿಯಾಗಿ ನಡೆಯಲು ಸಾಧ್ಯವಾಗಬೇಕಿದೆ. ಹೆಂಗಸರು ಹಿಂಸೆಯ ಭಯವಿಲ್ಲದೇ ರಾತ್ರಿ ಓಡಾಡುವ ಹಕ್ಕನ್ನು ಪಡೆಯುವವರೆಗೂ, ಸ್ತ್ರೀವಾದಿ ಸಮಾಜ ಅಸ್ತಿತ್ವದಲ್ಲಿ ಇರುವುದು ಸಾಧ್ಯವಿಲ್ಲ. ನನ್ನ ವಿಚಾರವೆಂದರೆ ನೀನು ಇಕಾಲಜಿಯನ್ನು ಫೆಮಿನಿಸಂನಿಂದ ಪ್ರತ್ಯೇಕಿಸುವುದು ಸಾಧ್ಯವಿಲ್ಲ.

ಪ್ರಶ್ನೆ : 'ಗ್ರೀನ್ ಪಕ್ಷ'ದ ಒಳಗಡೆಯೇ ಗರ್ಭಪಾತದ ಬಗ್ಗೆಗಿನ ನಿಲುವು ವಿರೋಧಾತ್ಮಕವಾಗಿದೆ. ಅಲ್ಲಿ ಎರಡು ಭಿನ್ನ ನಿಲುವುಗಳು ಇವೆ. ಪಕ್ಷಗಳು ಈ ರೀತಿಯ ಭಿನ್ನ ನಿಲುವುಗಳನ್ನು ತೆಗೆದುಕೊಳ್ಳುವ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಪಿ. ಕೆ. : ನಿಜವೆಂದರೆ 'ಗ್ರೀನ್ ಪಕ್ಷ'ದ ಒಳಗಡೆ ಬಹುಮತದಿಂದ ಗರ್ಭಪಾತದಂತಹ ಸಾವು/ಬದುಕಿನ ಪ್ರಶ್ನೆ ನಿರ್ಧರಿತವಾಗುವುದಾದರೆ ಅಲ್ಪ ಸಂಖ್ಯಾತರ ನಿಲುವನ್ನು ಕಾರ್ಯಕ್ರಮದಲ್ಲಿ ಪ್ರಕಟಿಸಬೇಕು. ಅಲ್ಪ ಸಂಖ್ಯಾತರ ಅಭಿಪ್ರಾಯ/ನಿಲುವನ್ನು ಈ ಮೂಲಕ ನಾವು ರಕ್ಷಿಸುತ್ತೇವೆ. ಗರ್ಭಪಾತದ ಸಮಸ್ಯೆಗೆ ಸಂಬಂಧಿಸಿದಂತೆ, ಗ್ರೀನ್ ಪಕ್ಷವು ಒಂದು ಒಳ್ಳೆಯ ನಿರ್ಧಾರಕ್ಕೆ ಬಂದಿದೆ. ಒಂದು ಕಡೆ ಗರ್ಭಪಾತ ಒಪ್ಪಿತವಾಗದ್ದು ಎಂದು ಹೇಳುತ್ತೇವೆ. ಏಕೆಂದರೆ ಅದು ಜೀವಹರಣ ಮಾಡಿದಂತೆ. ನೀವು ಧಾರ್ಮಿಕ ಭಾವನೆ ಉಳ್ಳವರೋ ಅಲ್ಲವೋ - ಆದಾಗ್ಯೂ ಬದುಕು ಗರ್ಭದಲ್ಲಿ ಬೆಳೆಯುತ್ತದೆ. ಇನ್ನೊಂದು ಕಡೆ ಸಮಾಜವು ಮಕ್ಕಳಿಗೆ ವಿರೋಧವಾಗಿದೆ, ಮಕ್ಕಳನ್ನು ಬೆಳೆಸುವ ಬಗ್ಗೆ ಅಷ್ಟೊಂದು ವಿರೋಧಾತ್ಮಕವಾಗಿದೆ. ನಿಜವೆಂದರೆ ಮಕ್ಕಳನ್ನು ಬೆಳೆಸುವುದಕ್ಕಾಗಿ ಹೆಂಗಸರನ್ನು ಆಗಾಗ್ಗೆ ಬಳಸಿಕೊಳ್ಳಲಾಗುತ್ತಿದೆ. ನೀವು ಲ್ಯಾಟಿನ್ ಅಮೇರಿಕ ದೇಶಗಳ ಕಡೆಗೆ ನೋಡಿ. ಕ್ಯಾಥೊಲಿಕ್ ಚರ್ಚ್ ಈ ಬಗ್ಗೆ ವಿಚಿತ್ರ ಯೋಜನೆ ಹೊಂದಿದೆ. ಈ ಯೋಜನೆ/ಪಾಲಿಸಿಯಿಂದ ಇದು ಮಾಡುತ್ತಿರುವ ಅಪಾಯವನ್ನು ಗಮನಿಸುತ್ತಿಲ್ಲ. ಅನೇಕ ಮಹಿಳೆಯರು ತಮ್ಮನ್ನು ಉಳಿಸಿಕೊಳ್ಳುವುದಕ್ಕಾಗಿ ಮಕ್ಕಳನ್ನು ಬೆಳೆಸುತ್ತಾರೆ. ಅವರು 'ನಂಬರ್'ನಂತೆ ಬೆಳೆಯುತ್ತಾರೆ. ಈ ಬಗ್ಗೆ ಮಹಿಳೆಯದೇ ಕೊನೆಯದಾದ ಹಕ್ಕಾಗಿರಬೇಕು ಎಂಬ ನಿಲುವನ್ನು ನಾವು ತೆಗೆದುಕೊಳ್ಳುತ್ತೇವೆ. ಮಗು ಬೇಕು/ಬೇಡ ಎಂಬುದನ್ನು ಕೊನೆಯದಾಗಿ ಆಕೆಯೇ ನಿರ್ಧರಿಸಬೇಕು. ಆಗ, ಮಹಿಳೆಯೋರ್ವಳು ಬದುಕನ್ನು ನೀಡುವುದು ತನ್ನ ಹಕ್ಕು ಎಂದು ಬಗೆಯುವುದಾದಲ್ಲಿ, ಆಕೆ ಆ ಮಗುವಿನ ಜವಾಬ್ದಾರಿ ನಿರ್ವಹಿಸಬೇಕು. ಹಾಗೆ ಮಾಡಲು, ಜವಾಬ್ದಾರಿ ನಿರ್ವಹಿಸಲು ಆಕೆಗೆ ಸಾಧ್ಯವಾಗದಿದ್ದಲ್ಲಿ ಆಕೆಗೆ ಎಲ್ಲಾ ರೀತಿಯ ಮಾಹಿತಿಗಳೂ ಸಿಕ್ಕಬೇಕು. ಮಗು ಬೇಡವಾದಲ್ಲಿ ಕೊಠಡಿಯೊಂದರಲ್ಲಿ ಹೆಂಗಸೋರ್ವಳಿಂದ ಗರ್ಭಪಾತ ಮಾಡಿಸಿಕೊಳ್ಳುವಂತಹ ಸ್ಥಿತಿ ಆಕೆಯದಾಗಬಾರದು. ಆಕೆಗೆ ಕುಟುಂಬ ಯೋಜನೆಯ ಸವಲತ್ತುಗಳು ದಕ್ಕುವಂತಿರಬೇಕು. ವೈದ್ಯಕೀಯ ಸವಲತ್ತುಗಳು ದಕ್ಕುವಂತಿರಬೇಕು. ಆಕೆಗೆ ಒಂದು ಪರ್ಯಾಯ ವ್ಯವಸ್ಥೆ ಇರಬೇಕು ಹಾಗೂ ಸಹಾಯ ಸಿಗುವಂತಿರಬೇಕು.

ಅಂದರೆ ಗರ್ಭಪಾತದಂತಹ ಸಂದರ್ಭದಲ್ಲಿ - ನಿಮ್ಮ ಬದುಕನ್ನು ನೀವು ಕೈಗೆ ತೆಗೆದುಕೊಳ್ಳುವುದಾದಲ್ಲಿ, ನಿಮ್ಮ ಹಕ್ಕು ಎಂದು ಹೇಳುವುದಾದಲ್ಲಿ ಇದರ ಇನ್ನೊಂದು ಅರ್ಥ ದತ್ತು ತೆಗೆದುಕೊಳ್ಳುವುದು ಸುಲಭವಾಗಿ ಸಾಧ್ಯವಾಗಬೇಕು. ದತ್ತು ಸಂಸ್ಥೆಗಳು ಮಕ್ಕಳ ದತ್ತು ತೆಗೆದುಕೊಳ್ಳುವಿಕೆಯನ್ನು ಕಷ್ಟ ಸಾಧ್ಯವಾಗಿಸುತ್ತಿವೆ. ಅಂದರೆ ಕುಟುಂಬ ಯೋಜನೆ ಇರಬೇಕು, ಅದು ರಕ್ಷಿತವಾದ ಹಾಗೂ ನೈಸರ್ಗಿಕ ರೀತಿಯ ಕುಟುಂಬ ಯೋಜನೆ ಆಗಿರಬೇಕು. ಯಾಕೆ ಮಹಿಳೆಯರೇ ಜವಾಬ್ದಾರಿ ತೆಗೆದುಕೊಳ್ಳಬೇಕು? ಯಾಕೆ ಪುರುಷರು ಜವಾಬ್ದಾರಿ ತೆಗೆದುಕೊಳ್ಳುವುದಿಲ್ಲ. ಬಹುತೇಕ ಪುರುಷರು ಉದರ ಹರಣ ಕ್ರಿಯೆಯ ಬಗ್ಗೆ ಮಾತನಾಡುವುದೇ ಇಲ್ಲ. ಬಹುತೇಕ ಗಂಡಸರು ಗುಳಿಗೆ ನುಂಗುವ ಬಗ್ಗೆ ಮಾತನಾಡುವುದೇ ಇಲ್ಲ. ಮಹಿಳೆಯರೇ ಯಾವಾಗಲೂ ಔಷದ ಕೈಗಾರಿಕೆಗಳಿಗೆ 'ಗಿನ್‌ಪಿಗ್'ಗಳಾಗಿದ್ದಾರೆ. ಗುಳಿಗೆ ತೆಗೆದುಕೊಳ್ಳುವ ಹೆಂಗಸರ ಮೇಲೆ ಪುರುಷರು ತಮ್ಮ ಲೈಂಗಿಕತೆಯನ್ನು ತಳಹದಿಯಾಗಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ನಾನು ಒಪ್ಪುವುದಿಲ್ಲ. ಮಹಿಳೆಯೇ ಈ ಬಗ್ಗೆ ಕಾಳಜಿ ವಹಿಸಬೇಕು ಎಂದು ಹೇಳುವುದು ಹೆಚ್ಚು ಶೋಷಣಾತ್ಮಕ ಸಂಬಂಧವೆಂದು ನಾನು ಎಣಿಸುತ್ತೇನೆ. ಲೈಂಗಿಕ ಪ್ರಶ್ನೆ ಇಂದು ರಾಜಕೀಯ ಪ್ರಶ್ನೆಯಾಗಿ ಉತ್ತರಿಸಲ್ಪಡಬೇಕಾಗಿದೆ. ಏಕೆಂದರೆ ಪುರುಷರು ಸ್ತ್ರೀಯರಿಗಿಂತ ಭಿನ್ನ ಅಭಿಪ್ರಾಯಗಳನ್ನು ಹೊಂದಿರುತ್ತಾರೆ.

ಹಾಗಾಗಿ ಇದು ಒಂದು ಮನ ತಟ್ಟುವ ಸಮಸ್ಯೆಯಾಗಿದೆ. ಗ್ರೀನ್ ಪಕ್ಷ ಒಂದು ತೀರ್ಮಾನವನ್ನು ಪಾಲಿಸುತ್ತದೆ. ಗರ್ಭಪಾತ ಮಾಡಿಸುವ ಮಹಿಳೆಯೋರ್ವಳನ್ನು ಹಂತಕಿ ಎಂತಲೋ ಅಥವಾ ಕಾನೂನು ಮುರಿದವಳು ಎಂಬ ರೀತಿಯಲ್ಲಿ ನೋಡಬಾರದೆಂದು ನಾವು ಹೇಳಿದ್ದೇವೆ. ಕಾನೂನಿನ ಭಾಗವಾಗಿರದ ಪುರುಷರು ಈ ಸಮಸ್ಯೆಯಲ್ಲಿ ಸಮಾನವಾದ ಜವಾಬ್ದಾರಿಯನ್ನು ಹೊಂದಿದ್ದಾರೆ. ಹಾಗಾಗಿ ಅವರನ್ನೂ ಜವಾಬ್ದಾರಿಯುತರನ್ನಾಗಿಸಬೇಕು. ನಾವು ಅಪೇಕ್ಷಿಸುವ ಸಮಾಜ ಅಹಿಂಸಾತ್ಮಕವಾಗಿ ಮಕ್ಕಳನ್ನು ಬೆಳೆಸಬೇಕು, ಮಕ್ಕಳನ್ನು ಪಡೆಯುವುದನ್ನು ಇಚ್ಛಿಸುವಂತಿರಬೇಕು ಮತ್ತು ಉತ್ತಮವಾಗಿರುವ ಅಭಿವೃದ್ಧಿಯನ್ನು ನೀಡಬೇಕು. ಕ್ಯಾಥೊಲಿಕ್ ಚರ್ಚ್ ಹುಟ್ಟದಿರುವ ಮಗುವಿನ ಬಗ್ಗೆ

ಯೋಚಿಸುವುದು ಸರಿ, ಹಾಗೆಯೇ ಹುಟ್ಟಿರುವ ಬದುಕಿನ ಬಗ್ಗೆಯೂ ಯೋಚಿಸಬೇಕು. ಬ್ರೆಜಿಲ್‌ನಲ್ಲಿ ಒಬ್ಬ ತಾಯಿ 16 ಜನ ಮಕ್ಕಳನ್ನು ಹೊಂದಿದ್ದರೆ, ಧಾರ್ಮಿಕ ಕಾರಣಕ್ಕಾಗಿ ಆಕೆ ಹೀಗೆ ಮಾಡಿದ್ದರೆ, ಆ ಮಕ್ಕಳು ಭಿಕ್ಷೆಗೆ ಹೋಗುವುದಕ್ಕಾಗಿಯೇ ತಮ್ಮ ತೋಳುಗಳನ್ನು ಕತ್ತರಿಸಿಕೊಳ್ಳುವಂತಾದರೆ, ಅಥವಾ ಮಕ್ಕಳು ಒಬ್ಬೊಬ್ಬರಾಗಿ ಸಾಯುತ್ತಿದ್ದರೆ ಅದು ಆ ಮಕ್ಕಳಿಗೆ ಇರುವ ಉತ್ತಮ ಬದುಕಲ್ಲ. ಹಾಗಾಗಿ ಕ್ಯಾಥೊಲಿಕ್ ಚರ್ಚ್ ಯೋಜನೆಯಂತಹ ದೊಡ್ಡ ಜವಾಬ್ದಾರಿ ಹೊಂದಿರುವುದಾದಲ್ಲಿ - ಹೆಂಗಸರು ಒಪ್ಪಿತರಾಗುವಂತೆ, ಅವರು ಬದುಕನ್ನು ಮುಂದುವರಿಸುವಂತೆ ಹಾಗೂ ಅವರಾಗಿಯೇ ನಿರ್ಧರಿಸುವಂತಹ ಜವಾಬ್ದಾರಿಯನ್ನೂ ನೋಡಿಕೊಳ್ಳಬೇಕಾಗುತ್ತದೆ.

ನನಗೆ ವೈಯಕ್ತಿಕವಾಗಿ ಅನ್ನಿಸುವುದೇನೆಂದರೆ - ಗರ್ಭಪಾತವೆಂದರೆ ಕುಟುಂಬ ಯೋಜನೆಯಲ್ಲ. ಯಾರಾದರೂ ಇದನ್ನು ಹೇಳಿದರೆ ಇದು ನೈತಿಕವಾಗಿ ತಪ್ಪಾಗುತ್ತದೆ. ಗರ್ಭಪಾತ ಮಾಡಿದ ಹೆಂಗಸರನ್ನು ನೀವು ಅಪರಾಧಿಗಳು ಎಂದು ಶಿಕ್ಷಿಸಲು ಸಾಧ್ಯವಿಲ್ಲ. ಅವರಿಗೆ 'ಆಯ್ಕೆ' ನೀಡಬೇಕು. ಅತ್ಯುತ್ತಮ ವೈದ್ಯಕೀಯ ಸವಲತ್ತುಗಳನ್ನೂ ಸಹ ಅವರಿಗೆ ನೀಡಬೇಕು.

ಪ್ರ : ಭಾರತದ ಪರಿಸರವಾದಿ ಕಾರ್ಯಕರ್ತರು - ವಿಶೇಷವಾಗಿ ಕೇರಳದಲ್ಲಿ ಚರ್ಚೆಯ ಒಂದು ವಿಚಾರವೆಂದರೆ, ಸಣ್ಣ ಗುಂಪುಗಳು, ಸಣ್ಣ ಪರಿಸರವಾದಿ ಗುಂಪುಗಳು - ದೊಡ್ಡ ದೊಡ್ಡ ಜನಸಂಘಟನೆಯ ಚಳುವಳಿಗಿಂತ ಉತ್ತಮ ಬದಲಾವಣೆಗಳನ್ನು ತರಬಲ್ಲವು ಎಂಬುದು. ಬ್ಯಾರೋರವರ ಹೇಳಿಕೆಯಲ್ಲಿ ಇದನ್ನು ನಾನು ಕಂಡಿದ್ದೇನೆ. ಅವರು ಇಂತಹದನ್ನು ಬರೆದಿದ್ದಾರೆ. ಅವರಿಗೆ ಪಕ್ಷದ ಬಗ್ಗೆ ಭ್ರಮನಿರಸನವಾಗಿದೆ, ಸಂಸತ್ತಿನ ಬಗ್ಗೆ ಭ್ರಮನಿರಸನವಾಗಿದೆ, ಗ್ರೀನ್ ಪಕ್ಷ ಚುನಾವಣೆಯಲ್ಲಿ ಭಾಗವಹಿಸುತ್ತಿರುವುದರ ಬಗ್ಗೆ ಭ್ರಮನಿರಸನವಾಗಿದೆ. ಕಳೆದ ಕೆಲವು ವರ್ಷಗಳಲ್ಲಿ ಗ್ರೀನ್ ಪಕ್ಷದ ಬೆಳವಣಿಗೆಯನ್ನು ಗಮನಿಸಿದಾಗ - ನನಗೆ ಅನ್ನಿಸುತ್ತದೆ - ಸಣ್ಣ ಸಣ್ಣ ಗುಂಪುಗಳು ಹೆಚ್ಚು ನಿಖರವಾಗಿ, ಹೆಚ್ಚು ಸ್ಪಷ್ಟವಾಗಿ ಸಮಸ್ಯೆಗಳ ಎತ್ತಬಲ್ಲವು, ಕೆಲಸ ಮಾಡಬಲ್ಲವು ಎಂದು ಈ ಬಗ್ಗೆ ನಿಮ್ಮ ವಿಚಾರವೇನು?

ಪಿ. ಕೆ. : ರೂಥಿ ಬ್ಯಾರೋರವರಿಗೆ ಗ್ರೀನ್ ಪಕ್ಷದ ಬಗ್ಗೆ ಇರುವ ಅತೃಪ್ತಿಯನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ರೂಥಿ ಬ್ಯಾರೋರವರಿಗೆ ನಾನು ಇದನ್ನು ಅನೇಕ ಸಂದರ್ಭದಲ್ಲಿ ಹೇಳಿದ್ದೇನೆ. ಗ್ರೀನ್ ಪಕ್ಷ ಹೆಚ್ಚು 'ಜರ್ಮನ್' ಆಗಿದೆ. ಹೆಚ್ಚು ಅಸಹನೀಯವಾಗಿದೆ. ಒಬ್ಬರೊಬ್ಬರಿಗೆ ದ್ವೇಷಪೂರಿತವಾಗಿದೆ. ಜರ್ಮನಿಯಲ್ಲಿ ಒಂದು ಪಕ್ಷವಾಗಿ ರೂಪುಗೊಂಡುಬಿಟ್ಟರೆ, ಅವರು ಪಕ್ಷದ ವಿಚಾರಕ್ಕೆ ಚಟದಂತೆ ಅಂಟಿಕೊಂಡು ಬಿಡುತ್ತಾರೆ. ಅವರು ಪಕ್ಷದ ಸೈನಿಕರಾಗಿ ಬಿಡುತ್ತಾರೆ.

ನನ್ನ ದೃಷ್ಟಿಕೋನ ಏನಾಗಿತ್ತೆಂದರೆ ಗ್ರೀನ್ ಪಕ್ಷ - ಗ್ರೀನ್ ಫೀಸ್ ತರಹ ಕೆಲಸ ಮಾಡಬೇಕು ಎಂಬುದು. ಹೆಚ್ಚು ಸಹನೀಯವಾಗಿ ಕೆಲಸ ಮಾಡಬೇಕು. ಕಾರ್ಯಕರ್ತರ ರೀತಿ ಕೆಲಸ ಮಾಡಬೇಕು ಜನ ಒಬ್ಬರನ್ನೊಬ್ಬರು ದೂರ ಸರಿಸುವಂತಾಗಬಾರದು.

ರೂಥಿ ಬ್ಯಾರೋರವರ ಟೀಕೆಯೆಂದರೆ ಪಕ್ಷ ಹೆಚ್ಚು ದೊಡ್ಡದಾಗಿ ಬೆಳೆದಿದೆಯೆಂಬುದು, ಒಳಗೇ ಜಗಳವಾಡುವ ಅನೇಕ ಗುಂಪುಗಳು. ಅವರು ಗ್ರೀನ್ ಪಕ್ಷವನ್ನು ಬಿಡಲು ನಿರ್ಧರಿಸಿದರು. ಅದು ದುರಂತವಾದುದು. ಅವರು ಒಂದು ಚಿಕ್ಕ ಆಧ್ಯಾತ್ಮಿಕ ಗುಂಪು ಕಟ್ಟಿದ್ದಾರೆ, ಅದಕ್ಕಾಗಿ ಕೆಲಸ ಮಾಡುತ್ತಿದ್ದಾರೆ.

ಚಿಕ್ಕ ಗುಂಪುಗಳು ಸಾಕಷ್ಟು ಪ್ರಭಾವ ಬೀರಬಹುದು ಎಂದು ನನಗನ್ನಿಸುತ್ತದೆ. ಇಂದು ಪ್ರಚಲಿತದಲ್ಲಿರುವ ಪಕ್ಷಗಳಿಂದ ಗ್ರೀನ್ ಪಕ್ಷವು ಓಟುಗಳನ್ನು ಕಸಿದುಕೊಳ್ಳಲಾರಂಭಿಸಿದೆ ಎನ್ನುವುದು ಅವರಲ್ಲಿ ದಿಗಿಲು ಹುಟ್ಟಿಸುತ್ತದೆ. ಹಾಗಾಗಿ ಗ್ರೀನ್ ಪಕ್ಷವನ್ನು ಬೆಂಬಲಿಸಬೇಕೆಂದು ನನಗೆನ್ನಿಸುತ್ತದೆ. ಹಾಗಾಗಿಯೇ ನಾನು ಗ್ರೀನ್ ಪಕ್ಷವನ್ನು ಬೆಂಬಲಿಸುತ್ತಿದ್ದೇನೆ. ಈ ಪಕ್ಷವು ಇತರ ಪಕ್ಷಗಳ ಮಿತಿಗಳನ್ನು ತೋರಿಸಿಕೊಟ್ಟಿದೆ. ಯಾರೂ ಎತ್ತಿರದ ಪ್ರಶ್ನೆಗಳನ್ನು ಎತ್ತಿದ್ದಾರೆ. ಅವರು ಪ್ರಜ್ಞೆಯಾಗಿ ಕೆಲಸ ಮಾಡಬಹುದು. ಗುಂಪಿನೊಳಗೆ ನಡೆಯುವುದನ್ನು ಗ್ರೀನ್ ಪಕ್ಷವು ಸಂಸತ್ತಿಗೆ ತೆಗೆದುಕೊಂಡು ಹೋಗಬಲ್ಲ ಪಕ್ಷವಾಗಿದೆ. ಗ್ರೀನ್ ಪಕ್ಷವು ಸಂಸತ್ತಿನೊಳಗೆ ಇಲ್ಲದಿದ್ದರೆ ಅನೇಕ ಪ್ರಶ್ನೆಗಳು ಬಿದ್ದು ಹೋಗುತ್ತವೆ ಹಾಗೂ ಗ್ರೀನ್ ಪಕ್ಷವಲ್ಲದೇ ಬೇರೆಯ ಧ್ವನಿಯೇ ಇಲ್ಲದ ಅನೇಕ ಗುಂಪುಗಳು ತಮ್ಮ ಧ್ವನಿಯನ್ನೇ ಕಳೆದುಕೊಂಡು ಬಿಡುತ್ತವೆ.

ಒಂದು ಕಡೆ ನಮ್ಮ ಪಕ್ಷದ ರಚನೆಯ ಬಗ್ಗೆ ನನಗೆ ಟೀಕೆಗಳಿವೆ. ನಾವು ಕಾರ್ಯವೆಸಗುವ ರೀತಿಯ ಬಗ್ಗೆ ಕೂಡಾ ಆದರೆ ನಾವು ಇತರ ಸ್ಥಳಗಳ ಗ್ರೀನ್ ಪಕ್ಷಕ್ಕಿಂತ ಉತ್ತಮರಾಗಿದ್ದೇವೆ. 'ಮಾದರಿ'ಯಾಗಿ ಅಲ್ಲದಿದ್ದರೂ ನಾವು ನಿಜವಾದ, ಅಹಿಂಸಾತ್ಮಕವಾಗಿ ಹಾಗೂ ಸಬಲ ವಿರೋಧ ಗುಂಪಾಗಿ ಬೆಳೆಯುತ್ತಿದ್ದೇವೆ. ರೂಥಿ ಬ್ಯಾರೋರವರ ಗ್ರೀನ್ ಪಕ್ಷದ ಬಗೆಗಿನ ಅತೃಪ್ತಿ - ಗ್ರೀನ್ ಪಕ್ಷದ ಒಳಗಿದ್ದ ಅನೇಕ ಏರುಪೇರುಗಳ ಸಂದರ್ಭದಲ್ಲಿ ನಡೆದದ್ದು. ನೀವು ಇತರೇ ಗ್ರೀನ್ ಪಕ್ಷಗಳ ಜಯವನ್ನು ಗಮನಿಸಿದರೆ, ಗ್ರೀನ್ ಪಕ್ಷದೊಳಗೇ ಸಾಕಷ್ಟು ಸ್ಪರ್ಧೆ ಇದೆ ಎಂಬುದನ್ನು ನೀವು ಗಮನಿಸಬಹುದಾಗಿದೆ. ಗ್ರೀನ್ ಪೀಸ್ ಸಣ್ಣ ಗುಂಪು. ಆದಾಗ್ಯೂ ಗಣ್ಯ ಕಾರ್ಯ ಮಾಡಿದೆ. ಇಂದಿಗೂ ಕೂಡಾ ಗ್ರಾಸ್ ರೂಟ್ ಸಂಘಟನೆಯಾಗಿಯೇ ಉಳಿದಿದೆ. ನನ್ನ ವಿಷನ್ ಪ್ರಕಾರ ಗ್ರೀನ್ ಪಕ್ಷವು ಗ್ರೀನ್ ಪೀಸ್‌ತರವೇ ಕೆಲಸ ಮಾಡಬೇಕು. ಅದು ಪಕ್ಷದ ರಚನೆಯ ತರಹ ಆಗಬಾರದು. ನಾಗರೀಕ ಅಸಹಕಾರದ ಕಡೆಗೆಯೇ ಹೆಚ್ಚು ಹೆಚ್ಚು ತಿರುಗಬೇಕು. ಪಕ್ಷದ ರಚನೆಯನ್ನು ಮುಖ್ಯವಾಗಿ ತೆಗೆದುಕೊಳ್ಳಬಾರದು, ಮುಖ್ಯವಾದುದೇನೆಂದರೆ ನೀವು ಏನು ಮಾಡುತ್ತೀರೆಂಬುದು, ಏನು ಕಾರ್ಯಕ್ರಮ ರೂಪಿಸಿಕೊಳ್ಳುತ್ತೀರೆಂಬುದು. ನೀವು ಯಾವ ರಚನೆ ಹೊಂದಿದ್ದೀರಿ ಎಂಬುದಲ್ಲ. ಪಕ್ಷದ ರಚನೆಗಳು - ಒಪ್ಪಿಗೆಯ ಹಂತ, ಅವಿಶ್ವಾಸ ಹಾಗೂ ಪಕ್ಷದ ಒಳಗೇ ಜನರಿಗೆ ಬೇಕಾಗುವ ಅಧಿಕಾರ ಇಂತಹವುಗಳಿಂದಾಗಿ ನಡೆಯಬೇಕಾದ ಕ್ರಿಯೆಗಳಿಗೆ ಹಲವಾರು ಮಿತಿಗಳನ್ನು ಒಡ್ಡುತ್ತವೆ.

ಹಾಗಾಗಿ ನಾವು ಇದನ್ನು ಭಿನ್ನವಾಗಿ ಮಾಡುವುದನ್ನು ಕಲಿಯಬೇಕಾಗಿದೆ. ನಾನು ಹೇಳಿದ ಹಾಗೆ ಪಕ್ಷದ ವಿರೋಧವಾಗಿ ಇರಬೇಕಾಗುತ್ತದೆ. ಬೇರೆಲ್ಲ ಪಕ್ಷಗಳಿಗಿಂತ ಭಿನ್ನವಾಗಿರುವ ಹಾಗೂ ಸಂಸತ್ತಿನಲ್ಲಿ ಅರ್ಥಪೂರ್ಣವಾಗಿ ಮಧ್ಯ ಪ್ರವೇಶಿಕೆ ಮಾಡಬಲ್ಲಂತಹ ಪಕ್ಷ ನನ್ನ ದೃಷ್ಟಿಕೋನವಾಗಿದೆ.

ಪ್ರಶ್ನೆ : 'ಗ್ರೀನ್ ಪಕ್ಷ'ದ ಕೆಲವು ಹೆಗ್ಗಳಿಕೆಗಳನ್ನು ನೀವು ಹಂಚಿಕೊಳ್ಳುತ್ತೀರಾ? ಕೆಲವು ಜಯಶಾಲಿ ಕತೆಗಳನ್ನು? ಗ್ರೀನ್ ಪಕ್ಷ ಕೈಗಾರಿಕಾ ಉತ್ಪಾದನಾ ವಿಭಾಗದಲ್ಲಿ ಬದಲಾವಣೆ ತರುವಲ್ಲಿ ಜಯಶಾಲಿಯಾಗಿದೆ ಎಂದು ನೀವು ಹೇಳಬಲ್ಲಿರಾ?

ಪಿ. ಕೆ. : ಇಂತಿಂತಹ ಕಡೆ ಜಯಶಾಲಿ ಕತೆಗಳಿವೆ ಎಂದು ಹೇಳುವುದು ಕಷ್ಟ. 1983ರಿಂದಲೂ, ಗ್ರೀನ್ ಪಕ್ಷ ಸಂಸತ್ತಿನಲ್ಲಿ ಭಾಗಿಯಾದಾಗಿನಿಂದಲೂ ಹಿಂದೆ ಯಾರೂ ಎತ್ತಲಾಗದಿದ್ದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ಎತ್ತುವಲ್ಲಿ ಜಯಶಾಲಿಯಾಗಿದೆ. ಉದಾಹರಣೆಗೆ ಜೈವಿಕ ಕೃಷಿ, ಜರ್ಮನಿಯ ಮಂತ್ರಿಗಳು ಕೂಡಾ ಗ್ರೀನ್ ಪಕ್ಷ ವ್ಯವಸಾಯದ ಯೋಜನೆಯ ಬಗ್ಗೆ ಒಳ್ಳೆಯ ನಿಲುವು ಹೊಂದಿದೆ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಏಕೆಂದರೆ ಭೂಮಿ ವಿಷಪೂರಿತವಾಗಿದೆ, ಗಾಳಿ ವಿಷಪೂರಿತವಾಗಿದೆ, ಆಹಾರ ವಿಷಪೂರಿತವಾಗಿದೆ. ಹಾಗಾಗಿ ನಾವು ಇದರ ಬಗ್ಗೆ ಮೂಲಭೂತವಾಗಿ ವಿಚಾರ ಮಾಡಬೇಕಾಗಿದೆ.

ಬುಷ್‌ಹೌಸ್‌ನ ಪ್ರಸಿದ್ಧ ಕಲ್ಲಿದ್ದಲು ಪ್ಲ್ಯಾಂಟ್ ನಿಲ್ಲಿಸುವ ಸಂದರ್ಭದಲ್ಲಿ ನಾವು ಹೆದ್ದಾರಿಯೊಂದನ್ನು ಉಂಟು ಮಾಡಿದ್ದೇವೆ. ಹೊಸ ಇಂಧನ ವ್ಯವಸ್ಥೆಯನ್ನು ಅವರು ಪ್ರಾರಂಭಿಸುವುದಾದಲ್ಲಿ ಅದು ಅತ್ಯಂತ ಸುರಕ್ಷಿತವಾಗಿರಬೇಕೆಂದು ನಾವು ಸ್ಪಷ್ಟವಾಗಿ ಕೇಳಿದ್ದೆವು. ಇಂತಹ ವಿಚಾರಗಳಲ್ಲಿ ಒಪ್ಪಂದಗಳನ್ನು ಮಾಡಿಕೊಳ್ಳಲಾಗದು. ನೀವು ಅತ್ಯುತ್ತಮ ಫಿಲ್ಟರ್ ಹಾಗೂ ಅತ್ಯುತ್ತಮ ತಾಂತ್ರಿಕತೆಯನ್ನು ಉಪಯೋಗಿಸಬೇಕಾಗುತ್ತದೆ. ಬುಷ್ ಹೌಸ್ ಈ ರೀತಿಯಾಗಿ ಒಂದು ಸಮಸ್ಯೆಯಾಗಿ ಗ್ರೀನ್ ಪಕ್ಷ ಹೋರಾಡಿತ್ತು. ಗ್ರೀನ್ ಪಕ್ಷ ಹೆಚ್ಚು-ಕಡಿಮೆ ಈ ಸಮಸ್ಯೆಯ ಹೋರಾಟದಲ್ಲಿ ಜಯಶಾಲಿಯಾಗಿತ್ತು. ಆದರೆ ಮೂರು ವಾರದ ನಂತರ ನಮ್ಮನ್ನು ಸಂಸತ್ತಿಗೆ ಕರೆಯಲಾಗಿತ್ತು. ಮತ್ತೆ ಈ ಬಗ್ಗೆ ಓಟಿಗೆ ಹಾಕಿದಾಗ ಈ ವಿಚಾರ ಬಿದ್ದು ಹೋಯಿತು. ಆದರೆ ಗ್ರೀನ್ ಪಕ್ಷದ ನಿಲುವು ಸರಿಯಾದುದು ಎಂಬುದನ್ನು ನಾವು ಸ್ಪಷ್ಟಪಡಿಸಿದ್ದೆವು.

ಕೋರ್ಟಿನ ಅನೇಕ ಕೇಸುಗಳ ಪರಿಸರ ಪ್ರಭಾವದ ಹೇಳಿಕೆಗಳಲ್ಲಿ ನನಗೆ ನಮ್ಮ ನಿಲುವು ಸರಿಯಾದುದು ಎಂದು ಧೃಡಪಟ್ಟಿದೆ. ಎಲ್ಲಿ ಅಣುಶಕ್ತಿ ಸ್ಥಾವರ ಅಥವಾ ವಿಷ ಅನಿಲ ಅಥವಾ ಕೆಮಿಕಲ್ ಪ್ಲ್ಯಾಂಟ್ ಇರುವುದೋ ಅಲ್ಲಿ ಪರಿಸರ ಪ್ರಭಾವದ ಬಗ್ಗೆಗಿನ ಹೇಳಿಕೆ ನೀಡಬೇಕು ಎಂದು ನಾವು ಕೇಳಿದ್ದೆವು. ಆ ಪ್ರದೇಶದಲ್ಲಿ ಬದುಕುವ ಜನರಿಗೆ ಇದರ ಬಗ್ಗೆ ಅರಿವಿರಬೇಕು. ಭಾರತದ ಭೋಪಾಲ್ ಅಥವಾ ಯುರೋಪಿನಲ್ಲಿಯೇ ಆದುದನ್ನು ನೋಡಿದರೆ, ಜನರಿಗೆ ಆ ಕೈಗಾರಿಕೆಗಳು ಎಷ್ಟು ಅಪಾಯಕಾರಿ ಎಂದು ಹೇಳಿರುವುದಿಲ್ಲ ಎಂದು ನಮಗೆ ಅರ್ಥವಾಗಿದೆ. ಮುಖವಾಡ ಹಾಕಿಕೊಳ್ಳುವುದನ್ನಾಗಲೀ ಅಥವಾ ರಕ್ಷಣಾ ಕವಚ, ಬಟ್ಟೆ ಹಾಕಿಕೊಳ್ಳುವುದನ್ನಾಗಲೀ ಕೆಲಸಗಾರರಿಗೆ ಹೇಳಿರುವುದೇ ಇಲ್ಲ. ಇದು ಯುರೋಪಿನ ಬಡ ಭಾಗಗಳಲ್ಲಿ ಪ್ರಾರಂಭವಾಗುತ್ತಿರುವ ಕಾರ್ಖಾನೆಗಳಲ್ಲಿ ಕೂಡಾ ನಡೆಯುತ್ತಿದೆ. ಹಾಗಾಗಿ ಪರಿಸರ ಪ್ರಭಾವದ ಹೇಳಿಕೆಗಳು ಒಂದು ಪ್ರಶ್ನೆಯಾಗಿ, ಸಮಸ್ಯೆಯಾಗಿ ಹೋರಾಟ ನಡೆದಿದೆ.

ನಾವು ಟ್ಯಾಕ್ಸ್ ಬಗ್ಗೆ ಕೂಡಾ ಪ್ರಶ್ನೆ ಎತ್ತಿದ್ದೇವೆ. ಪರಿಸರದ ಟ್ಯಾಕ್ಸ್. ನೀವು ಗಾಳಿ ಅಥವಾ ನೀರು ಅಶುದ್ಧಿಗೊಳಿಸಿದರೆ ಅದಕ್ಕೆ ಟ್ಯಾಕ್ಸ್ ಕಟ್ಟುವುದು, ಇದನ್ನು ಪರಿಸರದ ಟ್ಯಾಕ್ಸ್ ಎಂದು ಕರೆಯಬಹುದಾಗಿದೆ. ಈ ಪ್ರಶ್ನೆಯನ್ನು ಸೋಷಿಯಲ್ ಡೆಮಾಕ್ರಟ್ಸ್ ಕೂಡಾ ತೆಗೆದುಕೊಂಡಿದ್ದಾರೆ.

ಮಿಲಿಟರಿಯ ಒಳರಚನೆಗಳನ್ನು ಬಳಸಿಕೊಂಡು ನಾಗರಿಕ ವಸ್ತುಗಳನ್ನು ಮಾಡುವ ಉತ್ಪಾದನೆಯ ವಿಚಾರ ಕೂಡಾ ಒಂದು ಹೊಸ ಮೈಲಿಗಲ್ಲಾಗಿದೆ. ಅನೇಕ ಕಾರ್ಮಿಕ ಸಂಘಟನೆಗಳು ಈ ರೀತಿಯಾಗಿ ವಾದ ಮಾಡುತ್ತವೆ. ಉದಾ : ಶಸ್ತ್ರಾಸ್ತ್ರ ಉತ್ಪಾದಿಸುವ, ಸೈನಿಕ್ ಟ್ರಕ್ಸ್ ಉತ್ಪಾದಿಸುವ ಕಂಪನಿಗಳು ನಾಗರಿಕ ವಸ್ತುಗಳಾದಂತಹ - ಕಿಡ್ನಿ, ಮೆಷಿನ್ಸ್, ಸ್ಯಾನಿಟರಿ ಟ್ರಕ್ಸ್, ರಕ್ಷಿಸುವ ಹೆಲಿಕಾಪ್ಟರ್ ಕೂಡಾ ಉತ್ಪಾದಿಸಬಹುದು. ಮಿಲಿಟರಿ ಕಾರ್ಖಾನೆಯಲ್ಲೂ ನೀವು ಬಹಳ ಸಂಗತಿಗಳನ್ನು ಮಾಡಬಹುದಾಗಿದೆ, ನೀವು ಉತ್ಪಾದನೆಯನ್ನು ಬದಲಾಯಿಸಬಹುದಾಗಿದೆ.

ನಾವು ತೋರಿಸಿದ ಮುಖ್ಯ ಸಂಗತಿಯೆಂದರೆ ನಿರುದ್ಯೋಗ ಆರ್ಥಿಕ ಬೆಳವಣಿಗೆಗೆ ಸಂಬಂಧಿಸಿದೆ ಎಂದು. ಆರ್ಥಿಕ ಬೆಳವಣಿಗೆ ಮೂರನೇ ಜಗತ್ತಿನ ಶೋಷಣೆಯ ಜೊತೆ ಸಂಬಂಧ ಹೊಂದಿದೆ. ನಮ್ಮ ರೇಡಿಯೇಷನ್ ಸೈರಲ್ಸ್‌ಗಳು ಯುದ್ಧದ ಆಯುಧಗಳಿಗೆ ಸಂಬಂಧಿಸಿವೆ. ಈ ಒಳ ನಿಬಂಧಗಳನ್ನು ನಾವು ತೋರಿಸಿದ್ದೇವೆ. 1983ರಿಂದ ಈ ರೀತಿಯ ಹಲವಾರು ವಿಚಾರಗಳನ್ನು ನಾವು ಕೈಗೆ ಎತ್ತಿಕೊಂಡಿದ್ದೇವೆ.

ಪ್ರಶ್ನೆ : ಪರ್ಯಾಯ ಜೀವನ ಶೈಲಿ ಎತ್ತಿ ಹಿಡಿಯುವಲ್ಲಿ ಎಷ್ಟರಮಟ್ಟಿಗೆ ಗ್ರೀನ್ ಪಕ್ಷ ಜಯಶಾಲಿಯಾಗಿದೆ?

ಗ್ರೀನ್ ಪಕ್ಷದ ಒಳಗಡೆ ಪ್ರತಿಯೊಬ್ಬರೂ ವ್ಯಕ್ತಿಗತರಾಗಿದ್ದಾರೆ ಹಾಗೂ ಪ್ರತಿಯೊಬ್ಬರಿಗೂ ಅವರದೇ ಆದ ಜೀವನ ಶೈಲಿ ಇದೆ. ನಾವು ಯಾವುದಕ್ಕೂ ಒತ್ತಡ ಹಾಕುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದೇವೆ. ನೀವು ಹೀಗೇ ಬದುಕಬೇಕು, ನೀವು ಹೀಗೇ ಉಡುಪು ಧರಿಸಬೇಕು ಎಂಬಂತಹ ಪರಿಸರದ ಸವಾರ್ಥಿಕಾರತ್ವವನ್ನು ನಾವು ಮಾಡುವುದಿಲ್ಲ. (ವಿಡಿಯೋ ರೆಕಾರ್ಡಿಂಗ್‌ನ ಭಾಗ ಇಲ್ಲಿ ಕೆಟ್ಟು ಹೋದುದರಿಂದ ಪೆಟ್ರಾ ಕೆಲ್ಲಿಯ 2 ನಿಮಿಷದ ಮಾತುಗಳು ಇಲ್ಲಿ ಇಲ್ಲ).

ಮಾಂಸ ತಿನ್ನುವಿಕೆಯನ್ನು ಕಡಿತಗೊಳಿಸುವುದು ಅಗತ್ಯ. ಏಕೆಂದರೆ ಪಾಶ್ಚಿಮಾತ್ಯರು ಹೆಚ್ಚು ಮಾಂಸ ತಿನ್ನುತ್ತಾರೆ. ಇದು ಅನಾರೋಗ್ಯಕರವಾದುದು. ನಮ್ಮಲ್ಲಿ ಕೊಲಾಸ್ಟ್ರಾಲ್ ಹೆಚ್ಚಾಗುವುದರಿಂದ ಹೃದಯಾಘಾತದಿಂದ ಸಾಯುತ್ತೇವೆ. ಇದು ನಮಗೆ ಗೊತ್ತು.

ಆದಾಗ್ಯೂ ನಾವು ಮೂರನೇ ಜಗತ್ತಿನಿಂದ E.E.C. ಹಸುಗಳನ್ನು ಮೇಯಿಸಲಿಕ್ಕೆ ಕಾಳುಗಳನ್ನು ಆಮದು ಮಾಡಿಕೊಳ್ಳುತ್ತೇವೆ. ಆದ್ದರಿಂದ ನಾವು ಜಾಸ್ತಿ ಮಾಂಸ ತಿನ್ನಬಹುದಾಗಿದೆ. ನಾವು ಅಲ್ಲಿಯ ಜನರಿಂದ ಕಾಳುಗಳನ್ನು ಕಸಿದುಕೊಳ್ಳುತ್ತೇವೆ. ಇದರಿಂದ ಜೀವನ ಶೈಲಿ ಮುಖ್ಯ ಎಂಬುದನ್ನು ಈ ಮೂಲಕ ತೋರಿಸುತ್ತೇವೆ.

ನಾವು ಸೇವಿಸುವ ಹಾಗೂ ತೆಗೆದುಕೊಳ್ಳುವ ಔಷಧಿಗಳ ಬಗ್ಗೆ ಟೀಕಾತ್ಮಕವಾಗಿರಲು ನಾವು ಪ್ರಯತ್ನಿಸುತ್ತೇವೆ. ಇದರರ್ಥ ಪ್ರತಿಯೊಬ್ಬರು ತಮ್ಮ ಬದುಕಿನ ಶೈಲಿಯ ಬಗ್ಗೆ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಉದಾಹರಣೆಗೆ ದಕ್ಷಿಣ ಆಫ್ರಿಕಾದ ಆಹಾರ ಕೊಳ್ಳುವುದಿಲ್ಲ ಎನ್ನುವುದು ಒಂದು ಮುಖ್ಯ ಸಂಗತಿ. ಆಸ್‌ಬೆಸ್ಟೋಸ್ ವಸ್ತುಗಳನ್ನು ಕೊಳ್ಳುವುದಿಲ್ಲ, ಕ್ಯಾನ್ಸರ್ ಇರುವ ವಸ್ತುಗಳನ್ನು ತೆಗೆದುಕೊಳ್ಳದಿರುವುದು, ಗ್ರಾಹಕರ ಮುಷ್ಕರ ಪ್ರಾರಂಭಿಸುವುದು, ಕೃತಕ ವಸ್ತು ಕೊಂಡುಕೊಳ್ಳದಿರುವುದು, ಮೂರನೇ ಜಗತ್ತಿನಲ್ಲಿ ಮಾಡಿದ ಕಾಟನ್ ಕೊಳ್ಳುವುದು.

ನಮ್ಮ ಬದುಕಿನ ಶೈಲಿಯಿಂದ ರಾಜಕೀಯ ಪ್ರಭಾವವನ್ನು ಉಂಟು ಮಾಡುವ ಅನೇಕ ರೀತಿಗಳು ಇವೆ. ಇವನ್ನು ವೈಯಕ್ತಿಕವಾಗಿಯೇ ಮಾಡಬೇಕಾಗುತ್ತದೆ. ಉತ್ತರಗಳನ್ನು ನೀವಾಗಿಯೇ ಕಂಡುಕೊಳ್ಳಬೇಕಾಗುತ್ತದೆ. ಅದು ಪ್ರಜ್ಞಾವಂತ ಉತ್ತರ. ಜೀವನ ಶೈಲಿ ಬಹಳ ಮುಖ್ಯವಾದುದು. 40,000 ಸಾವಿರ ಮಕ್ಕಳು ಪ್ರತಿನಿತ್ಯ ಸಾಯುತ್ತಿವೆ ಎಂದರೆ, 15 ಮಿಲಿಯನ್ ಸಾಯುತ್ತಾರೆ ಎಂದರೆ ಇದು ನಮ್ಮ ಮಿಲಿಟರಿ ಹಿಡಿತದ ಸಮಸ್ಯೆಯ ಭಾಗ, ನಮ್ಮ ಬಜೆಟ್‌ನ ಭಾಗ. ನಾವು ಯಾವ ಪಾತ್ರ ವಹಿಸಬೇಕು ಎಂಬುದನ್ನು ನಾವು ನೋಡಬೇಕಾಗಿದೆ. ಇದರಲ್ಲಿ ನಾವ್ಯೇಗೆ ಭಾಗಿಗಳು ಎಂಬುದನ್ನು ಗಮನಿಸಬೇಕಾಗಿದೆ. ಶಾಂತಿಯುತ ಜೀವನ ಶೈಲಿಗೆ ನಾವು ಹೇಗೆ ಕೊಡುಗೆ ನೀಡಬಹುದು?... ಇದು ಬಹುಶಃ ಪ್ರತಿಯೊಬ್ಬರೂ ಮಾಡಬೇಕಾದ ಆಯ್ಕೆ. ನೀವು 'ಆಯ್ಕೆ' ಮಾಡಲಿಕ್ಕೆ ಯಾರನ್ನು ಒತ್ತಾಯಿಸಲು ಸಾಧ್ಯವಿಲ್ಲ. ನೀವಾಗಿ ನೀವೇ ಮಾಡಬೇಕು.

ಲೇಖನ ರೂಪ : ನೀಲಾಂಜನ

ಅನುವಾದ : *ಚಂಪಾವತಿ ಹೆಚ್. ಎಸ್.*

ಚುನಾವಣ ಮಾದರಿಯನ್ನು ಬದಲಿಸಬೇಕು

ಚುನಾವಣೆ ಇಂದು ದೇಶದ ಜನರಲ್ಲಿ ಜಿಗುಪ್ಸೆ ತರಿಸಿದೆ. ಚುನಾವಣೆ ಎಂಬುದು ಹಣಬಲದಿಂದ ನಡೆಯುವ ನಾಟಕ. ಇದರ ಸೂತ್ರವು ಹಣವಂತರ ಕೈಯಲ್ಲಿದೆ. ಹಲವು ರೀತಿಯ ಆಮಿಷಗಳಿಂದ ಎಲ್ಲ ದಿಕ್ಕಿನ ಜನರನ್ನೂ ಇವರು ಒಲಿಸಿಕೊಳ್ಳುತ್ತಿದ್ದಾರೆ. ಅಷ್ಟೇ ಸುಳ್ಳಿನ ಪ್ರಣಾಳಿಕೆಗಳನ್ನು ನೀಡುವಲ್ಲಿ ಬುದ್ಧಿವಂತರು. ಎಲ್ಲ ಪಕ್ಷದವರೂ ಮಹಿಳೆಯರ ಪರ ನಮ್ಮ ನಿಲುವು ಎನ್ನುವವರೆ. ಶೇಕಡ 33ರ ಮೀಸಲಾತಿಯ ಕೂಗು. ಮಹಿಳಾ ಅಭ್ಯರ್ಥಿಗಳನ್ನು ತಮ್ಮ ತಮ್ಮ ಪಕ್ಷದ ಅಭ್ಯರ್ಥಿಗಳ ಪಟ್ಟಿಯಲ್ಲಿ ಸೇರಿಸಿ ಸ್ಥಾನ ನೀಡಿದರೆ ಅದು ತನಗೆ ತಾನೇ ಅದರ ಸ್ಥಾನವನ್ನು ತುಂಬಿಕೊಳ್ಳುತ್ತದೆ. ಆದರೆ ಯಾವ ಪಕ್ಷ ತಾನೆ ಈ ಕೆಲಸವನ್ನು ಕಾರ್ಯರೂಪಕ್ಕೆ ತಂದಿದೆ?

ಭ್ರಷ್ಟತೆಯೆ ತುಂಬಿರುವ ಇಂತಹ ಪರಿಸ್ಥಿತಿಯಲ್ಲಿ ಎಲ್ಲಿ ಹೇಗೆ ಸುಧಾರಣೆ ಮಾಡಬೇಕು ಎಂಬುದೇ ಪ್ರಶ್ನೆ.

ಇಂದು ನಮ್ಮಲ್ಲಿ ಪ್ರಚಲಿತವಿರುವ ಚುನಾವಣೆಯ ಮಾದರಿಯನ್ನೇ ಬದಲಿಸಬೇಕಾದ ತುರ್ತು ಇದೆ. ರಾಜಕೀಯ ಅರಾಜಕತೆ ಹೋಗಬೇಕಾಗಿದೆ. ಸ್ಥಿರತೆಯೆಂದರೆ ರಾಜ ಪ್ರಭುತ್ವವಲ್ಲ ಅಮೇರಿಕ ರೀತಿಯ ಪ್ರಜಾಪ್ರಭುತ್ವ ಸ್ವಲ್ಪ ಮಟ್ಟಿಗಾದರೂ ಅಸ್ಥಿರತೆಯನ್ನು ಕಡಿಮೆ ಮಾಡಬಹುದು. ಗ್ರಾಮ ಜೀವನದಲ್ಲೂ ಸೌಖ್ಯವಿರುವಂತೆ ನೋಡಿಕೊಳ್ಳುವ ಸರ್ಕಾರದ ಉಗಮ ಅಗತ್ಯ. ಜನರಲ್ಲಿ ಉದ್ಯೋಗ, ಆಹಾರದ ಕೊರತೆ ಕಡಿಮೆಯಾಗುವಂತೆ ಮಾಡಬೇಕಾಗಿದೆ. ಪ್ರಜಾಪ್ರಭುತ್ವದ ಅರ್ಥವನ್ನು ಮನವರಿಕೆಯಾಗುವಂತೆ ತಿಳಿಸುವ ಕಾರ್ಯಕ್ರಮಗಳು ಆಗಬೇಕು.

ಇಂದು ಹೆಚ್ಚುತ್ತಿರುವ ಜಾತಿ ಆಧಾರಿತ ರಾಜಕಾರಣ ಬಹಳಷ್ಟು ಘರ್ಷಣೆಗಳಿಗೆ ಕಾರಣವಾಗುತ್ತದೆ. ಇಂದು ಧರ್ಮ, ಧರ್ಮಗಳ ನಡುವೆ ಕಾಣುತ್ತಿರುವ ಕೋಮು ಸಂಘರ್ಷವು ಜಾತಿ ಜಾತಿಗಳ ನಡುವೆ ಉಂಟಾದರೆ ಇದಕ್ಕಿಂತ ಭೀಕರವಾದ ಅನಾಹುತಗಳು ಸಂಭವಿಸುತ್ತವೆ. ಇಂತಹ ಸಂಘರ್ಷಗಳನ್ನು ಬರದಂತೆ ತಡೆಯುವ ಮತ್ತು ಅದಕ್ಕಾಗಿ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕಾದ ಅನಿವಾರ್ಯ ಸಂದರ್ಭ ನಮ್ಮ ಮುಂದಿದೆ. ಈ ದಿಕ್ಕಿನಲ್ಲಿ ಪ್ರಗತಿಪರ ಸಂಘಟನೆಗಳು ಹಾಗೂ ಸರ್ಕಾರ ಜಾಗೃತಿವಹಿಸಿ ಹಲವು ಕಾರ್ಯಕ್ರಮಗಳ ಮೂಲಕ ಇಂತಹ ಬೆಳವಣಿಗೆಗೆ ತಡೆಯೊಡ್ಡಬೇಕಾಗಿದೆ.

ಜನರಲ್ಲಿ ಪರಿವರ್ತನೆ ಮತ್ತು ಸಹಕಾರ ಭಾವನೆಗಳನ್ನು ಮೂಡಿಸಬೇಕು. ಪರಿವರ್ತನೆ ತರಲು ಕಾರ್ಯಕ್ರಮಗಳ ಮುಂದಾಳತ್ವ ವಹಿಸುವ ವ್ಯಕ್ತಿಯು ಗಾಂಧಿಯಂತೆ ನಿಷ್ಠೆ, ಧ್ಯೇಯ ಮತ್ತು ಹಟವಾದಿಯಾಗಿರಬೇಕಾಗುತ್ತದೆ. ಜನರಲ್ಲಿ ನಿಷ್ಠೆ ಮತ್ತು ಅನ್ಯಾಯದ ವಿರುದ್ಧ ಹೋರಾಟ ಮಾಡುವ ಧೈರ್ಯ ಮೂಡಿದರೆ ಹಾಗೂ ಕಾನೂನಿನ ಸುವ್ಯವಸ್ಥೆ ರೂಪುಗೊಂಡರೆ ಹಲವು ಸಮಸ್ಯೆಗಳಿಗೆ ಮಾರ್ಗಗಳು ತನಗೆ ತಾನೇ ತೆರೆದುಕೊಳ್ಳುತ್ತವೆ.

ಡಾ. ಆರ್. ಸುನಂದಮ್ಮ, ಸಮತಾ ಅಧ್ಯಯನ ಕೇಂದ್ರದ ಸದಸ್ಯೆ, ಮೈಸೂರು.

ಲಿಂಗ ಸಮಾನ ಕಾನೂನು ರಾಷ್ಟ್ರೀಯ ವಿಷಯವಾಗಬೇಕು

ಇಂದಿರಾ ಜೈಸಿಂಗ್

ಸುಪ್ರೀಂಕೋರ್ಟ್ ವಕೀಲರಾದ ಇಂದಿರಾ ಜೈಸಿಂಗ್ ಅವರು ಮಹಿಳಾ ಚಳುವಳಿ, ಕಾರ್ಮಿಕ ಸಂಘಟನೆಗಳಲ್ಲಿ ಸಕ್ರೀಯವಾಗಿ ದುಡಿಯುತ್ತಿದ್ದಾರೆ. ಲಾಯರ್ಸ್ ಕಲೆಕ್ಟಿವ್ ಎಂಬ ಪತ್ರಿಕೆಯಲ್ಲೂ ಕೆಲಸ ಮಾಡುತ್ತಿದ್ದಾರೆ. ಇತ್ತೀಚೆಗೆ ಬೆಂಗಳೂರಿಗೆ ಬಂದಿದ್ದ ಇಂದಿರಾ ಅವರನ್ನು ಮಾನಸ ಸದಸ್ಯೆ ನೀಲಾಂಜನ ಸಂದರ್ಶಿಸಿದರು. ಸಂದರ್ಶನವನ್ನು ಮಾನಸದ ಓದುಗರಿಗಾಗಿ ಪ್ರಕಟಿಸುತ್ತಿದ್ದೇವೆ. ಪ್ರತಿಕ್ರಿಯೆಗಳು ಸ್ವಾಗತಾರ್ಹ.

ಪ್ರ 1 : ನಾವು ಸಾಮಾನ್ಯ ಲಿಂಗ ಸಮಾನ ನಾಗರೀಕ ಸಂಹಿತೆಯನ್ನು ಪ್ರಬಲವಾಗಿ ಬೆಂಬಲಿಸುತ್ತೀರಿ. ಅದನ್ನು ಸದ್ಯದ ಕೋಮುವಾದಿ, ಬಾಬರಿ ಮಸೀದಿ ನಂತರದ ಪರಿಸ್ಥಿತಿಯಲ್ಲಿ ಹೇಗೆ ನೋಡುತ್ತೀರಿ? ವಯಕ್ತಿಕ ಕಾನೂನಿನಲ್ಲಿರುವ ತಾರತಮ್ಯವನ್ನು ಹೋಗಲಾಡಿಸಲು ಮಹಿಳಾ ಚಳುವಳಿಯು ಯಾವ ಕಾರ್ಯ ತಂತ್ರವನ್ನು ರೂಪಿಸಿಕೊಳ್ಳಬೇಕು?

ಇಂದಿರಾ ಜೈಸಿಂಗ್ : ನಮ್ಮ ಬೇಡಿಕೆಯನ್ನು ಬಿ.ಜೆ.ಪಿ.ಯವರು ಸಂಪೂರ್ಣವಾಗಿ Co-opt ಮಾಡಿಕೊಂಡಿರುವುದು ಮಹಿಳಾ ಚಳುವಳಿಯ ವಿಫಲತೆಯನ್ನು ತೋರಿಸುತ್ತದೆ. ಲಿಂಗ ಸಮಾನ ಸಂಹಿತೆ ಬಗ್ಗೆ ನಮ್ಮ ಅಭಿಪ್ರಾಯಗಳನ್ನು ಸ್ಪಷ್ಟ ಮಾತುಗಳಲ್ಲಿ ಪ್ರಚಾರ ಮಾಡದೆ ಇದ್ದುದೆ ವಿಫಲತೆಗೆ ಕಾರಣ. ಈ ನಿಟ್ಟಿನಲ್ಲಿ ಬಿ.ಜೆ.ಪಿ. ಮಾತನಾಡುತ್ತಿರುವುದರಿಂದ ಸಮಾನ ಕಾನೂನನ್ನು ಕುರಿತು ಇನ್ನೂ ಹೆಚ್ಚಿನ ಚರ್ಚೆಯ ಅಗತ್ಯವಿದೆ. ನಮ್ಮ ದೃಷ್ಟಿಕೋನ, ಸಮಾನತೆ, ಮಹಿಳೆಯರಿಗಾಗಿ ಒಂದು ಸ್ಪಷ್ಟವಾದ (Positive) ಕಾರ್ಯಕ್ರಮವನ್ನು ಎತ್ತಿ ಹಿಡಿಯುವ, ಸ್ಪಷ್ಟ ಪಡಿಸುವ ವಿಶಾಲ ಚರ್ಚೆಯನ್ನು ನೀವು ಪ್ರಾರಂಭಿಸಿದರೆ ಆಗ ಬಿ.ಜೆ.ಪಿ.ಯನ್ನು ಸುಲಭವಾಗಿ ಸುಳ್ಳೆಂದು ಕರೆಯಬಹುದು. ಮತ್ತು ಅದರ ಅಗತ್ಯವೂ ಇದೆ. ಬಿ.ಜೆ.ಪಿಯನ್ನು ಬಯಲಿಗೆಳೆಯುವ ಮಹತ್ತರ ಅಗತ್ಯವಿದೆ. ಆದರೆ ಅದಕ್ಕೂ ಮೊದಲು ವಿಷಯ ಕುರಿತು ಸ್ಪಷ್ಟತೆಯನ್ನು ಪಡೆದುಕೊಳ್ಳುವ ಅಗತ್ಯವಿದೆ. ಮಹಿಳಾ ಚಳುವಳಿಯು ಈ ವಿಷಯವನ್ನು ಮಹಿಳೆಯರ ವಿಷಯ ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಆನಂತರವೆ ಹೇಗೆ ಪಡೆದುಕೊಳ್ಳಬೇಕೆಂಬ ತಂತ್ರದ (Strategy) ಪ್ರಶ್ನೆ ಬರುವುದು. ಇದು ಅಷ್ಟೇನೂ ಮುಖ್ಯವಲ್ಲ.

ವಯಕ್ತಿಕ ಕಾನೂನಷ್ಟೇ ಬೇಕು ಎಂಬುದಕ್ಕೆ ಸ್ಥಳೀಯ ಮಟ್ಟದಲ್ಲಿ ಪ್ರಯತ್ನಗಳಾದವು ಅವು ಸ್ಥಳೀಯ ಹಂತದಲ್ಲೇ ಉಳಿದುಕೊಂಡವು. ಲಿಂಗ ಸಮಾನ ಕಾನೂನಿನ ವಿಷಯವನ್ನು ರಾಷ್ಟ್ರೀಯ ವಿಷಯವನ್ನಾಗಿ ಪರಿಗಣಿಸುವ ಅಗತ್ಯವಿದೆ.

ಪ್ರ 2 : ಮಹಿಳಾ ಚಳುವಳಿಯಲ್ಲಿ ಕೆಲವರು ಸಮಾನ ನಾಗರೀಕ ಸಂಹಿತೆ ಕುರಿತಂತೆ ಅನೇಕತೆಯ ನಿಲುವನ್ನು ತೆಗೆದುಕೊಳ್ಳುತ್ತಿದ್ದಾರೆ. ಈ ಅಲೆಯನ್ನು ನೀವು ಹೇಗೆ ನೋಡುತ್ತೀರಿ?

ಇಂದಿರಾ ಜೈಸಿಂಗ್ : ಅನೇಕತೆಯ ಬಗ್ಗೆ ಮಾತನಾಡುತ್ತಿರುವುದು ಮುನ್ನಡೆಯೇ ಹೌದು. ಅದು ಚರ್ಚೆಯಿಂದ ಬಂದಂತಹುದು, ಅದೊಂದು ಆರೋಗ್ಯಕರ ಲಕ್ಷಣ. ಆದರೆ ಕೆಲವು ವಿಶಯಗಳು ಸಂಧಾನ ನಡೆಸಲಾಗದಂತಹವುಗಳು (Non-negotiable) ಅಂತಹ ವಿಷಯಗಳ ಬಗ್ಗೆ ಅನೇಕತೆ ದೃಷ್ಠಿಯಿಂದ ಮಾತನಾಡುವುದು ಅರ್ಥವಿಲ್ಲದ್ದು. ವಿಷಯ ಕುರಿತು ಸಂಪೂರ್ಣವಾದ ಸಾರ್ವಜನಿಕ ಚರ್ಚೆಯಾಗಬೇಕೆಂದು ಹೇಳಿದರೂ ಸಂಧಾನ ಸಾಧ್ಯವಿಲ್ಲದ ಭಾಗಗಳು ವಯಕ್ತಿಕ ಕಾನೂನಿನಲ್ಲಿವೆ.

ಪ್ರಶ್ನೆ 3 : ಸಾಮಾನ್ಯ ಸಮಾನ ನಾಗರೀಕ ಸಂಹಿತೆ ಕಾರ್ಯಕ್ರಮವನ್ನು ಕೋ-ಆಪ್ಟ್ (Co-opt) ಮಾಡಿಕೊಂಡುದರ ಜೊತೆಗೆ ಬಿಜೆಪಿಯು ಮಹಿಳೆಯರಿಗಾಗಿ ಒಂದು ವಿಸ್ತಾರವಾದ ಕಾರ್ಯಕ್ರಮದ ಭರವಸೆಯನ್ನು ತನ್ನ ಪ್ರಣಾಳಿಕೆಯಲ್ಲಿ ನೀಡಿದೆ. ಆ ಪಕ್ಷದ ಕೋಮುವಾದಿ ಇತಿಹಾಸದ ಹಿನ್ನಲೆಯಲ್ಲಿ ಈ ಚುನಾವಣಾ ಆಶ್ವಾಸನೆಯನ್ನು ನೀವು ಹೇಗೆ ನೋಡುತ್ತೀರಿ?

ಇಂದಿರಾ ಜೈಸಿಂಗ್ : ಬಿ.ಜೆ.ಪಿ.ಯ ಆಶ್ವಾಸನೆಯನ್ನು ದಿನ ನಿತ್ಯದ ವಾಸ್ತವಿಕತೆಯಿಂದ ದೂರವಿಟ್ಟು ನೋಡಬೇಕು. ಈ ಚುನಾವಣೆ ಆಶ್ವಾಸನೆಗಳಿಗೆ ನಾನು ಪ್ರಾಮುಖ್ಯತೆ ನೀಡುವುದಿಲ್ಲ. ಮತಗಳಿಕೆಯಷ್ಟೇ ಈ ಆಶ್ವಾಸನೆಗಳ ಉದ್ದೇಶ. ಅದಕ್ಕಿಂತ ಯಾವುದೇ ಪಕ್ಷಗಳ, ಅಥವಾ ಪಕ್ಷಗಳ ಕೂಟದ ಬದ್ಧತೆಯನ್ನು ಅವರ ಕಾರ್ಯದ ಮೂಲಕ ಪರೀಕ್ಷಿಸುವೆ. ಅಲ್ಲದೆ ಬಿ.ಜೆ.ಪಿಯು ಮಹಿಳಾ ಸಮಾನತೆ ಕುರಿತಂತೆ ಎಂದಾದರು ಹೇಳಿದಂತೆ ನಡೆದುಕೊಂಡಿದೆಯೇ ಅವರನ್ನು ನಂಬಲು.

ಪ್ರಶ್ನೆ 4 : ರಾಜಕೀಯದಲ್ಲಿ ಮಹಿಳಾ ಮೀಸಲಾತಿ ಬೇಕೆಂಬ ಬೇಡಿಕೆಯನ್ನು ನೀವು ಹೇಗೆ ನೋಡುತ್ತೀರಿ? ನಿರ್ದಿಷ್ಟವಾಗಿ ಜಾತಿ ಆಧಾರಿತ ಮೀಸಲಾತಿ ಕುರಿತು ಏನು ಹೇಳುತ್ತೀರಿ?

ಇಂದಿರಾ ಜೈಸಿಂಗ್ : ಮೀಸಲಾತಿ ಬೇಡಿಕೆಯನ್ನು ಒಂದು ಮುಖ್ಯ ಬೇಡಿಕೆ ಎಂದೇ ನಾನು ಪರಿಗಣಿಸುತ್ತೇನೆ. ಮೀಸಲಾತಿಯು ಸಮಾನತೆಯೆಡೆಗಿನ ಒಂದು ಮುಖ್ಯ ಹಾದಿ ಎಂದು ಭಾವಿಸಿದ್ದೇನೆ. ರಾಜಕೀಯ ವೇದಿಕೆಯಲ್ಲಾಗಲಿ, ಉದ್ಯೋಗದಲ್ಲಾಗಲಿ ಮೀಸಲಾತಿಯನ್ನು ತರುವ ಮೂಲಕ, ಸ್ವತಂತ್ರವಾದ ಖಂಡಿತವಾದ ಕ್ರಿಯೆಯ ಮೂಲಕ, ಇತಿಹಾಸದ ತಪ್ಪುಗಳನ್ನು ಸರಿಪಡಿಸುವ ಮೂಲಕವಷ್ಟೇ ಸಮಾನತೆಯನ್ನು ಪಡೆಯಬಹುದು. ಆದ್ದರಿಂದಲೆ ಮಹಿಳಾ ಮೀಸಲಾತಿಯನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ.

ಮೀಸಲಾತಿಯೊಳಗಿನ ಮೀಸಲಾತಿ ಕುರಿತಂತೆ ಹೇಳಬೇಕೆಂದರೆ ಈ ದೇಶದಲ್ಲಿ ಜಾತಿ ಇನ್ನೂ ನಿಷೇಧಿಸಲ್ಪಟ್ಟಿಲ್ಲ. ಜಾತಿ ಎಂಬುದು ವಾಸ್ತವವಾಗಿ, ಕಾನೂನಿನ ವಿಷಯವಾಗಿ ಉಳಿದುಕೊಂಡಿದೆ. ಆಗ ಕೆಲವು ಜಾತಿಯ ಮಹಿಳೆಯರ ಪ್ರಾತಿನಿಧ್ಯ ಸಾಮಾನ್ಯ ಮಹಿಳಾ ಮೀಸಲಾತಿ ಕೋಟಾದಲ್ಲಿ ಇರಬೇಕೆ ಎಂಬ ಪ್ರಶ್ನೆ ಬರುತ್ತದೆ. ಉತ್ತರ ಹೌದು ಎಂದು ನಾನು ಹೇಳುತ್ತೇನೆ. ಅಂದರೆ ಶ್ರೇಣಿಯೊಳಗಿನ ಶ್ರೇಣಿಗಳನ್ನು ಮುರಿಯುವ ಅಗತ್ಯವಿದೆ.

ಪ್ರಶ್ನೆ 5 : ನೀವು ಟ್ರೇಡ್ ಯೂನಿಯನ್‌ಗಳಲ್ಲೂ, ಮಹಿಳಾ ಚಳುವಳಿಯಲ್ಲಿ ಸಕ್ರೀಯವಾಗಿದ್ದೀರಿ. ಸದ್ಯದ ಜಾಗತೀಕರಣದ ಹಿನ್ನೆಲೆಯಲ್ಲಿ ಕಾರ್ಮಿಕ ವರ್ಗ ಮತ್ತು ಮಹಿಳಾ ಚಳುವಳಿಯ ನಡುವೆ ಯಾವ ರೀತಿಯ ಮೈತ್ರಿ ಅಗತ್ಯವಿದೆಯೆಂದು ನಿಮಗನಿಸುತ್ತದೆ?

ಇಂದಿರಾ ಜೈಸಿಂಗ್ : ಭವಿಷ್ಯದಲ್ಲಿ ಹೆಚ್ಚು ಹೆಚ್ಚು ಮೈತ್ರಿಯ ಅಗತ್ಯವಿದೆಯೆಂದು ನಾನು ಭಾವಿಸುತ್ತೇನೆ. ಜಾಗತೀಕರಣವು ಖಂಡಿತ ಅಭಿವೃದ್ಧಿ ಪಥದಲ್ಲಿ ನಿಮ್ಮನ್ನು ಒಯ್ಯುವುದಿಲ್ಲ. ತಮ್ಮದೇ ಪ್ರತ್ಯೇಕ ಕಾರಣಗಳಿಗಾಗಿ ಜಾಗತೀಕರಣದ ವಿರುದ್ಧ ಹೋರಾಡುತ್ತಿರುವವರೆಲ್ಲರ ನಡುವೆ ಮೈತ್ರಿಯನ್ನು ನೀವು ಬೆಳಸಬೇಕಾಗುತ್ತದೆ.

ಪ್ರಶ್ನೆ 6 : ಇತ್ತೀಚೆಗೆ ಸುಪ್ರೀಂ ಕೋರ್ಟ್, ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳವನ್ನು ತಡೆಯಲು ಮಾರ್ಗದರ್ಶಿಗಳನ್ನು ನೀಡಿದೆ. ಅದನ್ನು ಹೇಗೆ ಪರಿಣಾಮಕಾರಿಯಾಗಿಸಬಹುದು?

ಇಂದಿರಾ ಜೈಸಿಂಗ್ : ಮಾರ್ಗದರ್ಶಿಗಳು ತಂತಾನೆ ಜಾರಿಗೆ ಬರುವುದಿಲ್ಲ. ಕಾನೂನಾಗಿಸುವ ಅಗತ್ಯವಿದೆ. ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳವನ್ನು ಉದ್ದೇಶಿಸಿದ ಕಾನೂನಿಲ್ಲ ಎಂದು ಸುಪ್ರೀಂ ಕೋರ್ಟ್ ಕೂಡ ಗುರುತಿಸಿದೆ. ಅದನ್ನು ಕಾನೂನಾಗಿ ಮಾಡಲು ಒತ್ತಡ ತಂದಾಗ, ಕಾನೂನಾದಾಗಷ್ಟೇ ಅದನ್ನು ಜಾರಿಗೊಳಿಸುವ ಪ್ರಶ್ನೆ ಬರುವುದು. ಜಾರಿಗೊಳಿಸುವುದನ್ನು ಫ್ಯಾಕ್ಟರಿ ಹಂತದ ಕಮಿಟಿಗಳು, ಸ್ಥಳೀಯರ ಆಸಕ್ತಿ, ಟ್ರೇಡ್ ಯೂನಿಯನ್‌ಗಳ ಮೂಲಕ ಮಾಡಬಹುದು. ಅಂತಿಮವಾಗಿ ಮಹಿಳೆಯರು ತಾವೂ ಲೈಂಗಿಕ ಕಿರುಕುಳವನ್ನು ವಿರೋಧಿಸಬೇಕೆಂಬ ಪ್ರಜ್ಞೆ ಬೆಳೆಸಿಕೊಳ್ಳಬೇಕು. ಲೈಂಗಿಕ ಕಿರುಕುಳದ ರೋಗ ಲಕ್ಷಣ (syndrome)ಗಳಿಗೆ ತಾವೆ Co-opt ಆಗಿ ಬಿಡಬಾರದು. ಗಂಡಸರನ್ನು ಓಲೈಸುವ ಮೂಲಕವಷ್ಟೇ ತಮ್ಮ ಹುದ್ದೆಯಲ್ಲಿ ಉನ್ನತಿ ಸಾಧಿಸಲು ಸಾಧ್ಯ ಎಂಬಂತಹ Mind-Set (ರೂಢಿಗತ ಮನಸ್ಥಿತಿ)ಅನ್ನು ಒಪ್ಪಿಕೊಳ್ಳುವುದನ್ನು ಪ್ರಜ್ಞಾಪೂರಕವಾಗಿ ವಿರೋಧಿಸಬೇಕು. ಮಹಿಳೆಯರು ಸಮಾನತೆಯ ಭಾವನೆಯನ್ನು ಹೊಂದಿದಾಗಷ್ಟೇ ಏನಾದರು ಮಾಡಲು ಸಾಧ್ಯ. ಲೈಂಗಿಕ ಕಿರುಕುಳವನ್ನು ತಡೆಯಲು ಸಾಧ್ಯ.

ಪ್ರಶ್ನೆ 6 : ಮುಖ್ಯ ವಿಷಯಗಳಿಗೆ ಸಂಬಂಧಪಟ್ಟಂತೆ ಮಹಿಳಾ ಚಳುವಳಿಯು ಕಾನೂನಿನ ಕ್ರಮವನ್ನೆ ಅವಲಂಬಿಸಿದೆ. ಆ ಹಕ್ಕಿಗಾಗೇ ಹೋರಾಟ ನಡೆಸಿದೆ. ಉತ್ತರವಾಗಿ ಸರ್ಕಾರ ಸೂಕ್ತವಾದ ಸೌಲಭ್ಯಗಳನ್ನು ನೀಡದೆ ಕಾಯಿದೆಗಳನ್ನು ಚೂರು ಚೂರಾಗಿ ನೀಡಿದೆ. ಕಾನೂನಿನ ಕ್ರಮದ ಪ್ರಾಮುಖ್ಯತೆಯನ್ನು ಅಲ್ಲಗೆಳೆಯಲಾಗದಿದ್ದರೂ ಕೆಲವೊಮ್ಮೆ ರಾಜಕೀಯ ಕೊನೆಯನ್ನು ಮುಟ್ಟಿಬಿಟ್ಟಿದ್ದೇವೆನಿಸುತ್ತದೆ. ಈ ದ್ವಂದ್ವವನ್ನು ಯಾವ ರೀತಿ ನೋಡುತ್ತೀರಿ?

ಇಂದಿರಾ ಜೈಸಿಂಗ್ : ಈ ದ್ವಂದ್ವದಿಂದ ಹೊರಬರಬೇಕಾದರೆ ಕಾನೂನಿನ ಕ್ರಮವನ್ನು ನೀವು ಅರ್ಥಮಾಡಿಕೊಳ್ಳುವ ಅಗತ್ಯವಿದೆ. ಇಲ್ಲದಿದ್ದರೆ ದ್ವಂದ್ವ ಯಾವಾಗಲೂ ಉಳಿಯುತ್ತದೆ. ಮಹಿಳಾ ಚಳುವಳಿ ಕಾನೂನಿನ ಕ್ರಮದ ಪ್ರಾಮುಖ್ಯತೆಯನ್ನು ಗುರುತಿಸುವುದನ್ನೆ ತಿರಸ್ಕರಿಸಿದೆ ಎಂದು ನನಗನ್ನಿಸಿದೆ. ಸಶಕ್ತತೆಗೆ ಅದೊಂದು ಮುಖ್ಯ ಸಾಧನ ಎಂದು ನಾನಂದುಕೊಂಡಿರುವೆ. ಆ ಬಗ್ಗೆ ನಿಮಗೆ ಸ್ಪಷ್ಟವಾದರೆ ನಂತರ ಜಾರಿಗೊಳಿಸಲು ಪ್ರಜಾಸತ್ತಾತ್ಮಕವಾದ ರಚನೆಗಳನ್ನು ಕಟ್ಟುವ ಪ್ರಶ್ನೆ ಬರುತ್ತದೆ.

ನೀವು ಗುರುತಿಸುವಿರೊ ಇಲ್ಲವೊ ಅದು ನಡೆಯುತ್ತಿದೆ. 10 ವರ್ಷಗಳ ಹಿಂದಕ್ಕೆ ಹೋಲಿಸಿದರೆ ಎಲ್ಲಾ ರಾಜ್ಯಗಳಲ್ಲೂ ಮಹಿಳಾ ಆಯೋಗಗಳು ಬಂದಿರುವುದು ಒಂದು ದೊಡ್ಡ ಹೆಜ್ಜೆ. ಸರ್ಕಾರ ಮಹಿಳಾ ಆಯೋಗಗಳನ್ನು ಪ್ರಾರಂಭಿಸುವುದೆಂದರೆ ಏನು ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಸರ್ಕಾರೇತರ ಸಂಸ್ಥೆಗಳು ಈ ಆಯೋಗಗಳಲ್ಲಿ ಹೆಚ್ಚು ಭಾಗವಹಿಸಬೇಕೆಂದು ಕೇಳಬೇಕು. ಇದು ಮಹಿಳಾ ಚಳುವಳಿಯೇ ಆಯೋಗಗಳನ್ನು ಬಹಿಷ್ಕರಿಸಿದರೆ ಸಾಧ್ಯವಾಗುವುದಿಲ್ಲ. ಗ್ರಾಸ್ ರೂಟ್ ಲೆವಲ್ ಸಂಸ್ಥೆಗಳು, ಮಹಿಳೆ ಮತ್ತು ರಾಜ್ಯದ ನಡುವಿನ ಬಿರುಕನ್ನು ಮುಚ್ಚಲು ಆಯೋಗಗಳು ಮುಖ್ಯ ಸಾಧನಗಳು. ಕಾರಣ ಲೋಕಸಭೆ, ವಿಧಾನ ಸಭೆಗಳಲ್ಲಿ ಅವಕ್ಕೆ ಪಾತ್ರವಿದೆ. ಅವುಗಳನ್ನು ಪ್ರತಿಗಾಮಿಗಳೆಂದು ಹಣೆಪಟ್ಟಿ ಅಂಟಿಸುವ ಅಥವಾ ಬಹಿಷ್ಕರಿಸುವ ಬದಲು ಆಯೋಗಗಳಿಂದಾಗುವ ಪ್ರಯೋಜನಗಳನ್ನು ನಾವು ಗುರುತಿಸಲೇಬೇಕಾಗುತ್ತದೆ. ಸರ್ಕಾರೇತರ ಸಂಸ್ಥೆಗಳ ಮೂಲಕ ನಾವು ಮಧ್ಯ ಪ್ರವೇಶಿಸಿ ನಮ್ಮ ಭಾಗವಹಿಸುವಿಕೆಯನ್ನು ಮಹತ್ವವಾಗಿಸಬೇಕು. ಆಗ ರಾಜ್ಯ ನಮ್ಮನ್ನು ಗುರುತಿಸಲೇ ಬೇಕಾಗುತ್ತದೆ. ನಮ್ಮ ಪಾತ್ರಗಳನ್ನು, ವ್ಯವಸ್ಥೆಯ ಹೊರಗೆ ನಿಂತು ಟೀಕಿಸುವುದಕ್ಕಷ್ಟೆ ಸೀಮಿತಗೊಳಿಸಿದರೆ ನಾವು ಎಲ್ಲಿಗೂ ಸಾಗುವುದಿಲ್ಲ. ಒಂದು ರೀತಿಯಲ್ಲಿ ಯಾವ ಮಟ್ಟದಲ್ಲಾದರೂ ನಾವು ಇಡಿ ರಾಜ್ಯ ವ್ಯವಸ್ಥೆಯ ಭಾಗವಾಗಬೇಕು. ಸರ್ಕಾರೇತರ ಸಂಸ್ಥೆಯಾಗಿಯು ಸಹ ರಾಜ್ಯ ವ್ಯವಸ್ಥೆಯೊಳಗೆ ಮಧ್ಯ ಪ್ರವೇಶಿಸಬೇಕು.

ಪ್ರಶ್ನೆ 7 : ಕಾನೂನುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಮಹಿಳಾ ಚಳುವಳಿಯು ಸರ್ಕಾರದೊಂದಿಗೆ ಸಹಯೋಗ ಮಾಡಿಕೊಳ್ಳಬೇಕೆಂದು ನೀವು ಹೇಳುತ್ತೀರಿ. ಆದರೆ ಸರ್ಕಾರವೆ ಮಹಿಳಾ ವಿರೋಧಿ ವ್ಯವಸ್ಥೆಯಾಗಿ ಕೆಲಸ ಮಾಡುತ್ತದೆ. ಸರ್ಕಾರದೊಂದಿಗಿನ ಸಹಯೋಗ, ಜೊತೆಯಲ್ಲಿ ಅದರ ವಿರುದ್ಧ ಹೋರಾಟ ಇವೆರಡನ್ನು ನೀವು ಹೇಗೆ ಗ್ರಹಿಸುತ್ತೀರಿ?

ಇಂದಿರಾ ಜೈಸಿಂಗ್ : ಅದು ನಿಮ್ಮ ಪ್ರಜ್ಞೆಯನ್ನು ಅವಲಂಬಿಸಿದೆ. ವ್ಯವಸ್ಥೆಯೊಳಗೆ Co-opt ಆಗಿ ಬಿಡುವುದನ್ನು ನೀವು ವಿರೋಧಿಸಬೇಕು. ನಿಮ್ಮ ಗುರಿ ಸ್ಪಷ್ಟವಾಗಿದ್ದರೆ, ಎತ್ತ ಸಾಗಬೇಕೆಂಬುದು ನಿಚ್ಚಳವಾಗಿದ್ದರೆ ಆ ದಾರಿಗೆ ನೀವು ಅಂಟಿಕೊಳ್ಳಬೇಕು, ನಿಮ್ಮ ದಾರಿಯು ಸ್ಪಷ್ಟವಾಗಿದ್ದರೆ ನಿಮ್ಮನ್ನು ನೀವು Co-opt ಆಗಲು ಬಿಡುವುದಿಲ್ಲ, ನಿಮ್ಮ ಪಾತ್ರ ಜಾರಿಗೊಳಿಸುವವರದಾಗಿದ್ದರೂ ಸಹ.

●

BOOK-POST
PRINTED MATTER

REGD NO. KRNA 271

ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067